ಸಕ್ಕದಮಂ ಪೇೞ್ವೊಡೆ ನೆರೆ

ಸಕ್ಕದಮಂ ಪೇೞ್ವೊಡೆ ನೆರೆ। ಸಕ್ಕದಮಂ ಪೇೞ್ಗೆ ಶುದ್ದ ಕನ್ನಡದೊಳ್। ತಂದಿಕ್ಕುವುದೇ ಸಕ್ಕದಮಂ ತಕ್ಕುದೆ। ಬೆರೆಸಲ್ಕೆ ಘೃತಮುಮಂ ತೈಲಮುಮಂ॥

ಸುಲಿದ ಬಾಳೆಯ ಹಣ್ಣಿನಂದದಿ

ಸುಲಿದ ಬಾಳೆಯ ಹಣ್ಣಿನಂದದಿ। ಕಳೆದ ಸಿಗುರಿನ ಕಬ್ಬಿನಂದದಲಿ। ಅಳಿದ ಉಷ್ಣದ ಹಾಲಿನಂದದಿ। ಸುಲಭವಾಗಿರ್ಪ॥ ಲಲಿತವಹ ಕನ್ನಡದ ನುಡಿಯಲಿ। ತಿಳಿದು ತನ್ನೊಳು ತಾನು ಮೋಕ್ಷವ। ಗಳಿಸಿಕೊಂಡರೆ ಸಾಲದೇ ಸಂಸ್ಕೃತದಲ್ಲಿನ್ನೇನು॥

ಆರತಿ

ಆರತಿಯು ನಿನಗಮ್ಮ — ರಾಗ: ಸಾರಂಗ

ಆರತಿಯು ನಿನಗಮ್ಮ। ಆರತಿಯು ನಿನಗೆ। ಕನ್ನಡದ ಕುಲಜನರ ಮುಕ್ಕೋಟಿ ಮಕ್ಕಳ। ಆರತಿಯು ನಿನಗೆ। ದೀಪದಾರತಿಯು ನಿನಗೆ॥ಪ॥ ಹಸಿರು ಉಯ್ಯಾಲೆಯಲಿ। ಹೊಸ ಮಲ್ಲಿಗೆ ಹರಡಿ। ಭುವಿಗೊಡತಿ ನೀನೆಂದು। ಭುವನೇಶ್ವರಿ ಎಂದು॥1॥ ಕನ್ನಡದ ಕಸ್ತೂರಿ ತಿಲಕವಿಟ್ಟು। ಕರ್ನಾಡ ದೇಗುಲದಿ ನಿನ್ನ ಇಟ್ಟು। ಕನ್ನಡಾಂಬೆಯು ನೀನು। ಹರಸು ಶುಭ ನಮಗೆಂದು॥2॥

ದೇಶಭಕ್ತಿಗೀತೆಗಳು

ಪ್ರಾರ್ಥನೆ

ಎಲ್ಲರಿಗೂ ಉಣಿಸಿ ತಿನಿಸಿ — ರಾಗ: ಮೋಹನ

ಎಲ್ಲರಿಗೂ ಉಣಿಸಿ ತಿನಿಸಿ ಎಲ್ಲರ ಕಂಬನಿಯನೊರೆಸಿ। ಎಲ್ಲೆಡೆಗೂ ಪ್ರೀತಿ ಹೂವ ಅರಳಿಸಿರುವ ಭಾರತಿ॥ಪ॥ ಸಲ್ಲದುದನು ಸಹಿಸದಾಕೆ ಸತ್ಯಧರ್ಮ ಎಡಕೆ ಬಲಕೆ। ಪಲ್ಲವಿಸಿಹ ದಯಾದೃಷ್ಟಿ ನಿನ್ನ ಕೀರುತಿ॥1॥ ನೂರು ಹಕ್ಕಿ ಉಲಿವ ತೋಟ ನೂರು ಬಣ್ಣ ಬೆಡಗು ನೋಟ। ಉತ್ತಮಿಕೆಯ ಬೆಳೆದು ಸುತ್ತಿ ಸುಳಿವ ಸಂಸ್ಕೃತಿ॥2॥ ನಿನ್ನಿಂದಲೆ ನಮಗೆ ಹೆಸರು ನೀನೆ ತಾಯಿ ನಮ್ಮ ಉಸಿರು। ನಿನ್ನ ಬೆಳಕೆ ನಮ್ಮ ಬೆಳಕು ನಮೋ ಭಾರತಿ॥3॥ ನಮ್ಮೆಲ್ಲರ ಮತವು ಬೇರೆ ನಮ್ಮೆಲ್ಲರ ಭಾಷೆ ಬೇರೆ। ನಮ್ಮೆಲ್ಲರ ತಾಯಿ ನೀನು ನಮೋ ಭಾರತಿ॥4॥

ಜನನೀ ಜನ್ಮಭೂಮಿ ಭಾರತಮಾತೆ — ರಾಗ: ಅಭೇರಿ

ಜನನೀ ಜನ್ಮಭೂಮಿ ಭಾರತಮಾತೆ। ನಿನ್ನೊಡಲಲಿ ಜನಿಸಿಹ ನಾವೇ ಧನ್ಯ ನಿನ್ನ ಮಡಿಲಲಿ ಇರುವುದೇ ನಮಗೆ ಮಾನ್ಯ॥ಪ॥ ನಿನ್ನ ಕುವರರ ಬೆಳೆಸಿದ ಧೀಮಂತೆ। ನಿನ್ನ ಕರುಣೆಯು ನಮಗೆ ಸ್ಥಿರವಂತೆ। ನಿನ್ನ ಕೊಡಗೆಯು ನದಿಗಳ ವರಮಾಲೆ। ನವರತ್ನಗಳಡಗಿದ ಗಿರಿಸಾಲೆ॥1॥ ನಿನ್ನ ಕುವರರಲಿ ಭೇದವು ಇರಬಹುದು। ಸಂಸ್ಕೃತಿ ಕಲೆಯಲಿ ಭಿನ್ನವಹುದು। ಆದರು ನಿನ್ನ ಸಂತತಿ ಒಂದಿಹುದು। ನಾವು ತೊಡುವೆವು ಪಣವನು ಇಂದು॥2॥ ನಮಗಿಲ್ಲಿ ಇಲ್ಲ ಯಾವುದು ಕೊರತೆ। ಎಲ್ಲವ ನೀಡಿಹೆ ನೀ ದಯಾವಂತೆ। ನಿನಗಾಗಿ ದುಡಿವುದೇ ನಮ್ಮೆಲ್ಲರ ಚಿಂತೆ। ನಮಿಪೆವು ನಾವು ಭಾರತ ಮಾತೆ॥3॥

ಜಯತಿ ಜಯತಿ ಭಾರತ ಮಾತಾ **ರಾಗ: ಬೇಹಾಗ್**

ಜಯತಿ ಜಯತಿ ಭಾರತ ಮಾತಾ ಬುಧ ಗೀತ। ನಿಖಿಲಮತ ವನ ನಿರತ ನತಜನ ಸುಖಿತಾ। ಜಯತೀ ಜಯತೀ ಜಯತೀ।।ಪ।। ಸಕಲ ಜೀವ ಸಮತ ಸಾಧು ಸಾಧು ವಿಹಿತ (2ಸಾರಿ) ಅಖಿಲ ಲೋಕ ಪ್ರತಿತ ಪರಮಾನಂದ ಸಮುದಿತಾ।।1।। ಅಗಣಿತ ಗುಣಶೀಲ, ಅತಿದಯಾಲವಾಲಾ।(2ಸಾರಿ) ಪ್ರಕಟಿತ ಶುಭ ಜಾಲಾ, ಪತಿತ ಪ್ರಾಣಲೋಲ।।2।।

ದೇವಿ ಭುವನ ಮನ ಮೋಹಿನಿ **ರಾಗ: ಅಭೇರಿ**

ದೇವಿ ಭುವನ ಮನ ಮೋಹಿನಿ। ನಿರ್ಮಲ ಸೂರ್ಯಕರೋಜ್ವಲ ಧರಣಿ। ಜನಕ ಜನನಿ ಜನನೀ।।ಪ।। ನೀಲ ಸಿಂಧುಜಲ ಧೌತ ಚರಣತಲ। ಅನಿಲ ವಿಕಂಪಿತ ಶ್ಯಾಮಲ ಅಂಚಲ। ಅಂಬರ ಚುಂಬಿತ ಫಾಲ ಹಿಮಾಚಲ।ಶುಭ್ರ ತುಷಾರ ಕಿರೀಟಿಣಿ।।1।। ಪ್ರಥಮ ಪ್ರಭಾತೋದಯ ತವ ಗಗನೇ। ಪ್ರಥಮ ಸಾಮರವ ತವ ತಪೋವನೇ। ಪ್ರಥಮ ಪ್ರಸಾರಿತ ತವ ವನ ಪವನೇ। ಜ್ಞಾನ ಧರ್ಮ ಕೃತ ಕಾವ್ಯವಾಹಿನಿ।।2।। ಚಿರ ಕಲ್ಯಾಣಮಯೀ ತುಮಿ ಧನ್ಯಾ। ದೇಶ ವಿದೇಶೇ ವಿತರಿತ ಅನ್ನಾ। ಜಾಹ್ನವಿ ಜಮುನಾ ವಿಗಲಿತ ಕರುಣಾ। ಪುಣ್ಯ ಪೀಯೂಷ ಸ್ತನ್ಯವಾಹಿನಿ।।3।।

ನಮೋ ದೇವಿ ನಮೋ ತಾಯಿ **ರಾಗ: ಕಾಪಿ**

ನಮೋ ದೇವಿ ನಮೋ ತಾಯಿ ನಮೋ ಭಾರತಮಾತೆ। ನಮೋ ಸತ್ಯ ನಮೋ ನಿತ್ಯ ನಮೋ ಜಗನ್ಮಾತೆ।।ಪ।। ಲೋಕ ಮಲಗಿದಂದು ನೀ ನಟ್ಟ ನಡುರಾತ್ರಿ। ಎಚ್ಚರಾದೆ ಅವಿಶ್ರಾಂತೆಯಾದೆ ಪುನರ್ ರಾತ್ರಿ। ಸರ್ವಕಾಲ ಸರ್ವದೇಶ ಸರ್ವಮೋಕ್ಷ ಮಂತ್ರೆ। ಅಸ್ವತಂತ್ರೆ ಸುಸ್ವತಂತ್ರೆಯಾದೆ ವಿಶ್ವತಂತ್ರೆ।।1।। ಸತ್ಯಶಾಂತಿ ಮುಕ್ತಿಧರ್ಮ ತತ್ವ ಮಹೋದ್ದಾತೆ। ಕಾವ್ಯ ಶಿಲ್ಪ ನೃತ್ಯಗಾನ ಸಕಲ ಕಲಾವೇತ್ತೇ। ಶುದ್ಧೆಯಾಗಿ ಬುದ್ಧಿಯಾಗಿ ತಪಃ ಶಕ್ತಿಯಾಗಿ। ನಡೆಸು ನಮ್ಮನೆಲ್ಲ ಅಮ್ಮ ಪೂರ್ಣಯೋಗಕಾಗಿ।।2।। ಏಳುತಾಯಿ ಬಾಳುತಾಯಿ ಜಗತ್ ಕಲ್ಯಾಣಿ। ಯುಗಯುಗವು ಜಗವನಾಳು ಧರ್ಮ ಚಕ್ರಪಾಣಿ। ದಿಗ್‌ದಿಗಂತರಣಿ ತಮಕ್ಕೆ ನಿನ್ನ ದಿವ್ಯವಾಣಿ। ನಡೆ ಮುಂದೆ ನಡೆ ಇಂದೆ ನಡೆ ಮುಂದೆ ರಾಣಿ।।3।।

ನಮೋ ಭಾರತಮಾತಾ **ರಾಗ: ಮೋಹನ**

ನಮೋ ಭಾರತಮಾತಾ ಸುಜಾತ ನಮೋ ಜಗನ್ಮಾತ।।ಪ।। ಗೋಲಕೊಂಡ ನಿನ್ನ ರತ್ನಕೋಶವಂತೆ। ಕೋಹಿನೂರು ನಿನ್ನ ಜಡೆಯ ಹೂವಂತೆ। ತಾಜ್‌ಮಹಲ್ ನಿನ್ನ ದಿವ್ಯ ಭವನವಂತೆ। ಆಹಾ ಹಾ ನಿನ್ನ ಭಾಗ್ಯವು ಮಾತಾ।।1।। ಬೇಲೂರು ಹಳೇಬೀಡು ಶಿಲ್ಪಕಲಾಸ್ಥಳಗಳಂತೆ। ಮೈಸೂರಿನ ಬೃಂದಾವನ ನಿನ್ನ ಇಂದ್ರಲೋಕವಂತೆ। ಜೋಗ್ ಶಿವನಸಮುದ್ರಗಳು ಜಲಪಾತದ ತಾಣಗಳು। ಆಹಾ ಹಾ ನಿನ್ನ ಭಾಗ್ಯವು ಮಾತಾ।।2।। ತಿಲಕ್, ನವ್ರೋಜಿ, ಧೀರಲಾಲಜಿ। ದಾಸ, ಪಟೇಲ ಮಾಳವ ಶಿವಾಜಿ। ವಿವೇಕಾನಂದ, ಮಹಾತ್ಮರಂಥ। ಮುದ್ದು ಕುಮಾರರ ಹೊಂದಿದ ಮಾತಾ।।3।। ಸತ್ಯ, ಧರ್ಮ, ನಿನ್ನ ಮಾರ್ಗಗಳಂತೆ। ಶಾಂತಿ, ಸ್ನೇಹ ನಿನ್ನ ಜೀವದುಸಿರಂತೆ। ತ್ಯಾಗಕ್ಕಾಗಿ ನೀ ಸಿದ್ಧವಾಗಿರುವೆ। ಲೋಕವೆ ನಿನ್ನ ಕೊಂಡಾಡುತಲಿಹುದು।।4।।

ಭರತಭೂಮಿ ನನ್ನ ತಾಯಿ **ರಾಗ: ಕಾಪಿ**

ಭರತಭೂಮಿ ನನ್ನ ತಾಯಿ ನನ್ನ ಪೊರೆವ ತೊಟ್ಟಿಲು। ಜೀವನವನೆ ದೇವಿಗೆರೆವೆ ಬಿಡುತೆ ಗುಡಿಯ ಕಟ್ಟಲು।।ಪ।। ಸಿಂಧು ಯಮುನೆ ದೇವ ಗಂಗೆ ತಪತಿ ಕೃಷ್ಣೆ ಭದ್ರೆ ತುಂಗೆ। ಸಲಿಲ ತೀರ್ಥ ಪುಣ್ಯರಂಗೆ ಭರತಭೂಮಿ ನನ್ನ ತಾಯಿ।।1।। ಮತದ ಬಿರುಕುಗಳನು ತೊರೆವೆ ನುಡಿಗಳೊಡಕುಗಳನು ಮರೆವೆ। ತೊಟ್ಟ ತೊಡಕುಗಳನು ಬಿರಿವೆ ಭರತಭೂಮಿ ನನ್ನ ತಾಯಿ।।2।। ತುಹಿನ ಗಿರಿಯ ಸಿರಿಯ ಮುಡಿಯ ಗಿರಿಯ ಕಡಲು ತೊಳೆಯುವಡಿಯ। ಪೈರು ಪಚ್ಚೆ ಪಸುರಿನುಡಿಯ

ಭರತ ಭೂಮಿ ನನ್ನ ತಾಯಿ॥3॥ ಭರತ ಭೂಮಿ ನನ್ನ ತಾಯಿ ನನ್ನ ಪೊರೆವ ತೊಟ್ಟಿಲು। ಸ್ವಾತಂತ್ರ್ಯದ ಸ್ವರ್ಗಕೇರೆ ಪುಣ್ಯದೇಣಿ ಮೆಟ್ಟಿಲು॥4॥

ಭಾರತಾಂಬೆಯೆ ಜನಿಸಿ ನಿನ್ನೊಳು **ರಾಗ: ಮೋಹನ**

ಭಾರತಾಂಬೆಯೆ ಜನಿಸಿ ನಿನ್ನೊಳು ಧನ್ಯಳಾದೆನು ದೇವಿಯೆ। ನಿನ್ನ ಪ್ರೇಮದಿ ಬೆಳೆದು ಜೀವವು ಮಾನ್ಯವಾದುದು ತಾಯಿಯೇ॥ಪ॥ ರಾಣಿಯಂದದಿ ಮೆರೆಯೆ ಸಿರಿತನವಿಹುದೊ ಏನೋ ಅರಿಯೆನು। ಕಾಮಧೇನುವಿನಂತೆ ಬಯಸಿದ ಫಲವ ಕೊಡುವೆಯೊ ಅರಿಯೆನು॥ ಎನ್ನ ಅಂಗಗಳೆಲ್ಲವು ನಿನ್ನ ಸೊಂಪನು ಬಲ್ಲವು। ನಿನ್ನ ಸಂಗವೆ ಪರಮ ಮಂಗಳವೆಂಬುದಿನಿತನು ಮರೆಯೆನು॥1॥ ಕುಂದುಕೊರೆತೆಗಳಿಹುವು ನಿನ್ನೊಳು ಎಂಬುವಳಲನು ಬಲ್ಲೆವು। ಹಿಂದಕುಳಿದವಳೆಂಬ ನಿಂದೆಯ ಸಹಿಸಿ ನೊಂದಿಹೆ ಬಲ್ಲೆನು॥ ಆದರೊಲಿಯೆನು ಅನ್ಯರ ಚಿನ್ನವೊಲಿದಿಹ ಧನ್ಯರ। ಕುಂದುಕೊರತೆಗಳಿರಲಿ ಮಹಿಮಳು ನೀನೆ ಅನ್ಯರನೊಲ್ಲೆನು॥2॥ ನಿನ್ನ ಕಂಗಳ ಪುಣ್ಯ ಕಾಂತಿಯೊಳೆನ್ನ ಕಂಗಳ ತೆರೆದೆನು। ನಿನ್ನ ಅಂಕದ ಮಂಗಳಾಂಗಣದಲ್ಲಿ ನಲಿಯುತ ಮೆರೆದೆನು॥ ನಿನ್ನ ಮಹಿಮೆಯ ಬರೆವೆನು। ನಿನ್ನ ಹೆಸರನೆ ಕರೆವೆನು। ನಿನ್ನ ಸೇವೆಯೊಳಳಿವ ಭಾಗ್ಯಕೆ ಸಕಲ ಭಾಗ್ಯವ ತೊರೆವೆನು॥3॥

ಭಾರತ ಜನನೀ ಬಹುಮಾನಿತ **ರಾಗ: ಬೇಹಾಗ್**

ಭಾರತ ಜನನೀ ಬಹುಮಾನಿತ ಜಯ ಶಾಲಿನಿ। ಶ್ರೀನಿಧಿ ರಸಧಾರಿಣಿ ಸ್ವತಂತ್ರಿಣಿ। ಜಯತಿ ಜಯತಿ ಜನನೀ॥ಪ॥ ಪರಿತೋ ಜಲನಿಧಿಲಾಲಿತ। ಉಪರಿಹಿಮಾಚಲ ಪಾಲಿತಾ। ಅಪರಿಮಿತ ಘನಿವಾರಣಗಂಗಾ। ಯಮುನಾದಿನದಿ ಮಾನಿತ। ವರ ನಿಖಿಲ ತನಯ ಸ್ವಾಮೇನಿರತ। ವಿಶ್ವ ಮಹಾಮಹಿ ಭಾವಿತಾ। ವಂದಿತ ಧರ್ಮಚಕ್ರಾಂಕಿತ। ಪೂರ್ಣ ತ್ರಿವರ್ಣಮಹಾಧ್ವಜ ಸೇವಿತಾ। ಏಕಾಮಾತಾ ಏಕಾಕುಲತಾ ನೈಕಮತಾಭಿಮತಾ, ಭಾರತ ಮಾತಾ। ಜಯತೀ ಜಯತೀ ಜಯತೀ॥

ವಂದೇ ಮಾತರಂ (ಬಂಗಾಳಿ) **ರಾಗ: ದೇಶ್**

ವಂದೇ ಮಾತರಂ। ಸುಜಲಾಂ ಸುಫಲಾಂ ಮಲಯಜ ಶೀತಲಾಂ। ಸಸ್ಯ ಶ್ಯಾಮಲಾಂ ಮಾತರಂ॥ಪ॥ ಶುಭ್ರ ಜ್ಯೋತ್ಸ್ನಾ ಪುಲಕಿತಯಾಮಿನಿಂ। ಫುಲ್ಲಕುಸುಮಿತ ದ್ರುಮದಲ ಶೋಭಿನೀಂ। ಸುಹಾಸಿನೀಂ ಸುಮಧುರ ಭಾಷಿಣೀಂ। ಸುಖದಾಂ ವರದಾಂ ಮಾತರಂ॥1॥ ಕೋಟಿ ಕೋಟಿ ಕಂಠ್ ಕಲ್‌ಕಲ್ ನಿನಾದಕಾಲೆ। ಕೋಟಿ ಕೋಟಿ ಭುಜೈರ್ಧೃತ ಕರವಾಲೆ। ಕೇಬಲೇ ಮಾ ತುಮಿ ಅಬಲೆ। ಬಹುಬಲ ಧಾರಿಣೀಂ ಅಮಾಮಿ ತಾರಿಣೀಂ ರಿಪುದಲವಾರಿಣೀ ಮಾತರಂ॥2॥ ತುಮಿ ವಿದ್ಯಾ ತುಮಿ ಧರ್ಮ। ತುಮಿ ಹೃದಿ ತುಮಿ ಮರ್ಮ। ತ್ವಂಹಿ ಪ್ರಾಣಾಃ ಶರೀರೆ। ಬಾಹು ತೇ ತುಮಿ ಮಾ ಶಕ್ತಿ। ಹೃದಯೇ ತುಮಿ ಮಾ ಭಕ್ತಿ। ತೋಮಾರಯಿ ಪ್ರತಿಮಾ ಗಡಿ ಮಂದಿರೇ ಮಂದಿರೇ ॥3॥ ತ್ವಂಹಿ ದುರ್ಗಾ ದಶಪ್ರಹರಣ ಧಾರಿಣೀ। ಕಮಲಾ ಕಮಲದಲ ವಿಹಾರಿಣೀ। ವಾಣೀ ವಿದ್ಯಾದಾಯಿನೀ ನಮಾಮಿ ತ್ವಾಂ। ನಮಾಮಿ ಕಮಲಾಂ ಅಮಲಾಂ ಅತುಲಾಂ। ಸುಜಲಾಂ। ಸುಫಲಾಂ ಮಾತರಂ॥4॥ ಶ್ಯಾಮಲಾಂ ಸರಲಾಂ ಸುಸ್ಮಿತಾಂ ಭೂಷಿತಾಂ। ಧರಣೀಂ ಭರಣೀಂ ಮಾತರಂ॥5॥

ಸಾವಿರದಳ ಕಮಲಿನೀ **ರಾಗ: ಕಾನಡ**

ಸಾವಿರದಳ ಕಮಲಿನೀ ಓ ಭಾರತಿ। ತಾಯೆ ನಿನಗೆ ಇದೋ ಜೀವದಾರತೀ............॥ಪ॥ ನೂರು ನುಡಿಗಳಿಂದ ಕಂದರನ್ನು ಕರೆವ ವಾಗ್ವಿದೆ। ಹಲವುರೀತಿ ಹಾಡಿ ಹಾಲನೀಡಿ ಪೊರೆವ ಶಾರದೆ। ಕೈಯ್ಯ ಹಿಡಿದು ಅಡಿಯನಿಡಿಸಿ ಮುನ್ನಡೆಸುವ ಧಾರಿಣಿ। ತೊದಲು ನುಡಿಸಿ ಕೇಳಿ ಹರ್ಷ ತಾಳಿ ನಲಿವ ತಾರಿಣಿ॥1॥ ತಪ್ಪಿದಾಗ ಮಕ್ಕಳು ರಣಚಂಡಿಯಾಗಿ ಖಂಡಿಸಿ। ಮತ್ತೆ ಕರೆದು ಲಲ್ಲೆಗರೆದು ಕಣ್ಣನೊರೆಸಿ ಮುದ್ದಿಸಿ। ನಮ್ಮ ಸೋದರತ್ವವನ್ನು ನಮಗೆ

ಮನನಗೊಳಿಸುತಾ। ಮನೆಯ ನಿಲ್ಲಿಸಮ್ಮ ತಾಯೆ ನಮ್ಮನ್ನೆಲ್ಲಾ ಒಲಿಸುತಾ॥2॥ ಹಲವು ತಾರೆಯಿಂದ ಒಂದು ಬೆಳಕು ಸೂರೆ ಮಾಡಿದವಳು। ಹಲವು ಧಾರೆಯಿಂದ ಒಂದು ವರ್ಷಗೀತೆ ಮಾಡಿದವಳು। ತೆಕ್ಕೆ ಬಿಗಿದು ತಾಯೆ ಇಂದು ನಮ್ಮನೊಂದುಗೂಡಿಸೆ। ಹಲವಿದ್ದರೂ ಬಲವೊಂದೇ ಎಂಬ ತತ್ವ ಮೂಡಿಸೇ॥3॥

ಸ್ವಾತಂತ್ರ್ಯ

ಜೈ ಸ್ವತಂತ್ರ ಭಾರತಿ — **ರಾಗ: ಶುದ್ಧಧನ್ಯಾಸಿ**

ಜೈ ಸ್ವತಂತ್ರ ಭಾರತಿ ಜೈ ಜೈ ಜೈ ಜೈ ಸ್ವತಂತ್ರ ಭಾರತಿ ಜೈಜೈಜೈ ಜೈ ಜೈ ಜೈ॥ಪ॥ ದಿಗ್‌ದಿಗಂತದಲ್ಲಿ ನಿನ್ನ ಕೀರ್ತಿಬೆಳಗಲಿ। ಗಗನದಲ್ಲಿ ನಿನ್ನ ವಿಜಯ ಘೋಷಮೊಳಗಲಿ। ನವ್ಯಜೀವ ಭವ್ಯ ಭಾವ ದಿವ್ಯವಾಗಲಿ। ದಿವ್ಯಸ್ವರ್ಗವಾಗಿ ಬಂದು ಭೂಮಿಗಿಳಿಯಲಿ॥1॥ ಉಕ್ಕು ಹೆಜ್ಜೆ ಇಕ್ಕು ಮುಂದೆ ನುಗ್ಗು ಅಂಜದೆ। ಬಿರುಸುಗಾಳಿಗೆದೆಯನೊಡ್ಡಿ ಸಾಗು ಅಳುಕದೆ। ಮುಂದೆ ಸಾಗು ಸಾಗು ಮುಂದೆ ಸಾವಿಗಂಜದೆ। ಮುಂದಕ್ಕಿಟ್ಟ ಹೆಜ್ಜೆಯನ್ನು ಹಿಂದೆ ತೆಗೆಯದೆ॥2॥ ನಿನ್ನ ಮಾರ್ಗ ವಿಶ್ವಕೆಲ್ಲ ರಾಜಮಾರ್ಗವೂ। ನಿನ್ನ ಕರುಣೆ ವಿಶ್ವಕೆಲ್ಲ ಚಿರಂಜೀವವೂ। ಮಾತೃಭೂಮಿ ನಿನ್ನ ಕರೆಯು ನಮಗೆ ಮಾನ್ಯವೂ। ಮಾತೃಭೂಮಿಗಾಗಿ ದುಡಿಯೆ ಮಹಾಭಾಗ್ಯವೂ॥3॥

ನೆನೆನೆನೆದು ದಿನದಿನವು — **ರಾಗ: ಕಲ್ಯಾಣಿ**

ನೆನೆನೆನೆದು ದಿನದಿನವು ದುಡಿದುಡಿದು ಜನಮನವು। ಭಾರತದ ಸ್ವಾತಂತ್ರ್ಯ ಮೆರಸ ಬನ್ನಿ॥ಪ॥ ಸ್ವಾತಂತ್ರ್ಯ ಪಡೆದಿಹೆವು ತಲೆಎತ್ತಿ ಮೆರೆಯುವೆವು। ವಜ್ರದೇಹಿಗಳಾಗಿ ಬನ್ನಿರೆಲ್ಲಾ। ಸ್ವಾತಂತ್ರ್ಯವೇ ಪಕ್ಷ ಸ್ವಾತಂತ್ರ್ಯವೇ ಪಂಥ। ಸ್ವಾತಂತ್ರ್ಯವೇ ಜಾತಿ ಎನ್ನಿರೆಲ್ಲ॥1॥ ಭಾರತದ ಬಿಡುಗಡೆಗೆ ಹೋರಾಡಿರುವ ನಮಗೆ। ಯಾರ ಭಯ ನಾವಿಂದು ಒಂದಾಗಿರೆ। ಐಕ್ಯವೊಂದೇ ಮಂತ್ರ ಐಕ್ಯದಿಂ ಸ್ವಾತಂತ್ರ್ಯ। ಐಕ್ಯಗಾನದಿ ರಾಷ್ಟ್ರ ತೇಲುತಿರಲಿ॥2॥

ಭಾರತದ ಸ್ವಾತಂತ್ರ್ಯ ಸಂದೇಶ — **ರಾಗ: ಅಭೇರಿ**

ಭಾರತದ ಸ್ವಾತಂತ್ರ್ಯ ಸಂದೇಶ ಶಾಂತಿ। ಹನಿರಕ್ತ ಸಿಡಿಸಿಲ್ಲ ಶಾಂತಿಯ ಕ್ರಾಂತಿ। ಅಣುಕಣಕೆ ಕಾಂತಿಯನು ನೀಡಿಹುದು ಶಾಂತಿ। ಸಮರಸದ ಸೂಕ್ತಿಯನು ಸಾರಿರುವ ಶಾಂತಿ॥ಪ॥ ತ್ಯಾಗಮಂತ್ರದ ಗಂಧ ಬೀರಿದನು ಗಾಂಧಿ। ದಾರಿ ಇದು ಹೆದ್ದಾರಿ ಹೆಮ್ಮೆ ಇದು ಹಿರಿ ಹೆಮ್ಮೆ। ಪಕ್ಷಗಿಕ್ಷವ ಬಿಟ್ಟು ಸತ್ಯ ಪಕ್ಷವ ಹಿಡಿದು। ಸರ್ವತ್ರ ಮಿತ್ರತ್ವ ಸಾಧಿಸಿದ ಹೆದ್ದಾರಿ॥1॥ ಆ ಮಹಾತ್ಮನ ಕರುಣೆ, ಚಿಗುರಿ ಚಿಮ್ಮಿದೆ। ಇಂದು ಹರಿವ ನೀರನು ಹಿಡಿದು ಸುಳಿವ। ಗಾಳಿಯ ಕಟ್ಟಿ, ಇಳೆಯ ಮುಖವನೆ ತೀಡಿ। ಮುನ್ನುಗ್ಗಿ ನಡೆದಿಹೆವು। ಕಣ್ಣಿಗಿದು ಹಿರಿನೋಟ ಹೊನ್ನಿಗಿದು ತವರೂರು॥2॥

ಭೋಗ ಮೆಟ್ಟಿ ತ್ಯಾಗ ಮೆರೆದ — **ರಾಗ: ಮಾಂಡ್**

ಭೋಗ ಮೆಟ್ಟಿ ತ್ಯಾಗ ಮೆರೆದ ಕರ್ಮಭೂಮಿ ಭಾರತ। ಮನುಜರಾಗಿ ಹುಟ್ಟಲಿಲ್ಲಿ ಜನುಮಜನುಮ ಸುಕೃತ॥ಪ॥ ನಾಲ್ಕುದಿನದ ಬಾಳು ನಮದು ಆಗಲಿಂದು ಸಾರ್ಥಕ। ತ್ಯಾಗ ಮಾಡಿ ಅಮರರಾದ ಸಂತರೆಮಗೆ ಪ್ರೇರಕ। ಮಣ್ಣ ಋಣವ ಕಳೆವುದಕ್ಕೆ ಸೇವೆಯೊಂದೇ ಸಾಧಕ। ನಗುತನಲಿವ ಸಮಾಜಕ್ಕೆ ಸಾಗಬೇಕು ಕಾಯಕ॥1॥ ಧ್ಯೇಯ ಪಥವ ಬಿಟ್ಟ ಬಾಳ್ವೆ ಬೇಡ ನಮಗೆ ನೀರಸ। ಪರರಿಗಾಗಿ ಸತತ ಮಿಡಿವ ಹೃದಯದಿಂದ ಸಂತಸ। ಕಳೆದುಬಿಡುವ ರೋಷ ದ್ವೇಷ ಎಲ್ಲ ಮನದ ಕಲ್ಮಷ। ವಿರಸ ಸರಿಸಿ ಹರಿಸಿ ಬಿಡುವ ಶುದ್ಧ ಸ್ನೇಹ ಮಾನಸ॥2॥ ಸ್ವಾರ್ಥ ಲಾಭ ಸ್ತುತಿಯ ಮೋಹ ಬೇರು ಸಹಿತ ಕೀಳುವ। ತರುವಿನಂತೆ ನೆರಳು ನೀಡಿ ಬದುಕ ಧನ್ಯಗೊಳಿಸುವ। ತಮವು ನಮಗೆ ಬೆಳಕು ಜಗಕೆ ದೀಪದಂತೆ ಬೆಳಗುವ। ಅಳುವನಳಿಸಿ ಪ್ರೀತಿ ಬೆಳೆಸಿ ನಾಡಿನೇಳ್ಗೆ ಕಾಣುವ॥3॥

ವಿಜಯ ಭಾರತ ಜನನಿ ಮಾತಾ — **ರಾಗ: ಕಾನಡ**

ವಿಜಯ ಭಾರತ ಜನನಿ ಮಾತಾ। ಸಕಲ ಭಾಗ್ಯವಿಧಾತಾ। ವಿಜಯ ಭಾರತ ಜೈ ಜೈ ಭಾರತ। ಜನನಿ ಮಾತಾ ಸಕಲ

ಭಾಗ್ಯ ವಿಧಾತಾ॥ಪ॥ ಪರಮ ಪಾವನ ಪುಣ್ಯಮೂರ್ತಿ। ನೀದು ಮಹಿಮಲು ಪೊಗಡ ತರಮಾ। ನಿಖಿಲ ಸುಖಮುಲ, ನಿಖಿಲ ಸುಖಮುಲನೊಸಗುಮಮ್ಮು। ಸಕಲ ಭಾಗ್ಯವಿಧಾತ॥1॥ ಗಾಂಧಿ ನೆಹರು ಬೋಸ ವೀರುಲ। ವಲ್ಲಭಭಾಯಿ ಪಟೇಲುವಂಟಿ। ವೀರಪುತ್ರುಲ ವೀರಪುತ್ರುಲ ಕನ್ನತಲ್ಲಿ। ಸಕಲ ಭಾಗ್ಯವಿಧಾತಾ॥2॥ ಗಂಗಾಯಮುನಾ ಸರಸ್ವತಿ ನದುಲೆಲ್ಲ ನೀಪೈ ಪಾರಗಾ॥ ಪಾಡಿಪಂಟಲು ಪಾಡಿಪಂಟಲು ನೊಸಗುಮಮ್ಮು। ಸಕಲ ಭಾಗ್ಯವಿಧಾತಾ॥3॥

ಸದಾ ಉರಿಯುತ್ತಿರುವ ಹಾಗೆ — ರಾಗ: ಮೋಹನ

ಸದಾ ಉರಿಯುತ್ತಿರುವ ಹಾಗೆ ಸ್ವಾತಂತ್ರ್ಯದ ಹಣತೆ। ದುಡಿಮೆತೈಲವೆರೆಯುತಿರಲು ಬಿಡುವಿಲ್ಲದೆ ಜನತೆ। ಎಂತುಕುಂದಬಹುದು ನಮ್ಮ ತಾಯ್ನಾಡಿನ ಘನತೆ॥1॥ ಸ್ವಾತಂತ್ರ್ಯದ ಜೊತೆಗೆ ಬಂದು ಕೂಡಲಿಲ್ಲ ಗಳಿಕೆ। ವ್ಯಕ್ತಿ ವ್ಯಕ್ತಿ ಬೆವರ ಹೀರಿ ಮರವಾಗಿದೆ ಮೊಳಕೆ। ಮೇಲೇರಿದ ಹಾಗೆ ವಜ್ರಪಾಯ ಉಂಟು ಇದಕೆ॥2॥ ಮುಳ್ಳಿನಿಂದ ಅರಿವೆಬಿಡಿಸಿದಂತೆ ಬಂತು ಮುಕ್ತಿ। ಹುಲಿಯಬಾಯ ಮೇವ ಕಸಿಯುವಂತೆ ಧೀರಶಕ್ತಿ। ಪಡೆಯಿತದನು ಜನತೆ ಬಾಳ ಬೆಸೆವ ನಾಡ ಭಕ್ತಿ॥3॥ ಸಾಗಿದಂತೆ ಸಲ್ಲುತಿರಲಿ ಸಾಧನೆಯೆಡೆ ಗಮನ। ಪ್ರಾಣವನ್ನೆ ಪಗಡೆಯಾಡಿದವರಿಗೆಮ್ಮ ನಮನ। ತಾಯ ಮುಡಿಗೆ ದಿನವು ಏರುತಿರಲಿ ಹೂವು ದವನ॥4॥

ಸ್ವತಂತ್ರತಾ ಕೀ ವರ್ಷ್‌ಗಾಂಠ್ ಕಾ (ಹಿಂದಿ) — ರಾಗ: ಯಮನ್

ಸ್ವತಂತ್ರತಾ ಕೀ ವರ್ಷ್‌ಗಾಂಠ್ ಕಾ। ದಿವಸ್ ಆಜ್ ಹೈ ಆಯಾ। ಭಾರತ್ ಕೇ ಜನ್‌ಜನ್ ಕೇ ಮನ್ ಮೇ। ನವ್ ಉಲ್ಲಾಸ್ ಸಮಾಯಾ॥1॥ ಸಜೆ ಹುಯೆ ಘರ್ ದ್ವಾರ್ ದೇಶ್ ಮೇ। ಅನುಪಮ್ ಸುಷಮಾ ಛಾಯೀ। ಭಾರತ್ ಭೂಪರ್ ಆಜ್ ಸ್ವರ್ಗ್ ಕೀ। ಛಟಾ ಉತರ್ ಕರ್ ಆಯೀ॥2॥ ನಗರ್ ನಗರ್ ಮೇ ಡಗರ್ ಡಗರ್ ಮೇ। ಬಜ್‌ತೀ ಹೈ ಶಹನಾಈ। ಸ್ವತಂತ್ರತಾ ಕೀ ವರ್ಷ್‌ಗಾಂಠ್ ಹೈ। ಸಂಗ್ ಮೇ ಖುಶಿಯಾಂ ಲಾಯೀ॥3॥ ಅರ್ಪಣ್ ಕರ್ ದೋ ತುಮ್ ಸ್ವದೇಶ್ ಪರ್। ಅಪನೀ ಮಸ್ತ್ ಜವಾನೀ। ಸ್ವತಂತ್ರತಾ ಕೀ ವರ್ಷ್‌ಗಾಂಠ್ ಕೀ। ಆಯೀ ಜ್ವಾರ್ ಪುರಾನಿ॥4॥ ಕುಛ್ ನ ಕಿಯಾ ಯದಿ ತುಮ್‌ನೇ ಮಾಂ ಕಾ। ಭಾಲ್ ನಹೀಂ ಚಮ್‌ಕಾಯಾ। ಸ್ವತಂತ್ರತಾ ಕೀ ವರ್ಷ್‌ಗಾಂಠ್ ಕಾ। ದಿವಸ್ ಆಜ್ ಹೈ ಆಯಾ॥5॥

ಸ್ವಾತಂತ್ರ್ಯದ ದಿನ ಇಂದು — ರಾಗ: ಮೋಹನ

ಸ್ವಾತಂತ್ರ್ಯದ ದಿನ ಇಂದು ನಮ್ಮ । ಸ್ವಾತಂತ್ರ್ಯದ ದಿನ ಇಂದು॥ ಭಾರತದೇಶದ ಸ್ವಾತಂತ್ರ್ಯ ಇಂದು। ನಮ್ಮೆಲ್ಲರಿಗೂ ಆನಂದ॥ಪ॥ ತ್ರಿವರ್ಣಧ್ವಜವಿದು ಹಾರುತಿದೆ। ಜನತೆಗೆ ಶಾಂತಿಯ ಸಾರುತಿದೆ। ದೇಶದಲ್ಲೆಲ್ಲ ಹರ್ಷವಿದೆ। ಸ್ವಾತಂತ್ರ್ಯೋತ್ಸವ ನಡೆಯುತಿದೆ॥1॥ ಕೇಸರಿ ತ್ಯಾಗವ ಸೂಸುತಿದೆ। ಶ್ವೇತವು ಶಾಂತಿಯ ಸೂಸುತಿದೆ। ಹಸಿರು ಸಮೃದ್ಧಿಯ ಸೂಸುತಿದೆ। ಚಕ್ರವು ಧರ್ಮವ ಸಾರುತಿದೆ॥2॥ ಗಾಂಧಿನೆಹರು ಶಾಸ್ತ್ರಿಗಳಂಥಹ। ತ್ಯಾಗಜೀವಿಗಳ ನೆನೆಯುತ್ತ। ನಾಡ ಗುಡಿಯದು ಹಾರುತಿದೆ। ಬಾನೆತ್ತರದಲಿ ನಲಿಯುತಿದೆ॥3॥ ಭಾರತ ದೇಶದ ಮಕ್ಕಳು ನಾವು। ದೇಶಗೀತೆಯ ಹಾಡ್ವೆವು ನಾವು। ಭಾರತ ಮಾತೆಗೆ ಜಯಜಯವೆಂದು। ಜಯಘೋಷವ ನಾವು ಗೈವೆವು ಇಂದು॥4॥

ಸ್ವಾತಂತ್ರ್ಯದ ಸುಧೆಯು ಸವಿಯು — ರಾಗ: ಸೌಖ್ಯದಾಯಿನಿ

ಸ್ವಾತಂತ್ರ್ಯದ ಸುಧೆಯು ಸವಿಯು ನಮ್ಮಿ ೀ ನಾಡಿಗೆ। ಸ್ವಾವಲಂಬನದ ಬದುಕು ನಮ್ಮ ನಾಡಿಗೆ ಆಹಾ ನಮ್ಮ ಜನರಿಗೆ॥ಪ॥ ನಮ್ಮ ಕಾಲ ಮೇಲೆ ನಿಂತು ನಾವು ಬಾಳುವ। ಅನ್ಯರನ್ನು ಬೇಡುವುದನು ನಾವು ತ್ಯಜಿಸುವ। ದೇಶದುನ್ನತಿಗಾಗಿ ನಾವು ದುಡಿಮೆ ಗೈಯುವ। ದೇಶ ಭಕ್ತಿ ಗೀತೆಗಳ ನಾವು ಪಾಡುವ॥1॥ ಭೂಮಿ ಉತ್ತಿ ಬಿತ್ತಿ ನಾವು ಬೆಲೆಯ ತೆಗೆಯುವ। ನ್ಯಾಯ ಮಾರ್ಗದಿಂದ ನಾವು ಅರ್ಥಗಳಿಸುವ। ಕೀರ್ತಿ ಪಡೆವ ನಾಡ ಬಾವುಟ ಎತ್ತಿ ನಾವು ಹಿಡಿಯುವ। ಸ್ವಾರ್ಥಬಿಟ್ಟು ನಾಡಿನ ಅರ್ಥ ಶಕ್ತಿ ಹೆಚ್ಚಿಸುವ॥2॥ ಕಾಲಧರ್ಮ ಅರಿತು ನಾವು ಎಲ್ಲರೊಡನೆ ಸೇರುವ। ಶೀಲ ವಿನಯ ಕಲಿತು ನಾವು ನಾಡ ಘನತೆ ಹೆಚ್ಚಿಸುವ॥3॥

ಗಣತಂತ್ರ

ಗಣರಾಜ್ಯೋತ್ಸವ3 ಈದಿನವು **ರಾಗ: ಹಿಂದೋಳ**

ಗಣರಾಜ್ಯೋತ್ಸವ ಗಣರಾಜ್ಯೋತ್ಸವ ಗಣರಾಜ್ಯೋತ್ಸವ ಈ ದಿನವು। ಭಾರತಮಾತೆ ಪುಣ್ಯಪ್ರಣೀತೆ ಎಂದೆಂದಿಗೂ ನೀ ಸ್ವತಂತ್ರಳು॥ಪ॥ ಏಸು ಏಸು ಜನ ಏಸು ಏಸು ಮನ ಬಲಿಗೊಂಡಿಹೆ ತಾಯಿ ಭಾರತಿಯೇ। ಗೌತಮ, ಗಾಂಧೀ, ನೆಹರು, ಶಾಸ್ತ್ರಿಗಳ ಪಡೆದ ಧನ್ಯ ನೆಲದಾರತಿಯೆ॥1॥ ಬಗೆ-ಬಗೆ ವೇಷ, ಬಗೆ ಬಗೆ ಭಾಷೆ ಇದ್ದರು ಒಂದೆ ನಾವೆಲ್ಲ। ಮರೆತು ನಡೆದರೆ ಭೇದ ಭಾವಗಳ ಬೆರೆತಂತೆ ಬೇವು ಬೆಲ್ಲ॥2॥ ಬನದಲಿ ಬಗೆಬಗೆ ಬಣ್ಣದ ಹೂಗಳು ಅರಳುವಂತೆಯೆ ಬಲು ಚೆಂದ। ಬೇರೆ ಬೇರೆ ಮತ ಧರ್ಮ ಭಾಷೆಗಳು ಒಪ್ಪಿ ನಡೆವುದೆ ಆನಂದ॥3॥ ಶಿಸ್ತು ಸಹನೆಗಳ ತ್ಯಾಗ-ಶಾಂತಿಗಳ ಸಾರುವುದೀ ಧ್ವಜ ನಿರಂತರ। ಭಾರತ ಭೂಮಿಯ ಗೌರವ ಉಳಿಸಲು ಸತ್ತರು ಕೂಡ ಚಿರ ಅಮರ॥4॥

ಜಯ2 ಭಾರತ ಜಯಭಾರತ **ರಾಗ: ವಸಂತ**

ಜಯ ಜಯ ಭಾರತ ಜಯ ಜಯ ಭಾರತ ಜಯ ಜಯ ಭಾರತವೆಂದೆನ್ನಿ॥ಪ॥ ದಾಸ್ಯವನೋಡಿಸಿ ಬಿಡುಗಡೆಮಾಡಿಸಿ ಲಾಸ್ಯವ ಜನಮನಕೊದಗಿಸುತೀಗ। ಮೂಡಿತು ಭಾರತ ಗಣರಾಜ್ಯ। ನೆಲಸಿತು ಜನತೆಗೆ ಸಾಮ್ರಾಜ್ಯ॥1॥ ಋಷಿಗಳ ತಪಸು ಕವಿಗಳ ಕನಸು ಯೋಧರ ನೆನಸು ಭಾರತ ಸೊಗಸು। ನವೀನ ಭಾರತ ಗಣರಾಜ್ಯ ಸುವೀರ ಚರಿತೆಯ ಸಾಮ್ರಾಜ್ಯ॥2॥ ಆರ್ಯರ ಮೊಗಲರ ಮ್ಲೇಚ್ಛರ ಕ್ರೈಸ್ತರ ಆಳ್ವಿಕೆ ಬಾಳ್ವಿಕೆಯಿಂದವತರಿಸಿದ। ಇಂದಿನ ನಮ್ಮೀ ಗಣರಾಜ್ಯ ಎಂದಿಗು ಐಕ್ಯದ ಸಾಮ್ರಾಜ್ಯ॥3॥ ಸಮರದ ಮಾತನೆ ಜಗದಿಂ ತೊಲಗಿಸಿ ಸಮತೆಯ ನೀತಿಯ ಜಗದಲಿ ಹಬ್ಬಿಸಿ। ಆಳಲಿ ಭಾರತ ಗಣರಾಜ್ಯ ಬಾಳಲಿ ಭಾರತ ಸಾಮ್ರಾಜ್ಯ॥4॥

ಧರತೀ ಕಹೆ ಗಗನ ದೊಹರಾಎ (ಹಿಂದಿ) **ರಾಗ: ಕಲ್ಯಾಣಿ**

ಧರತೀ ಕಹೆ ಗಗನ ದೊಹರಾಎ। ಅಮರ ಹರೆ ಗಣತಂತ್ರ ಹಮಾರಾ॥ಪ॥ ಲಹರ ಲಹರ ಯಹ ಧ್ವಜ ಲಹರಾಯೆ ಜಯತಿ ರಾಷ್ಟ್ರ ಜಯ ಕಾ ಹೋ ನಾರಾ॥ ಆಜಾದೀ ಕೀ ಬಲಿವೇದೀಪರ್ ವಿರೋಂನೆ ಜೋ ದೀ ಕುರ್ಬಾನೀ॥ ಉನ್ಹೀ ಶಹೀದೋಂ ಕೀ ಸ್ಮೃತಿಮೆ ಅಮರ್ ರಹೆ ಯಹ್ ದಿವ್ಯ ನಿಶಾನೀ। ಭಾರತ ಮಾಂ ಕೆ ಮುಕ್ತಿ ಪರ್ವಪರ್ ಉನ್ ವೀರೋಂ ಕೋ ನಮನ್ ಹಮಾರಾ। ॥1॥ ಹಮ್ ಸಬ್ ಹರ್ಷಿತ ಆಜ್ ಹೋ ರಹೇ ಹೈ ವಿಕಾಸ್ ಉನ್ಮುಖ್ ಸ್ವತಂತ್ರತಾ। ಹಮ್ ಜನ್ಮೆಹೈ ಆಜಾದೀ ಮೆ ದೂರ್ ಭಗಾದೇಂಗೆ ದರಿದ್ರತಾ ಅಮರ್ ಚೈನ ಸಂಮೃದ್ಧಿ ದೇಶ ಮೆ ಬಢೆ ಯಹೀ ಸಂಕಲ್ಪ ಹಮಾರಾ। 2॥ ಹಮ್ ನನ್ಹೆ ಮುನ್ನೆ ಬಚ್ಚೋಂ ಮೆ ಪಲಕ್ ವೇಗ್ ಉತ್ಸಾಹ ಭರಾಹೈ। ಹಮ್ ಭವಿಷ್ಯ ಭಾವೀ ಭಾರತ್ ಕೆ ಆಶಾನ್ವಿತ್ ಹೋ ರಹೀ ಧರಾಹೈ। ಸತ್ಯ ಕಲ್ಪೋಂಕಾ ಪ್ರತೀಕ್ ಹೈ ವಿಜಯೀ ವಿಶ್ವ ತಿರಂಗಾ ಪ್ಯಾರಾ॥3॥

ಧ್ವಜಗೀತೆ

ಅಖಂಡ ಭಾರತ ರಾಷ್ಟ್ರಪತಾಕೆ **ರಾಗ: ಹಂಸಧ್ವನಿ**

ಅಖಂಡ ಭಾರತ ರಾಷ್ಟ್ರಪತಾಕೆ। ಹಾರುವ ದಿನವು ಶುಭದಿನವು। ಕೇಸರಿ ಬಿಳುಪಿನ ಹಸಿರು ಧ್ವಜವಿದು। ರಾಷ್ಟ್ರದ ಧ್ವಜವು ಹಾರುತಲಿರುವುದು। ಹಿಂದೂಸ್ಥಾನವು ವೈಭವ ಸ್ಥಿತಿಯಲಿ ಗೌರವದಲಿ ಇದು ಮೆರೆಯುತಿದೆ। ಭಾರತಮಾತೆಯ ಮಕ್ಕಳು ನಾವು ಹರುಷದಿ ನಲಿಯುತಲಿ। ಹಿಂದೂ ರಾಷ್ಟ್ರಪತಾಕೆಯ ಹಿಡಿದು ಮಹಾತ್ಮರನ್ನು ಸ್ಮರಿಸುವೆವು॥

ಅದೋ ನೋಡು ಮುದ್ದು ಕಂದ — ರಾಗ: ಮಾಂಡ್

ಅದೋ ನೋಡು ಮುದ್ದು ಕಂದ ನಮ್ಮ ಬಾವುಟ। ಸತ್ಯ ಧರ್ಮ ಶಾಂತಿಯನ್ನು ಸಾರುತಿರುವ ಬಾವುಟ॥ಪ॥ ಮೂರು ಬಣ್ಣ ಧರ್ಮಚಕ್ರ ತೋರಿಮೆರೆವ ಬಾವುಟ। ಅಖಿಲ ವಿಶ್ವದಲ್ಲಿ ನಮ್ಮ ಕೀರ್ತಿವೆತ್ತ ಬಾವುಟ॥ ಇದುವೆ ಪಟದ ಧ್ಯೇಯಕಾಗಿ ವೀರರೆಷ್ಟು ಮೆರೆದರು। ಇದುವೆ ಪಟದ ಧ್ಯೇಯಕಾಗಿ ದುಡಿವರೆಷ್ಟು ಶೂರರು॥1॥ ಗೆಳೆಯರೆಲ್ಲ ಬನ್ನಿರೆಲ್ಲ ಧೀರವೀರರಾಗುವ। ನಮ್ಮ ಪಟದ ನೆಳಲಿನಲ್ಲಿ ಒಂದು ಗೂಡಿ ಸಾಗುವ॥ ಭರತ ಭೂಮಿಗಾಗಿ ದುಡಿವ ವೀರ ಜನರ ನೆನೆಯುವ। ದೇಶಸೇವೆ ಈಶಸೇವೆ ಎನುವ ಧರ್ಮವರಿಯುವ॥2॥ ಜಾತಿ ವೈರವನ್ನು ತೊರೆದು ನೀತಿವಂತರೆನಿಸುವ। ಸತ್ಯಸಂದರಾಗಿ ಒಂದು ಭಾವದಿಂದ ನೆಲೆಸುವ॥ ನಮ್ಮ ಪಟವು ನಿಮ್ಮದಣ್ಣ ಬಾನಿಗೇರಿ ಹಾರಲಿ। ನಮ್ಮ ರಾಷ್ಟ್ರ ಹಿಂದುಭೂಮಿ ರಾಮರಾಜ್ಯವಾಗಲಿ॥3॥

ಅರುಣ ಧ್ವಜವು ಕರೆಯುತಿಹುದು — ರಾಗ: ಹಮೀರ್ ಕಲ್ಯಾಣಿ

ಅರುಣ ಧ್ವಜವು ಕರೆಯುತಿಹುದು ಬಾ ಹಿಂದು ಬಾ॥ಪ॥ ಮನವ ತೆರೆದು ಶಿರವ ಮಣಿದು ಓ ಹಿಂದು ಬಾ। ಬಂಧು ನಾವು ಹಿಂದು ಬಾ ಎಂದೆಂದಿಗೂ ಒಂದೆ ಬಾ॥1॥ ಹಳೆಯ ಕಹಿಯ ಮರೆತು ಬಿಡು ದ್ವೇಷ ರೋಷ ದೂರ ಸುಡು। ಎಲ್ಲ ಹಗೆ ಎಲ್ಲ ಧಗೆ ಮೀರಿಬರಲಿ ಸ್ನೇಹ ನಗೆ॥2॥ ಸತ್ಯನ್ಯಾಯನೀತಿ ನಡೆ ದಿಟ್ಟ ನಿಲುವು ಬರದು ತಡೆ। ದರ್ಪ ದಮನ ಕಿರಿದು ಬೆಲೆ ಹರಿಯೆ ಪ್ರೀತಿ ಶಾಂತಿ ಸೆಲೆ॥3॥ ಸಂತವಾಣಿ ದಿನವು ನೆನೆ ಬಿತ್ತು ಮನದಿ ಬರಲಿ ತೆನೆ। ವೀರಗಾಥೆ ಕೇಳಿ ತನು ರೋಮಾಂಚಿತವಾಗದೇನು?॥4॥ ಧರ್ಮದರಿವು ಮೂಡಲಿ ಜನ ಜಾಗೃತಿಯಾಗಲಿ। ಓಂಕಾರದ ನಾದದಿ ವಿಜಯಭೇರಿ ಮೊಳಗಲಿ॥5॥

ಏರಲೀ ಹಾರಲೀ ಕನ್ನಡದ ಬಾವುಟ — ರಾಗ: ಕಲ್ಯಾಣಿ

ಏರಲೀ ಹಾರಲೀ ಕನ್ನಡದ ಬಾವುಟ। ಹಕ್ಕ ಬುಕ್ಕ ರನ್ನ ಜನ್ನ ವಿದ್ಯಾರಣ್ಯ॥ ಹರಿಹರ ಬಸವ ಪುರಂದರ। ಕನಕ ಅಕ್ಕಮಹಾದೇವಿಯ ಬಾವುಟ॥ ತಲಕಾಡು ಮಲೆನಾಡು ಹಳೆಬೀಡುಗಳ ಗೂಡು। ಬಾದಾಮಿ ಬೇಲೂರು ಶಿಲೆಗೆಲ್ಲ ಕಲೆನೂರು। ಶ್ರೀರಂಗನಾ ಸಂಗಮದಿ ಮಿಂದ ತಾಯ್ನಾಡು ಸಿರಿನಾಡ ಕರುನಾಡ ಬಾವುಟ॥1॥ ಕಿತ್ತೂರು ಚೆನ್ನಮ್ಮ ಸಂಚಿಯ ಹೊನ್ನಮ್ಮ। ಮೈಸೂರು ಚಾಮುಂಡಿ ಕೊಲ್ಲೂರು ಮೂಕಾಂಬೆ। ಮಂಗ್ಳೂರು ಕಡಲಂಚು ಬೆಂಗ್ಳೂರು ಕೋಲ್ಮಿಂಚು। ಕನ್ನಡದ ಮುನ್ನಡೆಯ ಬಾವುಟ॥2॥

ಏರುತಿಹುದು ಹಾರುತಿಹುದು — ರಾಗ: ಮೋಹನ

ಏರುತಿಹುದು ಹಾರುತಿಹುದು ನೋಡು ನಮ್ಮ ಬಾವುಟ। ತೋರುತಿಹುದು ಹೊಡೆದು ಹೊಡೆದು। ಬಾನಿನಗಲ ಪಟ ಪಟ॥1॥ ಕೇಸರಿ ಬಿಳಿ ಹಸಿರು ಮೂರು। ಬಣ್ಣ ನಡುವೆ ಚಕ್ರವು। ಸತ್ಯಶಾಂತಿ ತ್ಯಾಗ ಮೂರ್ತಿ। ಗಾಂಧಿಹಿಡಿದ ಚರಕವು॥2॥ ಇಂಥ ಧ್ವಜವು ನಮ್ಮ ಧ್ವಜವು। ನೋಡಿ ಹಾರುತಿರುವುದು। ಧ್ವಜದ ಶಕ್ತಿ ನಮ್ಮ ಭಕ್ತಿ। ನಾಡಗುಡಿಯ ಮೆರೆವುದು॥3॥ ಕೆಂಪು ಕಿರಣ ತುಂಬಿ ಗಗನ। ಹೊನ್ನ ಬಣ್ಣವಾಗಿದೆ। ನಮ್ಮ ನಾಡ ಗುಡಿಯ ನೋಡ। ನೋಡಿರಣ್ಣ ಹೇಗಿದೆ॥4॥

ಜಯ ಜಯ ಜಯ ವಿಜಯೀಭವ — ರಾಗ: ಮಾಂಡ್

ಜಯ ಜಯ ಜಯ ವಿಜಯೀಭವ ಹೇ ವೈಜಯಂತಿ। ನಿನ್ನ ನೆಳಲೊಳೇಳ್ಗೆವೊಡೆದು ಗೆಲ್ಗೆ ಭುವನ ಶಾಂತಿ। ಓ ಸುವರ್ಣೆ ಹೇ ಅವರ್ಣೆ ನೀಲಮಾ ತ್ರಿವರ್ಣೆ(2ಸಾರಿ) ॥ಪ॥ ಸುಧಾ ಶಂಕ ಶಂಕರಾ ಗಧಾ ಭಯಂಕರಾಜಿತೆ। ಅಮೃತ ದಿವ್ಯ ಖಚಿತ ಭವ್ಯ ಧರ್ಮ ಚಕ್ರದಾಂಕಿತೇ। ಪ್ರೇಮ ನಿನ್ನ ಪರಮ ಅನ್ನವಾಗಲವನಿಪೂಜಿತೆ॥1॥ ಮೈತ್ರಿ ಸಹನೆ ಶಾಂತಿಗಾಗಿ ನಭೋಗಾಮಿಯಾಗು। ಪೊಡವಿಯಾಳು ಕಡಲ ಸೀಳು ಗೆಲ್ಲು ಬಾಳು ಹೋಗು। ಗ್ಲಾನಿಯೆಲ್ಲಿ ಹಾನಿಯೆಲ್ಲಿ

ಅಲ್ಲಿ ರಕ್ಷೆಯಾಗು। ಕ್ರೌರ್ಯವೆಲ್ಲಿ ಪಾಪವೆಲ್ಲಿ ಅಲ್ಲಿ ಶಿಕ್ಷೆಯಾಗು।।2।। ಅಮರ ಬಾಹು ಅಸುರರಾಹು ನೆಲಕೆ ಮುಗಿಲ ಕಾವು। ಕರ್ಮಜಗಕೆ ಧರ್ಮಪುರುಷನಿಟ್ಟ ಬೆರಳ ಬೇರು। ಹೇ ತ್ರಿವರ್ಣ ಕೇತನ ನೀನೆ ನಮ್ಮ ಚೇತನ।। ಪ್ರೇಮ ಧೈರ್ಯ, ಸತ್ಯಧರ್ಮ, ಶಾಂತಿ ಚಿರನಿಕೇತನ।।3।।

ಜಯವಾಗಲಿ3 ಭಾರತಕೆ **ರಾಗ:ಶುಭಪಂತುವರಾಳಿ**

ಜಯವಾಗಲಿ ಜಯವಾಗಲಿ। ಜಯವಾಗಲಿ ಭಾರತಕೆ। ಜಯ ಸತ್ಯಕೆ ಜಯ ನಿತ್ಯಕೆ। ಜಯ ತ್ರಿವರ್ಣ ಕೇತನಕೆ। ಭಾರತೀಯ ಚೇತನಕೆ।।ಪ।। ಗಂಗೆ ಯಮುನೆ ಕೃಷ್ಣ ತುಂಗೆ ನಲಿವ ನಾಟ್ಯ ರಂಗಕೆ। ಕಂಗೊಳಿಸುವ ಮಂಗಳಮಯ। ಶಿಲ್ಪಕಲಾ ಮಂದಿರಕೆ। ಶೃಂಗಾರದ ನಮ್ಮ ನಾಡ ಪಾವನ ಪರಂಪರೆಗೆ।।1।। ಹಿಮಮಣಿ ಮಕುಟವ ಮುಡಿಯಲಿ ಧರಿಸಿ। ಮೆರೆವ ದೇವತೆ ಕಮನೀಯ ವೇದಸಾರ। ಸಂಗೀತ ಸುಧಾಂಬುಧಿಗೆ। ರಾಮ ಭೀಮ ಹನುಮ ವೀರನುದಿಸಿ ಬಂದ ನಾಡಿಗೆ।।2।। ಜೈಹಿಂದ್ ಎಂಬ ಮಂತ್ರ ಸದಾ ಮೊಳಗುತಿರಲಿ। ವಿಶ್ವಶಾಂತಿ ಸಹಜೀವನ ನಮ್ಮ ಧ್ಯೇಯವಾಗಿರಲಿ। ಈ ಭಾರತ ದೇಶ ಲೋಕಕೆ ಮಾದರಿಯಾಗಿರಲಿ।।3।।

ಜಯಭಾರತ3 ಜನನೀ **ರಾಗ:ಕಲ್ಯಾಣಿ-ಛಾಪುತಾಳ**

ಜಯಭಾರತ ಜಯಭಾರತ ಜಯಭಾರತ ಜನನೀ। ಸುಖಶಾಂತಿಯ ಸಮೃದ್ಧಿಯ ಸುಧೆ ಹರಿಸಿತು ಭೂಮಿ।।ಪ।। ಮುಗಿಲೆತ್ತರ ತಲೆ ಎತ್ತಿದೆ ಹಿಮ ಪರ್ವತ ಶ್ರೇಣಿ। ಅಗಣಿತ ನಕ್ಷತ್ರಕ್ಕೆ ಇದು ಇರಿಸಿದ ಏಣಿ। ನದನದಿಗಳು ತಮ್ಮೆದೆಯೊಳು ಸೇತುವೆನಿಲ್ಲಿಸಿ। ನಳನಳಿಸಿದೆ ತಳಪಳಿಸಿದೆ ಪ್ರಕೃತಿಯು ತಾಯೆ।।1।। ಜೋಗದ ಜಲಪಾತದ ಧುಮ್ಮಿಕ್ಕುವ ಸೊಗಸು। ನಿನಗೆತ್ತಿದೆ ನಿನ್ನ ಮುತ್ತಿದೆ ಬೆಳಕಿನ ಸಿರಿಯು। ಉರುಳುತ್ತಿಹ ಓಡುತ್ತಿಹ ಯಂತ್ರದ ಚಕ್ರ। ಕೈಗಾರಿಕೆ ಕೈಗೂಡಿದೆ ಭಾಗ್ಯದ ಚಿತ್ರ।।2।। ಹೊಸ ದಿಸೆಯಲಿ ಹೊಸದೆಸೆಯಲಿ ಹೊರಹೊಮ್ಮಲಿ ಹೊಸತು। ಹೊಸ ರಾಗದ ಹೊಸಭಾವದ ಹೊಸ ಗೀತೆಯು ಹೊಸತು। ಭುವಿ ಬಾನಲಿ ಶೃತಿ ಮಿಡಿದಿದೆ ಶಾಂತಿಯ ರವವೂ। ಎಲ್ಲೆಲ್ಲಿಯು ಝುಗಝುಗಿಸಿದೆ ಸ್ವಾತಂತ್ರ್ಯದ ಧ್ವಜವು।।3।।

ಝುಂಡಾ ಊಂಚಾ ರಹೇ ಹಮಾರಾ (ಹಿಂದಿ) **ರಾಗ: ಬೇಹಾಗ್**

ಝುಂಡಾ ಊಂಚಾ ರಹೇ ಹಮಾರಾ। ವಿಜಯೀ ವಿಶ್ವ ತಿರಂಗಾ ಪ್ಯಾರಾ।।ಪ।। ಸದಾಶಕ್ತಿ ಬರ್‌ಸಾನೇವಾಲಾ। ಪ್ರೇಮ್ ಸುಧಾ ಸರಸಾನೇವಾಲಾ।।2ಸಾರಿ।। ವೀರೋಂಕೋ ಹರುಷಾನೇ ವಾಲಾ। ಮಾತೃಭೂಮಿ ಕಾ ತನ್ ಮನ್ ಸಾರಾ।।1।। ಶಾನ್ ನ ಇಸಕೀ ಜಾನೇ ಪಾಯೇ। ಚಾಹೇ ಜಾನ್ ಭಲೇ ಹೀ ಜಾಯೇ। ವಿಶ್ವ ವಿಜಯ್ ಕರಕೇ ದಿಖ್‌ಲಾಯೆ। ತಬ್ ಹೋ ವೇ ಪ್ರಣ್ ಪೂರ್ಣ್ ಹಮಾರಾ।।2।। ಆವೋ ಪ್ಯಾರೇ ವೀರೋಂ ಆವೋ। ದೇಶ್ ಧರ್ಮ್ ಪರ್ ಬಲಿ ಬಲಿ ಜಾವೋ। ಏಕ್ ಸಾಥ್ ಸಬ್ ಮಿಲ್ ಕರ್ ಗಾವೋ। ಪ್ಯಾರಾ ಭಾರತ್ ವರ್ಷ್ ಹಮಾರಾ।।3।।

ಧವಳ ಹಿಮದ ಗಿರಿಯ ಮೇಲೆ **ರಾಗ: ಸೌಖ್ಯದಾಯಿನಿ**

ಧವಳ ಹಿಮದ ಗಿರಿಯ ಮೇಲೆ ಅರುಣ ಧ್ವಜವ ಹಾರಿಸಿ। ಮುಗಿಲ ಏಣಿ ಏರಿ ನಿಂದು ವಿಜಯಭೇರಿ ಬಾರಿಸಿ।।ಪ।। ಸಿಂಧು ಕಣಿವೆಯೊಡಲಿನಿಂದ ವೀರಗಾನ ಮೊಳಗಲಿ। ಧ್ಯೇಯರವಿಯ ಕಿರಣ ತರುಣರೆದೆಯ ಗುಡಿಯ ಬೆಳಗಲಿ। ಎದ್ದು ನಿಲ್ಲು ಭಾರತ... ದಿವ್ಯ ಪ್ರಭೆಯ ಬೀರುತ।।1।। ಮನವ ಹಸಿರುಗೊಳಿಸುತಿಹಳು ಭಾವಗಂಗೆ ಅನುದಿನ। ಇಳೆಯ ಕೊಳೆಯ ತೊಳೆಯುತಿಹಳು ತಾಯಿ ತುಂಗೆ ಕ್ಷಣಕ್ಷಣ। ನೆಲವಿದೆಮ್ಮ ಪಾವನ... ಎನಿತು ಧನ್ಯ ಜೀವನ।।2।। ನಾಡಗುಡಿಯ ಮೂರು ಕಡೆಯು ಪೊರೆವ ಶಾಂತ ಸಾಗರ। ಹಿಂದು ಜನರ ಹೃದಯವಿಂದು ಕ್ಷಾತ್ರತೇಜದಾಗರ। ಸ್ಫೂರ್ತಿ ಗೌರಿಶಂಕರ ....ಕಾಲಯಮನು ಕಿಂಕರ।3।। ಅಸುರತನದ ಉಸಿರ ನೀಗಿ ಭೇದಭಾವ ನೀಗುತ। ಸಾಗು ಮುಂದೆ ಮುಂದೆ ಸಾಗು ಮಾತೆಯನ್ನು ಸ್ಮರಿಸುತ। ನಿನಗೆ ಜಯದ ಆರತಿ ಹರಸು ತಾಯೆ ಭಾರತಿ।।4।।

ನೀ ನೋಡು ಧ್ವಜವನು **ರಾಗ: ಹಂಸಧ್ವನಿ**

ನೀ ನೋಡು ಧ್ವಜವನು। ಹಾರುತಿದೇ ಮೇಲೆ ಮೇಲೆ॥ಪ॥ ಮೂರು ಬಣ್ಣವು ಯಾವ ಚಿಹ್ನೆಯು। ನೀ ಕಷ್ಟಕ್ಕೆ ಹೆದರದೆ ಕಾರ್ಯಗೈದೊಡೆ। ಬೇಗ ಬಂದು ಕೂಡಿರಯ್ಯಾ ಧ್ವಜದ ಅಡಿಯಲಿ॥1॥ ಕೇಸರಿ ಬಣ್ಣವು ಧೈರ್ಯ ಚಿಹ್ನೆಯದು। ಬಿಳಿಯ ಬಣ್ಣವು ಸ್ವಚ್ಛ ಚಿಹ್ನೆಯೂ। ಹಸಿರು ಬಣ್ಣವೂ ಶಾಂತಿ ಚಿಹ್ನೆಯೂ॥2॥ ಮೂರು ಬಣ್ಣದಾ ಬಾವುಟವನು। ಕಣ್ಣ ತುಂಬಲೂ ನೋಡಿ ಸುಖಿಸುನೀ। ಚಕ್ರಮಧ್ಯದಲ್ಲಿ ಇರುವ ಚಂದ ನೋಡು ನೀ॥3॥

ನೀಲನಭದಿ ಮೆರೆಯುತಿಹುದು **ರಾಗ-ಸೌಖ್ಯದಾಯಿನಿ**

ನೀಲನಭದಿ ಮೆರೆಯುತಿಹುದು ಸ್ಕೌಟ್ ಗೈಡ್ ಬಾವುಟ। ನಮಗೆ ಸ್ಫೂರ್ತಿ ನೀಡುತ॥2ಸಾರಿ॥ ಭ್ರಾತೃಭಾವ ನೀಲವರ್ಣ ತ್ರಿದಳ ಮೂರು ಶಪಥ। ಚಕ್ರ ಸಾರುತಿಹುದು ಅಲ್ಲಿ ನಡೆಮುಂದೆ ಎನ್ನುತ। ಮುಂದೆ ಮುಂದೆ ಎನ್ನುತ॥ ಚಕ್ರದೊಳಗೆ ಅರೆಯಗೂಡು ಎಂತ ಅರ್ಥ ಬೆಳಗಿದೆ ಇಪ್ಪತ್ನಾಲ್ಕು ಗಂಟೆಯೆಂದು ಚಲನಸ್ಫೂರ್ತಿ ಹುದುಗಿದೆ। ಕಾಲಪ್ರಜ್ಞೆ ಮೆರೆದಿದೆ॥ ಹಾರುತಿರಲಿ ಬಾವುಟ ವಿಶ್ವತತ್ವ ಮೆರೆಯುತ। ಭ್ರಾತೃಭಾವ ಸಾರುತ ಮನೆಮನೆಯಲು ಬೆಳಗುತ। ಮನಮನದೊಳು ಬೆಳಗುತ॥

ನೋಡಿರೀ ಬಾವುಟ **ರಾಗ: ಹಿಂದೋಳ**

ನೋಡಿರೀ ಬಾವುಟ ಬಾವುಟ। ಹೇಗೇ ಹಾರುತಿದೆ ನೋಡಿರೆಲ್ಲಾ॥ಪ॥ ಕೇಸರಿ ಬಣ್ಣದಾ ಹಸಿರು ಬಣ್ಣದಾ। ಬಿಳಿಯ ಬಣ್ಣದ ಮಧ್ಯದಲ್ಲಿ ಚಕ್ರ॥1॥ ಭಾರತ ಮಾತೆಯ ಮಕ್ಕಳು ನಾವು ಎಲ್ಲರು ಕೂಡಿ। ಭಾರತ ಮಾತೆಗೆ ಜೈಜೈ ಜೈಜೈ॥2॥ ಜೈ ಗಾಂಧಿ ಜೈ ನೆಹರು। ಜೈ ಸುಭಾಷ್ ಚಂದ್ರಬೋಸ್॥3॥

ಬಹಳ ಸಂತೋಷದ ದಿನವೈ ಇಂದು **ರಾಗ: ಹಂಸಧ್ವನಿ**

ಬಹಳ ಸಂತೋಷದ ದಿನವೈ ಇಂದು। ಭಾರತಕ್ಕಾದುದು ಸ್ವಾತಂತ್ರ್ಯ॥ ಏರಲೀ ಹಾರಲೀ ತೋರಲೀ ರಾಷ್ಟ್ರ ಪತಾಕಾ ಅಂಬರದೀ ಸಂಭ್ರಮದೀ॥ಪ॥ ಕೇಸರಿ ಬಿಳುಪು ಹಸುರಿನ ಬಣ್ಣ। ನಡುವೆಯೆ ಚಕ್ರದ ಗುರುತಿಹುದಣ್ಣ॥1॥ ಧರ್ಮದ ಚಕ್ರದ ಮರ್ಮವನರಿತ। ಧೀರೋದಾತ್ತರ ನಾಡು ಇದು॥2॥ ಹಿಂದಿನ ವೀರರು ಇಂದಿನ ಶೂರರು। ಹೊಂದಿದ ಕೀರ್ತಿಯ ನಾಡು ಇದು॥3॥ ಧ್ವಜಕಿದಕಾಗಿಯೆ ವೀರರ ತಂಡ। ತೆತ್ತಿದೆ ಸಾವಿರ ಜೀವದ ದಂಡ॥4॥ ಗಾಂಧಿ ನೆಹರು ಎಲ್ಲರೂ। ಈ ಧ್ವಜದಡಿಯಲೆ ದುಡಿದವರು॥5॥

ಭಾರತದಾ ವೈಜಯಂತಿ ಹಾರುತಿದೆ **ರಾಗ: ಶುದ್ಧಧನ್ಯಾಸಿ**

ಭಾರತದಾ ವೈಜಯಂತಿ ಹಾರುತಿದೆ ನೋಡಿ। ವೀರರ ನೆಲೆ ನಾಡಿದೆಂದು ಹೆಮ್ಮೆಯಿಂದ ಹಾಡಿ॥ಪ॥ ಪರಶುರಾಮ ಪಾರ್ಥರಂಥ ಕಲಿಗಳ ತಾಯ್ನಾಡು। ಪುರೂರವ ಶಿವಾಜಿಯಂಥ ವೀರರ ನೆಲೆ ಬೀಡು। ಪರಮಹಂಸ ರಮಣರಂಥ ಯೋಗಿಗಳಾ ನಾಡು। ಗಾಂಧಿ ನೆಹರು ತಿಲಕರಂಥ ತ್ಯಾಗಿಗಳಾ ಬೀಡು॥1॥ ನೂರುವರ್ಷ ಬಂಧಿಸಿರಲು ರಾಷ್ಟ್ರದ ಸಂಕೋಲೆ। ಬಿಡುಗಡೆಯ ಬಯಸಿ ಬಂತು ದೇಶದ ಕರೆಯೋಲೆ। ಹೆಮ್ಮೆಯಿಂದ ಜನರು ನೀಡೆ ಆತ್ಮದ ಬಲಿದಾನ। ನಮ್ಮ ನಾಡು ಎನಿಸಿತು ಸ್ವತಂತ್ರ ಹಿಂದೂಸ್ಥಾನ॥2॥ ಜನ್ಮಭೂಮಿಗಾಗಿ ನಾವು ದುಡಿಯುವ ಬನ್ನಿ। ಪುಣ್ಯಭೂಮಿ ಸೇವೆಯಲ್ಲೆ ಮಡಿಯುವ ಬನ್ನಿ। ತನುವಲೊಂದು ರಕ್ತಬಿಂದು ಹರಿಯುವ ತನಕ। ತಾಯ್ನಾಡ ರಕ್ಷಣೆಗೆ ನಿಲ್ಲುವ ಬನ್ನಿ॥3॥

ರಾಷ್ಟ್ರ ಗಗನ ಕೀ ದಿವ್ಯ ಜ್ಯೋತಿ (ಹಿಂದಿ) **ರಾಗ: ಮೋಹನ**

ರಾಷ್ಟ್ರ ಗಗನ ಕೀ ದಿವ್ಯ ಜ್ಯೋತಿ ರಾಷ್ಟ್ರೀಯ ಪತಾಕಾ ನಮೋ ನಮೋ। ಭಾರತ್ ಜನನೀ ಕೇ ಗೌರವ್ ಕೀ ಅವಿಚಲ್ ಶಾಖಾ ನಮೋ ನಮೋ॥ಪ॥ ಕರ್ ಮೆ ಲೇಕರ್ ಇಸೆ ಸೂರಮಾ ಕೋಟಿ ಕೋಟಿ ಭಾರತ್ ಸಂತಾನ್। ಹಸ್ತೆ ಹಸ್ತೆ

ಮಾತೃಭೂಮಿ ಕೇ ಚರಣೋಂಪರ್ ಹೋಂಗೇ ಬಲಿದಾನ್। ಹೋ ಘೋಷಿತ್ ನಿರ್ಭೀಕ್ ವಿಶ್ವ್ ಮೆ ತರಲ್ ತಿರಂಗಾ ನವಲ್ ನಿಶಾನ್। ವೀರ್ ಹೃದಯ್ ಹಿಲ್ ಉಠೇ ಮಾರ್‌ಲೇ ಭಾರತೀಯ್ ಕ್ಷಣ್ ಮೆ ಮೈದಾನ್॥ ಹೋ ನಸ್‌ನಸ್ ಮೆ ವ್ಯಾಪ್ತ್ ಚರಿತ್ ಸೂರಮಾ ಶಿವ್ ಕಾ ನಮೋ ನಮೋ। ರಾಷ್ಟ್ರ ಗಗನ್ ಕೀ ದಿವ್ಯ ಜ್ಯೋತಿ ರಾಷ್ಟ್ರೀಯ ಪತಾಕಾ ನಮೋ ನಮೋ॥1॥ ಉಚ್ಚ ಹಿಮಾಲಯ್ ಕೀ ಚೋಟೀ ಪರ್ ಜಾಕರ್ ಇಸೆ ಉಡಾಯೇಂಗೇ। ವಿಶ್ವವಿಜಯಿನೀ ರಾಷ್ಟ್ರಪತಾಕಾ ಕಾ ಗೌರವ್ ಫಹ್‌ರಾಏಂಗೇ। ಸಮರಾಂಗಣ್ ಮೇ ಲಾಲ್ ಲಾಡ್‌ಲೇ ಲಾಖೋಂ ಬಲಿ-ಬಲಿ ಜಾಏಂಗೇ। ಸಬ್ ಸೆ ಊಂಚೀರಹೇ ನ ಇಸ್ ಕೋ ನೀಚೇ ಕಭೀ ಝುಕಾಏಂಗೇ। ಗೂಂಜೆ ಸ್ವರ್ ಸಂಸಾರ್ ಸಿಂಧು ಮೆ ಸ್ವತಂತ್ರತಾಕಾ ನಮೋ ನಮೋ। ಭಾರತ್ ಜನನೀ ಕೇ ಗೌರವ್ ಕೀ ಅವಿಚಲ್ ಶಾಖಾ ನಮೋ ನಮೋ॥2॥

ವಂದಿಸಿ ಶುಭ ಜಯಗೀತೆಯ **ರಾಗ: ಹಂಸಧ್ವನಿ**

ವಂದಿಸಿ ಶುಭ ಜಯಗೀತೆಯ ಹಾಡಿ। ಏರಿಸಿ ಹಾರಿಸಿ ನಾಡಗುಡಿ॥ಪ॥ ಚೆಲುವಿಂದಂಬರ ತುಂಬುತೆ ನಲವಿಂ। ಮೆರೆವುದು ನಮ್ಮಯ ನಾಡಗುಡಿ। ಸ್ವತಂತ್ರ ದೇಶದ ಲಾಂಛನವೆನಿಸಿದ। ತ್ರಿವರ್ಣ ರಂಜಿತ ನಾಡಗುಡಿ॥1॥ ಸೊಬಗಿನ ಹಸುರಿನ ಹಂದರ ಕೆಳಗೆ। ನಗು ನಗುತಿಹ ಬಿಳಿ ಬಣ್ಣವು ಬೆಳಗೆ। ಥಳಥಳಿಸುವ ಹೊಂಬಣ್ಣವು ತುದಿಗೆ। ಧರ್ಮದ ಚಕ್ರವು ನಡುವಲಿ ತಿರುಗೆ॥2॥ ಭೇದವ ನೆನೆವುದ ಮರೆಯುತ ಜನಗಣ। ನಾಡ ನಿಶಾನೆಯ ನೆರಳಲಿ ಸೇರಿ। ಒಂದೇ ಧ್ವನಿಯಲಿ ಜಯ ಜಯವೆನ್ನುತ। ಪಾಡುತ ವಂದಿಸಿ ಮುದದಲಿ ಸೇರಿ॥3॥

ಹಾರಾಡು ಓ ಧ್ವಜವೇ **ರಾಗ: ನೀಲಾಂಬರಿ**

ಹಾರಾಡು ಓ ಧ್ವಜವೇ। ಹೂಮಳೆಯು। ಬರುತಲಿದೆ। ಹಾರಾಡುವೋ ಧ್ವಜವೇ॥ಪ॥ ಫಲಪುಷ್ಪ ತಂದಿಹೆವು। ಪೂಜೆಯನು ಗೈಯುವೆವು। ದೇಗುಲದಿ ಘಂಟೆಗಳು ಧ್ವನಿಸುತ್ತಿವೆ॥1॥ ಹೊಂಗನಸು ಸವಿಯಾಯ್ತು। ಸ್ವಾತಂತ್ರ್ಯ ಎಮಗಾಯ್ತು। ಪರತಂತ್ರ ಕೊನೆಯಾಗಿ। ಭಾರತಿಯ ಮುಖದಲ್ಲಿ ನಗೆಮೂಡಿದೆ॥2॥ ಕೈಲಾಸವಾಸಿಗಳು। ಹೂಮಾಲೆ ಹಿಡಿದಿಹರು। ಗಗನದಲಿ ಜಯಘೋಷ ಮೊಳಗುತಿಹುದು॥3॥ ಕಲಿಯುಗದ ಶ್ರೀಕೃಷ್ಣ। ಭಾರತದ ಜಯವೀರ। ಗಾಂಧಿ ತಾತನಿಗಿಂದು ಜಯವ ಹಾಡಿ॥4॥

ಹಾರುತಿದೆ ನೋಡಿರಲ್ಲಿ ನಮ್ಮ ಬಾವುಟ **ರಾಗ:ಮಾಂಡ್**

ಹಾರುತಿದೆ ನೋಡಿರಲ್ಲಿ ನಮ್ಮ ಬಾವುಟ। ಮೂರು ಬಣ್ಣದಿಂದ ನಲಿಯುವ ದಿವ್ಯ ಬಾವುಟ॥ಪ॥ ಗಗನವೇರಿ ಭರದಿ ಕುಣಿವ ಗಣ್ಯ ಬಾವುಟ। ಗಾಂಧಿತಾತ ತಂದು ಕೊಟ್ಟ ಭವ್ಯ ಬಾವುಟ॥1॥ ಹಿಂದು ದೇಶ ನಮ್ಮದೆಂದು ಮೆರೆವ ಬಾವುಟ। ಸತ್ಯ ಧರ್ಮನಿತ್ಯಕಾವ ಅಮರ ಬಾವುಟ॥2॥ ಭಾರತೀಯರೆಲ್ಲನಮಿಪ ಮಧುರ ಬಾವುಟ। ನಮ್ಮ ಬಾವುಟ ನಮ್ಮ ಬಾವುಟ ನಮ್ಮ ಬಾವುಟ ॥3॥

ಹಾರಿಸಿರಿ[2] ನಮ್ಮ ಧ್ವಜವನೂ **ರಾಗ: ಬೇಹಾಗ್**

ಹಾರಿಸಿರಿ ಹಾರಿಸಿರಿ ನಮ್ಮ ಧ್ವಜವನೂ। ಭಾರತೀಯರೆಲ್ಲ ಸೇರಿ ಎಮ್ಮ ಧ್ವಜವನು॥ಪ॥ ಮೂರು ವರ್ಣದಿಂದ ತಳಿಪ ಮುದ್ದು ಬಾವುಟಾ। ಮುದ್ದು ಮಕ್ಕಳೆಲ್ಲ ಕೈಲಿ ಹಿಡಿವ ಬಾವುಟ॥1॥ ಶಿರವ ಬಾಗಿ ಆದರ ಕೆಳಗೆ ಕೈಯ ಮುಗಿಯಿರಿ। ಭಾರತಾಂಬೆಯನ್ನು ನೆನೆದು ನೀವು ನಡೆಯಿರಿ॥2॥ ಜೈ ಜೈ ಜೈ ಜೈ ಭಾರತಮಾತೆ। ಜಯವ ಎಮಗೆ ಕರುಣಿಸೈ ಭಾರತಮಾತೆ॥3॥ ಜಯದಿ ಮೆರೆಯುತಿರುವುದೀಗ ಕನ್ನಡ ನಾಡು। ಜಯದಿ ಮೆರೆಯುತಿರುವುದೀಗ ಚಿನ್ನದನಾಡೂ। ಈ ಗಂಧದ ನಾಡು॥4॥

ಪಥಸಂಚಲನ

ಉಘೇ ವೀರ ಭೂಮಿಗೆ ರಾಗ: ಸೌಖ್ಯದಾಯಿನಿ

ಉಘೇ ವೀರ ಭೂಮಿಗೆ। ಉಘೇ ಉಘೇ ಉಘೇ ಉಘೇಉಘೇ ವೀರಭೂಮಿಗೆ। ಕಹಳೆ ಶ್ರುತಿಗೆ ರುದ್ರಕೃತಿಗೆ ಸಮರರಂಗದಮರ ಸ್ಮೃತಿಗೆ॥ಪ॥ ಎತ್ತರೆತ್ತರೆತ್ತರಕ್ಕೆ ಏರಲೆಮ್ಮ ಬಾವುಟ। ಉತ್ತರುತ್ತರುತ್ತರಕ್ಕೆ ಬೆಳೆಯಲೆಮ್ಮ ಭೂಪಟ। ಯೋಧವಸ್ತ್ರ, ಹೆಗಲ ಶಸ್ತ್ರಧರಿಸಿ ಜನ್ಮ ಭೂಮಿಗೆ॥1॥ ಅಗ್ನಿವರ್ಷ ಶೌರ್ಯಸ್ಪರ್ಶ ತೈಲಶಕಟ ಸಾವಿರ। ಸಾಲು ಸಾಲು ಬೂಟುಕಾಲು ನಡೆವ ಸೈನ್ಯ ಸಾಗರ। ಬಾಳಿನೆಲ್ಲ ರುಧಿರವೆಲ್ಲ ಕುದಿವ ದೃಶ್ಯ ಸೇಡಿಗೆ॥2॥ ಹೊರಟಿತಿದೋ ಅಜಿಂಕ್ಯಸೇನೆ ರಾಷ್ಟ್ರಕಿದುವೆ ರಕ್ಷಣೆ। ರಣಪ್ರಯಾಣ ವಿಜಯಗಾನ ವಿಮಾನಯಾನ ಗರ್ಜನೆ। ತಾಯಭಕ್ತಿ ತೋಳಶಕ್ತಿ ಇದು ಸ್ವದೇಶದುಳಿವಿಗೆ॥3॥ ರಾಷ್ಟ್ರಯಜ್ಞದುರಿಯ ದಾಹ ತೀರಲೆಂದು ಇಂದಿಗೆ। ಶಸ್ತ್ರಪೂಜೆಯಾಗಲೆಂದು ವೈರಿಪ್ರಾಣದೊಂದಿಗೆ। ಕ್ಷಾತ್ರಭಾವ ಕೆರಳುತಿಹುದು ರಕ್ತದರ್ಘ್ಯ ಗಳಿಕೆಗೆ॥4॥

ಧ್ಯೇಯಪಥದಿ ದಿಟ್ಟತನದಿ ರಾಗ: ಸೌಖ್ಯದಾಯಿನಿ

ಧ್ಯೇಯಪಥದಿ ದಿಟ್ಟತನದಿ ಹರುಷದಿಂದ ಸಾಗುವ। ಅಜೇಯ ಶಕ್ತಿಯನ್ನು ಗಳಿಸಿ ವಿಜಯ ಭೇರಿಹೊಡೆಯುವ॥ ದೇಶಕಾಗಿ ಸತತ ಕಾದ ವೀರರನ್ನು ಸ್ಮರಿಸುವ ಅವರ ಕಾರ್ಯದಿಂದ ನಾವು ಸ್ಫೂರ್ತಿಯನ್ನು ಪಡೆಯುವಾ। ವಿಶುದ್ಧ ರಾಷ್ಟ್ರಪ್ರೇಮದಿಂದ ಕಾರ್ಯರಂಗಕಿಳಿಯುವಾ॥1॥ ಧ್ಯೇಯ ಮಾರ್ಗದಲ್ಲಿ ಬರುವ ಕಷ್ಟಗಳನು ಸಹಿಸುತ। ಹಿಮಾದ್ರಿಯಂತೆ ಅಚಲರಾಗಿ ಮಾತೆ ಸೇವೆಗೈಯುತ। ಎಡರಿನಲ್ಲಿ ಸುಖವ ಕಂಡು ಹಿಗ್ಗಿ ಹಾಡಿ ನಲಿಯುತಾ॥2॥ ವಿಶಾಲ ಹಿಂದು ದೇಶದಲ್ಲಿ ರಾಷ್ಟ್ರವನ್ನು ಕಟ್ಟುವಾ। ಪ್ರೇಮಪಾಶದಿಂದ ಎಲ್ಲಾ ಬಂಧುಗಳನು ಸೆಳೆಯುವಾ। ಅವರ ಹೃದಯದಲ್ಲಿ ರಾಷ್ಟ್ರಜ್ಯೋತಿಯನ್ನು ಬೆಳಗುವಾ॥3॥ ಹೃದಯ ಪುಷ್ಪದಿಂದ ನಾವು ಮಾತೆ ಪೂಜೆ ಗೈಯುವಾ। ನಿತಾಂತ ಭಕ್ತಿಯಿಂದ ನಾವು ಜನನಿಯನ್ನು ನಮಿಸುವಾ। ಭರತಮಾತೆ ಲೋಕಮಾತೆ ಎಂದು ಜಗಕೆ ತೋರುವಾ॥4॥

ನಡೆ ಮುಂದೆ2 ನುಗ್ಗಿ ನಡೆ ಮುಂದೆ ರಾಗ: ಕಲ್ಯಾಣಿ

ನಡೆ ಮುಂದೆ ನಡೆ ಮುಂದೆ ನುಗ್ಗಿ ನಡೆಮುಂದೆ। ಜಗ್ಗದೆಯೆ ಕುಗ್ಗದೆಯೆ ಹಿಗ್ಗಿ ನಡೆ ಮುಂದೆ॥ಪ॥ ಬೆಚ್ಚಬಿಡು, ನೆಚ್ಚನುಡು ಕೆಚ್ಚೆದೆಯ ಗುಡಿಯಲ್ಲಿ। ಸೆರೆಯ ಹರಿ, ಅರಿಯನಿರಿ, ಹುಟ್ಟಳಿಸು ಹುಡಿಯಲ್ಲಿ ನಾನಳಿವೆ ನೀನಳಿವೆ ನಮ್ಮೆಲುಬುಗಳ ಮೇಲೆ। ಮೂಡುವುದು ಮೂಡುವುದು ನವಭಾರತದ ಲೀಲೆ॥1॥ ನೊಂದದನಿ ಕಣ್ಣಪನಿ ಬರಿದೆಯೆಂದೊರೆಯದಿರು। ತೆತ್ತ ಹಣ ಸತ್ತ ಹೆಣ ಹೋಯ್ತೆಂದು ಮೊರೆಯದಿರು। ಪೊಡವಿಯೊಳಗಡಗಿರುವ ತಳಹದಿಯ ತೆಗಳುವರೆ? ಮೆರೆಯುತಿರುವರಮನೆಯ ಸಿರಿಯೊಂದ ಹೊಗಳುವರೆ?॥2॥ ಎಲ್ಲ ಇದೆ ಎಲ್ಲ ಇದೆ ನಿತ್ಯತೆಯ ಗಬ್ಬದಲಿ। ಮುಂದೆ ಅದು ತೋರುವುದು ಬಿಡುಗಡೆಯ ಹಬ್ಬದಲಿ। ನೆಚ್ಚುಗೆಡಬೇಡ ನಡೆ ಕೆಚ್ಚೆದೆಯ ಕಲಿಯೆ। ಬೆಚ್ಚಿದರೆ ಬೆದರಿದರೆ ಕಾಳಿಗದು ಬಲಿಯೆ? ಭರತಖಂಡದ ಹಿತವೆ ಎನ್ನ ಹಿತ ಎಂದು। ಭರತ ಮಾತೆಯ ಮತವೆ ಎನ್ನ ಮತವೆಂದು। ಭಾರತಾಂಬೆಯ ಸುತರೆ ಸೋದರರು ಎಂದು। ಭಾರತಾಂಬೆಯ ಮುಕ್ತಿ ಮುಕ್ತಿ ಎನಗೆಂದು। ನುಗ್ಗು ಮರಣಕೆ ವೀರ ಸಗ್ಗದಾ ನೆಲೆಗೆ॥3॥ ನೋಡದೋ ನೋಡಲ್ಲಿ ದರ್ಪರಥದಡಿಯಲ್ಲಿ। ಹೊರಳುತಿರುವಳು ತಾಯಿ ನೆತ್ತರಿನ ಹುಡಿಯಲ್ಲಿ। ಬಾಳನೊರೆಯಿಂದ ಇರಿ, ನುಗ್ಗು, ನಡೆ, ಕಟ್ಟ ಹರಿ। ತಡೆಯಬಂದವರ ಇರಿ ಒಲಿಯುವವಳು ಜಯದ ಸಿರಿ। ಜನ್ಮವೊಂದಳಿ ದರೇಂ? ನೂರಿಹವು ಬಲಿಗೆ। ಕಾಳಗದೊಳ ಳಿಯಲೇಂ ಸಾವೆ ಸಿರಿ ಕಲಿಗೆ? ನಿಂತೇನು ನೋಡುತಿಹೆ ಹುದುಗುವರೆ ಇಲ್ಲಿ? ಮಸಣವಾಗಲಿ ಎದೆಯು ರಣರಂಗದಲ್ಲಿ। ನೆತ್ತರನು ನೋಡುವೆಯ? ಸತ್ತವರ ನೋಡುವೆಯ? ಕಂಗಾಲುಗಳ ಗೂಡೆ? ಮರುಳುಗಳ ನೆಲೆವೀಡೆ? ಕಾಳಿಯಳುಕುವಳೇನು ರಕ್ಕಸರ ಬಲಿಗೆ? ಸಮರರಂಗದ ನಡುವೆ ಬೆದರಿಕೆಯೆ ಕಲಿಗೆ?॥4॥ ಹಾ! ನೋವು ಹಾ! ನೋವು ಎಂದೆಲ್ಲ ಕೂಗುವರೆ?

ಹಾ! ನೀರು ಹಾ! ನೀರು ಎಂದಸುವ ನೀಗುವರೆ? ಕೂಗಿಗೆದೆಗರಗದಿರು, ಬೇನೆಯಿರೆ ಮರುಗದಿರು। ಕಂಬನಿಯ ಕರೆಯದಿರು, ಗುರಿಯ ಮರೆಯದಿರು। ಕಲಿಯೆ ಹಿಂಜರಿಯದಿರು, ತಾಯ ತೊರೆಯದಿರು। ಎಲುಬುಗಳ ತೊಲೆಗಳಲ್ಲಿ ಮಾಂಸದಾ ಮಣ್ಣಿನಲ್ಲಿ ನೆತ್ತರಿನ ನೀರಿನಲಿ ಬೇನೆ ಬಿಸು ಸುಯ್ಲಿನಲಿ। ಬಿಡುಗಡೆಯ ಸಿರಿಗುಡಿಯ ಮಸಣದಲಿ ಕಟ್ಟು ಪಾವನದ ತಾಯಡಿಯ ಬಲ್ಮೆಯಲಿ ಮುಟ್ಟು। ಆತ್ಮವಚ್ಯುತವೆಂದು ಜನ್ಮಗಳು ಬಹವೆಂದು। ಮೃತ್ಯು ನಶ್ವರವೆಂದು ಭಾರತಿಗೆ ಜಯವೆಂದು। ನಡೆ ಮುಂದೆ ನಡೆ ಮುಂದೆ ನುಗ್ಗಿ ನಡೆ ಮುಂದೆ। ಜಗ್ಗದೆಯೆ ಕುಗ್ಗದೆಯೆ ಹಿಗ್ಗಿ ನಡೆಮುಂದೆ॥5॥

ಬಢೇ ಚಲೋ ತುಂ (ಹಿಂದಿ) — ರಾಗ: ಶುದ್ಧಧನ್ಯಾಸಿ

ಬಢೇ ಚಲೋ ತುಂ ಬಢೇ ಚಲೋ। ಝುಕನೇಕಾ ಅಬ್ ನಾಮ್ ನಹೀ ಹೈ। ರುಕ್‌ನೇಕಾ ಅಬ್ ಕಾಮ್ ನಹೀ ಹೈ। ಭಾರತ್ ಮಾ ಕೇ ಬಚ್ಚೋಂ ಪ್ಯಾರೆ। ಡರ್‌ನೇ ಕಾ ಅಬ್ ಕಾಮ್ ನಹೀ ಹೈ॥1॥ ದುಃಖ್ ಆವೇ ತೊ ಹಸತೆ ಝೇಲೊ। ಸುಖ್ ಆವೇ ತೊ ಹಸತೇ ಲೇಲೊ। ಜಗದೀಶ್ವರ್ ಕೆ ಫೂಲ್ ಹೋ ಪ್ಯಾರೆ। ಜೈಸೆ ರಾಖೇ ವೈಸೆ ಜೀಲೋ॥2॥ ಪರ್ವತ್ ಆವೇ ಟಕ್‌ರಾವೊ ತುಮ್। ಪಥ್ಥರ್ ಆವೇ ಠುಕರಾವೊ ತುಮ್। ಜೋ ಭೀ ಆಡೇ ಮಾರ್ಗ್ ತುಮ್ಹಾರೆ। ಸಾಹಸ್ ಸೇ ಲಲ್‌ಕಾರೋ ತುಮ್॥3॥ ಆಪಸ್ ಮೆ ತುಮ್ ಪ್ಯಾರ್ ಬಢಾವೊ। ದೇಶ್ ಕಾರ್ಯ್ ಮೆ ಹಾಥ್ ಬಂಟಾವೊ। ಭೇದ್‌ಭಾವ್ ಕೋ ದೂರ್ ಭಗಾವೋ। ಭಾರತ್ ಮಾ ಕೀ ಶಾನ್ ಬಢಾವೋ॥4॥

ಬನ್ನಿ ಹಿಂದು ವೀರರೆ — ರಾಗ: ಶುದ್ಧಧನ್ಯಾಸಿ

ಬನ್ನಿ ಹಿಂದು ವೀರರೆ ಮುಂದೆ ಸಾಗುವಾ। ವೀರಮಾತೆ ಪುತ್ರರೆಂದು ವೀರಸಂತಾನರೆಂದು ಧರೆಯೊಳಿಂದು ಸಾರುವಾ ಮುಂದೆ ಸಾಗುವಾ॥ಪ॥ ತಾಯ ಸೇವೆಗಾಗಿ ಬನ್ನಿ ಧ್ಯೇಯಕಾಗಿ ದುಡಿವ ಬನ್ನಿ। ನಿದ್ದೆ ತೊರೆಯುವಾ, ಎದ್ದು ನಿಲ್ಲುವಾ, ಸಿದ್ಧರಾಗುವಾ। ಕತ್ತಲನ್ನು ಕಬಳಿಸುತ್ತ, ಸುತ್ತ ಬೆಳಕನರಳಿಸುತ್ತ। ಮುಕ್ತ ರವಿಯು ಮೂಡುವಾ ನೋಡೆ ನೋಡುವಾ॥1॥ ಭಗವದ್ಧ್ವಜ ಹಾರುತಿಹುದು, ಮುಗಿಲ ಮೇಲೇರುತಿಹುದು। ಶುಭವ ಕೋರುತಾ, ಅಭಯವೀಯುತಾ, ಪ್ರಭೆಯ ಬೀರುತಾ। ಭೋಗ ವಿಷಯ ರಾಗ ತ್ಯಜಿಸಿ, ತ್ಯಾಗಭಾವ ಮನದಿ ನಿಲಿಸಿ। ಭಾಗ್ಯಪೂರ್ಣ ನಾಡ ಯೋಗ್ಯ ಮಕ್ಕಳೆನಿಸುವಾ॥2॥ ಮುಂದೆ ನಡೆಯೆ ಸ್ವರ್ಗದ್ವಾರ, ಹಿಂದೆ ಸರಿಯೆ ನರಕ ಘೋರ। ಎಂದು ಸಾರುವಾ, ಮುಂದೆ ಸಾಗುವಾ, ವಿಜಯ ಗಳಿಸುವಾಗ ಮುಂದುವರಿಯೆ ತಡೆವರಾರು? ಸಂಘಶಕ್ತಿಗೆದುರು ಯಾರು? ಅಸುರ ಬಲವು ಬೆದರಿ ಜಾರುತಿಹುದ ಕಾಣುವಾ॥3॥ ಜಯ ಜಯ ಜಯ ಮಾತೃಭೂಮಿ, ಮಂಗಳಕರ ಪುಣ್ಯಭೂಮಿ ಎಂದು ಪಾಡುವಾ, ಘೋಷಗೈಯುವಾ, ಹರ್ಷಗೊಳ್ಳುವಾ ಮಾತೃಭಕ್ತ ಹೃದಯವಿರಲು, ಈಶನೊಲುಮೆ ಬಲವದಿರಲು। ಕಾಲಯಮನ ತಡೆಯುವಾ ಧೀರರೆನಿಸುವಾ॥4॥

ಮುದ್ದು ಮಕ್ಕಳೆಲ್ಲ ನಾವು — ರಾಗ: ಮಾಂಡ್

ಮುದ್ದು ಮಕ್ಕಳೆಲ್ಲ ನಾವು ಮುಂದೆ ಸಾಗುವಾ। ಜಾತಿ ಬೇಧವನ್ನು ತೊರೆದು ಒಂದೆ ಆಗುವಾ। ಪ್ರೀತಿಯಿಂದ ದ್ವೇಷಜಯಿಸಿ ವೀರರಾಗುವಾ। ಶಾಂತಿಯಿಂದ ರೋಷ ಜಯಿಸಿ ಧೀರರಾಗುವ॥ 1॥ ಸತ್ಯಶಾಂತಿ ಪಾಠವನ್ನು ನಿತ್ಯ ಕಲಿಯುವಾ। ಕಲಿತಪಾಠ ಮರೆಯದಂತೆ ನಾವು ನಡೆಯುವಾ। ಚಂದದಿಂದ ಒಂದುಗೂಡಿ ಆಟ ಆಡುವಾ। ಶ್ರದ್ಧೆಯಿಂದ ವಿದ್ಯೆ ಕಲಿತು ಜಾಣರೆನಿಸುವಾ॥ 2॥ ದೇಶವಿದೋ ನಮ್ಮ ದೈವ ಎಂದು ಹಾಡುವಾ। ಭಾರತಾಂಬೆ ನಮ್ಮ ಮಾತೆ ಎಂದು ನಲಿಯುವಾ॥3॥

ಲಕ್ಷ್ಯಹೈ ಮಹಾನ್ ಸದಾ ಮಿಲ್ ಕೆ ಚಲೋ (ಹಿಂದಿ) — ರಾಗ: ಶುದ್ಧಧನ್ಯಾಸಿ

ಲಕ್ಷ್ಯ ಹೈ ಮಹಾನ್ ಸದಾ। ಮಿಲ್‌ಕೆ ಚಲೋ। ದೇಶ್ ಕೆ ಜವಾನ್ ಸದಾ ಮಿಲ್ ಕೆ ಚಲೋ। ದೇಶ್ ಕಾರ್ಯ್

ಜಿಂದಗೀ ಉನ್ನತೀ ಕಾ ರಾಜ್। ಏಕ್ ಹೋಂಗೆ ಚಲನಾ ಯಹೀ ದೇಶ್ ಕೀ ಆವಾಜ್। ದೇಶ್ ಕೀ ಸ್ವತಂತ್ರತಾ ಕಾ ಏಕತಾ ಹೈ ಪ್ರಾಣ್ ಬಢೋ ಕದಮ್ ಮಿಲಾಕೆ ಕರೆ ಏಕತಾ ಕಾ ಗಾನ್॥1॥ ಧರ್ಮ್ ಔರ್ ಜಾತಿ ಹೈ ಸಮಾನತಾ ಕಾ ಭಾಗ್। ಸಾಧನಾ ಹೋ ಏಕ್ ಮನ್ ಮೆ ಏಕತಾ ಕೀ ಜಾಗ್। ಏಕತಾ ಕೀ ರಾಹ್ ಪರ್ ದೇಶ್ ಕಾ ಹೈ ಮಾನ್। ಬಢೋ ಕದಮ್ ಮೀಲಾಕೆ ಕರೆ ಏಕತಾ ಕಾ ಗಾನ್॥2॥ ಪ್ರಾಂತ್ ಪ್ರಾಂತ್ ಕಾ ಮಿಲನ್ ಹೈ ದೇಶ್ ಕೀ ಅಖಂಡತಾ। ಅಪನಿ ಭಾಷಾ ಮೆ ಹೈ ಕಿಂತು ದೇಶ್ ಕೀ ಮಹಾನತಾ। ರಾಷ್ಟ್ರಭಾಷ ಹೋ ಹಮಾರೀ ಏಕತಾ ಕೀ ಜಾನ್। ಬಢೋ ಕದಮ್ ಮಿಲಾಕೆ ಕರೆ ಏಕತಾ ಕಾ ಗಾನ್॥3॥

ಲೆಫ್ಟ್ ರೈಟ್ ಲೆಫ್ಟ್ — ರಾಗ:ಶುದ್ಧಧನ್ಯಾಸಿ

ಲೆಫ್ಟ್ ರೈಟ್ ಲೆಫ್ಟ್ (4 ಸಾರಿ) ಏಳು ಗೆಳೆಯಾ ಆ..... ಕಾಳಗಕ್ಕೆ ಮನಮಾಡಿ। ಮರೆ ಮನೆಯಾ ಮನೆ ಮನೆಯ ಲೆಫ್ಟ್ ರೈಟ್ ಲೆಫ್ಟ್॥ಪ॥ ರಮಝುಣ ರಮಝುಣ ರಮಡೋಲು। ಕೈ ಬೀಸ್ತ ಪದಹೇಳ್ತಾಯಿದೆ ಕಾಲು. ಇದೆ ಕಾಲು। ಲೋಕದೊಳ್ಗೆ ಏನೈತೆ ಇದ್ಕು ಮೇಲು ನಮ್ಮ ದೊರೆ ಇಚ್ಚೆ। ಶಿವನಿಚ್ಚೆ ಎನುತ ಸಾಗು ಲೆಫ್ಟ್ ರೈಟ್ ಲೆಫ್ಟ್ ಏಳು ಗೆಳೆಯಾ॥1॥ ಇಕ್ಕೋ ಇಕ್ಕೋ ಸರಿಗೈತೆ ಈ ದ್ರಿಸ್ಸು ಇಕ್ಕಿದ ಮೇಲೆ ಉಕ್ತೈತೆ ಹುಮ್ಮಸ್ಸು। ಕಂಡ ಜನರಿಗಾಗ್ತೈತೆ ಎದೆ ಝಳಕು ನಮ್ಮೂರಾಗೆ ಯಾರಿಗೈತೆ ಈ ಥಳಕು ಲೆಫ್ಟ್ ರೈಟ್ ಲೆಫ್ಟ್ ಏಳು ಗೆಳೆಯಾ॥2॥ ಹೊಡಿ ಅಂದ್ರೆ ಹೊಡಿಯಬೇಕು ನಿಮ್ಮ ನಾಯಕ। ಕಡಿ ಅಂದ್ರೆ ಕಡಿಯಬೇಕು ನಿಮ್ಮ ನಾಯಕ। ಆಡ್ರು ಮಳ್ವಾಗ ನೋಡ್ಬೇಕು ಅವನ ಸಿಡುಕ ಉಂಹು ಅಂದ್ರೆ ತಾಳ್ ಚೌದೆ ಅವನ ಸಿಡುಕ ಲೆಫ್ಟ್ ರೈಟ್ ಲೆಫ್ಟ್ ಏಳು ಗೆಳೆಯಾ॥3॥

ಶಾಂತಿಯ ಸಿಪಾಯಿ ನಡೆ — ರಾಗ: ಶುದ್ಧಧನ್ಯಾಸಿ

ಶಾಂತಿಯ ಸಿಪಾಯಿ ನಡೆ। ಕ್ರಾಂತಿಯಾ ಸಿಪಾಯಿ ನಡೆ। ಜನತೆ ಸೇವೆಗಾಗಿ ನಡೆ। ಸಹನೆಯಿಂದ ಮುಂದೆ ನಡೆ। ಶಾಂತಿಯಾ ಸಿಪಾಯಿ ನಡೇ ನಡೇ ನಡೇ॥1॥ ವೈರಭಾವ ಮರೆಯುತಾ। ಪ್ರೇಮಭಾವ ಬೆಳೆಸುತಾ। ಭೇದಭಾವ ಅಳಿಸುತಾ। ನಮ್ರನಾಗಿ ನಡೆಯುತಾ। ಜನತೆ ಸೇವೆಗಾಗಿ ನಡೆ। ಶಾಂತಿಯಾ ಸಿಪಾಯಿ ನಡೆ॥2॥ ದ್ವೇಷ ಭಯವು ಇಲ್ಲವು ಕೋಪವೆಲ್ಲ ಮಾಯವು। ಸೇವೆಯೊಂದೆ ಇರುವ ಗುರಿಯು। ಜನರ ಅಂತರಾತ್ಮ ಕರೆಯು। ಶಾಂತಿಯಿಂದ ಮುಂದೆ ನಡೆ। ಸಹನೆಯಿಂದ ಮುಂದೆ ನಡೆ। ಶಾಂತಿಯಾ ಸಿಪಾಯಿ ನಡೆ.....॥3॥ ಸತ್ಯದಲ್ಲಿ ನಿಷ್ಠೆಯೂ ಅಹಿಂಸೆಯಾ ದೃಷ್ಟಿಯೂ। ಶಾಂತಿ ಕಾರ್ಯಕ್ಕಾಗಿ ಪ್ರಾಣ। ನೀಗುವವನೆ ನಿಜದಿ ಜಾಣ। ನಮ್ರನಾಗಿ ಮುಂದೆ ನಡೆ। ಶಾಂತಿಯಾ ಸಿಪಾಯಿ ನಡೆ॥4॥ ಜೈ ಜಗತ್ ಜೈ ಜಗತ್ ಜೈ ಜಗತ್ ಎಂದೆನ್ನುತಾ। ಊರು ಊರು ತಿರುಗುತಾ। ಪ್ರೇಮ ಶಸ್ತ್ರ ಹಿಡಿಯುತಾ। ನಿರುತ ಸೇವೆ ಮಾಡುತಾ। ನಮ್ರನಾಗಿ ಮುಂದೆ ನಡೆ। ಶಾಂತಿಯಾ ಸಿಪಾಯಿ ನಡೆ....॥5॥

ಸಾಗಿ ಮುಂದೆ ಭಾರತೀಯರೇ ಇಂದೇ

ಸಾಗಿ ಮುಂದೆ ಭಾರತೀಯರೇ ಇಂದೆ ವಂದೇಮಾತರಮ್। ವಂದೇ ಮಾತರಂ ಎನ್ನಿರೋ॥ ದಾಸ್ಯ ಪಾಶ ಹರಿಸಿರೋ। ಹಾರಿರೋ ತೂರಿರೋ ಹೇ.. ಹೇ..॥ಪ॥ ಶಾಂತಿ ಸತ್ಯ ಪಾಠ। ನಮ್ಮ ನಾಡ ಬಾವುಟ। ಚಟಚಟ ಪಟಪಟ। ನಮ್ಮ ಗುಡಿಯು ಬಾನ ಮಟ್ಟ॥1॥ ಹಿಮಾಚಲಕೆ ಹಾರಿರೋ। ಜಗದ ದಾರಿ ತೋರಿರೋ। ಹಾರಿಸಿ ಏರಿಸಿ ಶಾಂತಿ ಭೇರಿ ಬಾರಿಸಿ॥2॥ ಹೆಜ್ಜೆ ಹೆಜ್ಜೆ ಮುಂದೆ ಇಟ್ಟು ಹರುಷಗೀತೆ ಹಾಡುತ। ರಾಷ್ಟ್ರ ಪರವೆ ಜೀವನ। ರಾಷ್ಟ್ರಕ್ಕಾಗಿ ನೀಗಲು॥3॥ ಹಿಂದು ಸಿಂಹ ಮುಂದೆ ಸಾಗು ಅಂಜದಿರಲೋ ಮರಣಕೆ। ಎತ್ತಿ ಎತ್ತು ಗಗನಕೆ ಸ್ಫೂರ್ತಿ ಬೀರು ಜನತೆಗೆ॥4॥

ಕ್ರಾಂತಿಗೀತೆ

ಕಣ್ತುಂಬ ನೋಡಮ್ಮ ಹರಸು ತಾಯೆ **ರಾಗ: ಸೌಖ್ಯದಾಯಿನಿ**

ಕಣ್ತುಂಬ ನೋಡಮ್ಮ ಹರಸು ತಾಯೆ ಭಾರತದ ಭಾಗ್ಯೇಶ್ವರಿ ಸಲಹೆಮ್ಮ ತಾಯೆ।।ಪ।। ಕೋಟಿ ಮೂವತ್ತೈದು ಕೊರಳುಗಳ ತಾರಸ್ವರ ಒಗ್ಗೊರಳ ಮೇಳದಲಿ ಮೊಳಗುತ್ತಿದೆ ನೋಡಾ। ಮೊಳಗುತಿದೆ ಪರತಂತ್ರ ಕೊನೆಗೊಂಡಿತೆನ್ನುತ್ತೆ ಸಕಲ ಸಾಧನವಾಯ್ತು ಸ್ವಾಧೀನವೆನುತೇ।।1।। ಗಂಡು ಹೆಣ್ಣುಗಳೆನದೆ ಕುಂದೆನದೆ ಮತವೆಸದೆ ನಿನ್ನ ಮಕ್ಕಳು ನಿಂತ ನೆಲವ ನೋಡಾ। ಸ್ವಾತಂತ್ರ್ಯ ಗೀತೆಗಳ ಹಿಮ್ಮೇಳ ಮಾರುಲಿಯೆ ಭೂಮಿಯಾಕಾಶಗಳ ಪುಳಕ ನೋಡಾ।।2।। ಇಷ್ಟವಿಲ್ಲದ ಮನದಿ ಅರೆಲೋಕ ಬಾಪೆನಲು ಭುಜವೆತ್ತಿ ನಿನ್ನ ಧ್ವಜವಾಡುತಿದೆ ನೋಡಾ। ಹತ್ತು ದಿಕ್ಕಿನ ಗಾಳಿ ಹೊತ್ತ ಪರಿಮಳವೆರೆದು ನೆತ್ತಿಯನು ನೆಲಕ್ಕಿಕ್ಕಿ ಬಾಗಿಹುದು ನೋಡಾ।।3।। ಸಾಗರದ ಆಳಕ್ಕೆ ಅಡಿಯೂರಿ ಮೇಲೆದ್ದು ಧವಳ ಗಿರಿಯೇರಿರುವ ಪರಿಯ ನೋಡಾ। ನಿನ್ನ ಕೀರುತಿ ಕಲಶ ಗೌರಿಶಂಕರಕಿದಿರು ಮೇಲುಗಿರಿಯಲಿ ನೆಟ್ಟ ವಿಭವ ನೋಡಾ।।4।। ಆಫ್ರೀದಿ ಆಫ್ಘಾನಿ ಬರ್ಮ ಸಿಂಹಳರೆಲ್ಲ ಮೂಡಲೇಶ್ವರರೋಲವು ನೋಡು ನೋಡಾ। ಸತ್ಯ ಧರ್ಮದ ರಾಜ್ಯ ಸಾಮ್ರಾಜ್ಯವಾಗುತ್ತಿದೆ ಜಗವೆಲ್ಲ ಸ್ವಾಗತವ ಕೊಡುತಿಹುದು ನೋಡಾ।।5।।

ಬನ್ನಿರಿ ಬಾಲರೆ ಬನ್ನಿರೆ ವೀರರೆ **ರಾಗ: ಶಂಕರಾಭರಣ**

ಬನ್ನಿರಿ ಬಾಲರೆ ಬನ್ನಿರಿ ವೀರರೆ। ಬನ್ನಿರಿ ಸ್ವದೇಶದುನ್ನತಿಗೆ। ಬನ್ನಿರಿ ದ್ವಿಜರೇ ಬನ್ನಿರಿ ಬುಧರೇ ಬನ್ನಿರಿ ಸ್ವರಾಜ್ಯ ಸ್ಥಾಪನೆಗೆ।।1।। ಭಾರತಮಾತೆಯ ಭಾರವ ತೊಲಗಿಸಿ। ಭಾರತ ವೀರರು ನೀವೆನಿಸಿ। ಭಾರತ ಖಂಡದ ಭಾಗ್ಯವದೆನಿಸಿ। ಭಾರತ ಪುತ್ರರು ನಿಜವೆನಿಸಿ।।2।। ಖಾದಿಯ ಕೊಳ್ಳಿರಿ ಖಾದಿಯ ಧರಿಸಿರಿ। ಖಾದಿಗೆ ಉತ್ತೇಜನ ಕೊಡಿರಿ। ಖಾದಿಯು ಸಿರಿತನವಾದಿಯ ತೋರ್ಪುದು। ಖಾದಿಯ ನೂಲು ತಯಾರಿಸಿರಿ।।3।।ಬ್ರಿಟೀಷ್ ಕೈಗಾರಿಕೆ ಕುಟಿಲ ಪದಾರ್ಥಕೆ ಕಟಾಕ್ಷವೀಯದೆ ಧಿಕ್ಕರಿಸಿ। ಚಪಲ ಪಂಥರೇ ದಿಟವಿರಾಜರೇ ಘಟಬಿದ್ದರೂ ಸಮ ಹಠ ಜಯಿಸಿ।।3।।

ವರ ಭವ್ಯ ಭಾರತದ **ರಾಗ: ಹಿಂದೋಳ**

ವರ ಭವ್ಯ ಭಾರತದ ನಿರ್ಭೀತ ಸಂತತಿಗೆ। ಸಂಗ್ರಾಮ ಸಂಗೀತ ಹಾಡುವಾಸೆ। ರಣಭೇರಿ ಕಹಳೆಗಳ ಘನಘೋರ ಗರ್ಜನೆಗೆ। ನಲಿದು ನರ್ತಿಸುತ ಹೋರಾಡುವಾಸೆ।।ಪ।। ಮಾನವತೆ ಉದ್ಧಾರ ಮಾತೃ ವೈಭವಕ್ಕಾಗಿ। ಬೆವರು ನೆತ್ತರ ಸುರಿಸಿ ದುಡಿಯುವಾಸೆ। ದೇಶಹಿತ ಧರ್ಮಹಿತ ಸರ್ವಜನ ಹಿತಕಾಗಿ। ಕಲಿತನದಿ ಕಾದಾಡಿ ಮಡಿಯುವಾಸೆ।।1।। ಸವ್ಯಸಾಚಿಯ ತೆರದಿ ದಿವ್ಯಾಸ್ತ್ರಗಳ ಪಡೆದು। ಮರಳಿ ಕುರುಕ್ಷೇತ್ರದೊಳು ನಿಲ್ಲುವಾಸೆ। ಭೋರ್ಗರೆವ ಪಾಂಚಜನ್ಯದಾ ರಣಘೋಷ। ಭೂಮಂಡಲಕ್ಕೆ ವಿಸ್ತರಿಸುವಾಸೆ।।2।। ಧ್ಯೇಯದಾ ಪದವಿ ಅರ್ಚನೆಯ ಹೂವಾಗಿ। ಧನ್ಯತೆಯ ಸಂತೃಪ್ತಿ ಪಡೆಯುವಾಸೆ। ವ್ಯಕ್ತಿಗತ ಮಾನ ಅಪಮಾನಗಳ ಬದಿಗಿರಿಸಿ। ಭಾರತಿಯ ಅಡಿಯ ಹುಡಿ ಆಗುವಾಸೆ।।3।।

ಹಿಡಿ ಪತಾಕೆ ಹಿಡಿ ತುಪಾಕಿ **ರಾಗ: ಕಲ್ಯಾಣವಸಂತ**

ಹಿಡಿ ಪತಾಕೆ ಹಿಡಿ ತುಪಾಕಿ। ತೊಡಿರಿ ಕಾಕಿ ಹೆಜ್ಜೆ ಹಾಕಿ ಕೂಗಿರಿ.... ಜೈ ಭಾರತಕೆ।।ಪ।। ಅವಳ ಧವಳ ನೆತ್ತಿಗೆ ಬೀಸೆತ್ತಿನ ಸುತ್ತಿಗೆ। ಹಿಮಾಲಯದ ಕತ್ತಿಗೆ ಕುಡುಗೋಲಿನ ಮುತ್ತಿಗೆ।। ಸೀಳಿ ಕೇಳಿ ಅವನ ಕರುಳ ತಾಯ ಮಡಿಲ ಬೆಳ್ಳಿಹರಳ। ಹಾಕಿ ನೆತ್ತರದಮಂಗಲ ಬರೆ ಕಲ್ಲೊರೆ ಶಾಸನ।। 1।। ಅಕಾಲೀಯ ಮರ್ದನ ಮಾಡಲೆದ್ದ ನವ ಜವಾನ। ಜನಕ ಜನಾರ್ಧನ ಜಗದ ಹರ್ಷವರ್ಧನ।। ಫಾಹಿಯಾನ ಹುಯನ್‌ತ್ಸಾಂಗ। ಯಾತ್ರೆಗೈದ ಹಿಮೋತ್ತುಂಗ ಕಣಿವೆಗಳಲಿ ಮಾಂಸತುಂಗ ಕಬಳಿಸುತಿಹ ಕಾಳಿಂಗ।।2।।

ಸಾಮಾನ್ಯ

ಅಮರವಾಗಲಿ ಭಾರತದೇಶ ರಾಗ: ಮೋಹನ

ಅಮರವಾಗಲಿ ಭಾರತದೇಶ। ಬೆಳೆಯಲಿ ನಮ್ಮಲಿ ಸೋದರಭಾವಾ। ತಂದಾನ ತಾನಿ ತಾನಿ ತಂದಾನೋ ತಂದಾನ ತಾನಿ ತಾನಿ ತಂದಾನೋ॥ಪ॥ ತ್ರೇತಾಯುಗದಲ್ಲಿ ಶ್ರೀರಾಮ ಹುಟ್ಟಿ ರಾವಣನ ಕೊಂದಾ। ದ್ವಾಪರಯುಗದಲ್ಲಿ ಶ್ರೀಕೃಷ್ಣ ಹುಟ್ಟಿ ಕೌರವರ ಕೊಂದಾ। ಈ ಕಲಿಯುಗದಲ್ಲಿ ಗಾಂಧಿ ಮಹಾತ್ಮ ಶಾಂತಿಯ ತಾ ತಂದಾ। ಹಿಂದಿಂದ ಮುರಿಯಲು ಬಂದಿದೆ ಭೂತ(2ಸಾರಿ) ಮಗ್ಗಲು ನಾಡಿಂದಾ(2ಸಾರಿ)॥1॥ ರಾಮನ ನೆನೆಯಿರಿ ರಾಷ್ಟ್ರವ ಕಾಯಿರಿ ಬಂದಾ ಹಗೆಯಿಂದಾ। ಕೃಷ್ಣನ ನೆನೆಯಿರಿ ಕಷ್ಟವ ಕಳೆಯಿರಿ ಗೆಲ್ಲುತ ಹುರುಪಿಂದಾ। ಗಾಂಧಿ ಮಹಾತ್ಮರು ತಂದಾ ಸ್ವಾತಂತ್ರ್ಯವ ಕಾಪಾಡಿ ಕೆಚ್ಚಿಂದಾ। ನಾಡ ಹುತಾತ್ಮಗೆ ಶಾಂತಿಯು ಸಿಕ್ಕಲಿ(2ಸಾರಿ) ಸಿಂಹನಾದದಿಂದಾ(2ಸಾರಿ)॥2॥ ಕೀಳು ಮೇಲೆನ್ನದೆ ಬಿಡುವಿಲ್ಲದೆ ದುಡಿ ದೇಶ ಪ್ರೇಮದಿಂದಾ। ಸಲ್ಲಿಸು ಸೇವೆಯ ಸ್ವಾತಂತ್ರ್ಯಂಬೆಗೆ ತನುಮನ ಧನದಿಂದಾ। ಬೆಳಗಿಸು ಅವಳ ಜಯಕೀರ್ತಿ ಪತಾಕೆ ನಾಡಿಗೆ ನಾಡಿಂದಾ। ನಾಡ ಹುತಾತ್ಮಗೆ ಶಾಂತಿಯು ಸಿಕ್ಕಲಿ(2ಸಾರಿ) ನಮ್ಮ ತ್ಯಾಗದಿಂದಾ(2ಸಾರಿ)॥3॥

ಅನೇಕತಾಮೇ ಐಕ್ಯ ಮಂತ್ರಕೋ (ಹಿಂದಿ) ರಾಗ: ಶುದ್ಧಧನ್ಯಾಸಿ

ಅನೇಕತಾಮೇ ಐಕ್ಯ ಮಂತ್ರಕೋ ಜನಜನ ಫಿರ ಅಪನಾತಾ ಹೈ। ಧೀರೇ ಧೀರೇ ದೇಶ ಹಮಾರಾ ಆಗೇ ಬಢತಾ ಜಾತಾ ಹೈ॥ಪ॥ ಇಸಧರತೀ ಕೋ ಸ್ವರ್ಗ ಬನಾಯಾ ಋಷಿಯೋಂ ನೇ ದೇಕರ ಬಲಿದಾನ। ಉನ್ಹಿಂ ಕೆ ವಂಶಜ ಆಜ ಚಲೇ ಹೈ ಕರನೇ ಕೋ ಇಸಕಾ ನಿರ್ಮಾಣ। ಕರ್ಮಪಂಥ ಪರ ಆಜ ಸಭೀ ಕೋ ಗೀತಾಜ್ಞಾನ ಬುಲಾತಾ ಹೈ॥1॥ ಜಾತಿಪ್ರಾಂತ್ಯ ಔರ ವರ್ಗಭೇದಕೀ ಭ್ರಮ ಕೋ ದೂರ ಭಗಾನಾ ಹೈ। ಭೂಖ ಬೀಮಾರೀ ಔರ ಬೇಕಾರೀ ಸಬಕೋ ಆಜ ಮಿಠನಾ ಹೈ ಏಕ ರಾಷ್ಟ್ರಕಾ ಭಾವ ಜಗಾದೇ ಸಬಕೀ ಭಾರತ ಮಾತಾ ಹೈ॥2॥ ಹಮೇಂ ಕಿಸೀಸೇ ವೈರ ನಹೀಂ ಹೈ, ಹಮೇಂ ಕಿಸೀಸೇ ದ್ವೇಷ ನಹೀಂ। ಸಬಸೇ ಮಿಲಕರ ಕಾಮ ಕರೇಂಗೇ ಸಂಘಟನಾ ಕೀ ರೀತಿ ಯಹೀ। ನೀಲ ಗಗನ ಪರ ಭಗವಾಧ್ವಜ ಯಹ ಲಹರ ಲಹರ ಲಹರಾತಾ ಹೈ॥3॥

ಅರಳಲಿದೆ ನವ ಭಾರತ ದೇಶ ರಾಗ: ಸೌಖ್ಯದಾಯಿನಿ

ಅರಳಲಿದೆ ನವ ಭಾರತ ದೇಶ ಕಗ್ಗತ್ತಲ ಒಡಲಿಂದ। ಬೆಳಗಲಿದೆ ಭುವಿಯಂಗುಲ ಅಂಗುಲ ಹಿಂದುತ್ವದ ಪ್ರಭೆಯಿಂದ॥ಪ॥ ಮನುಜನ ಜನುಮವ ಸಾರ್ಥಕಗೊಳಿಸಿಹ ಮುನಿಜನರ ಮೃತವಾಣಿ। ಅನುಜತ್ವದ ಆದರ್ಶವ ಸಾರಿದ ಕಾವ್ಯಗಳದ್ಭುತ ಶ್ರೇಣಿ। ಚಿಮ್ಮಲಿದೆ ಚೈತನ್ಯದ ಚಿಲುಮೆ ಪ್ರಾಚೀನದ ನೆಲೆಯಿಂದ॥1॥ ಶತಶತಮಾನದ ಆ ಗತವೈಭವ ಭೂಗತವಾಗುವ ಮುನ್ನ। ಜಾಗೃತಗೊಳಿಸಿ ಸುಷುಪ್ತ ಜನಾಂಗವ ಸಮಯವು ಮೀರುವ ಮುನ್ನ। ಉದಿಸಲಿದೆ ನವ ಹಿಂದು ಸಮಾಜ ಗತ ಅವಶೇಷಗಳಿಂದ॥2॥ ಹಬ್ಬಿದ ಮಬ್ಬಲಿ ಗುರಿಯನು ತಪ್ಪಿದ ಮೌಢ್ಯವನಪ್ಪಿದ ಜನಕೆ। ಅರಿವಿನ ಈ ಅರುಣೋದಯಕಾಲದಿ ಇಳೆಯನೆ ಬೆಳಗುವ ಬಯಕೆ। ಮೂಡಲಿದೆ ನೂತನ ಆಶೋತ್ತರ ಹತ ಆಕಾಂಕ್ಷೆಗಳಿಂದ॥3॥ ದುಡುಕಿದ ಅನುಜರ ಸಿಡುಕಿನ ಕೃತ್ಯವು ತಂದಿರೆ ನಾಡಿಗಪಾಯ। ಒಡಕಿನ ಜಾಲಕೆ ಕೆಡುಕಿನ ಕಾಲಕೆ ಸಾರುತ ಅಂತ್ಯವಿದಾಯ। ಉಕ್ಕಲಿದೆ ಸಂಜೀವಿನಿ ಅಮೃತ ಹಾಲಾಹಲದೆಡೆಯಿಂದ॥4॥

ಆ ಸ್ವತಂತ್ರ ಸ್ವರ್ಗಕೆ ರಾಗ: ಕಲ್ಯಾಣವಸಂತ

ಆ ಸ್ವತಂತ್ರ ಸ್ವರ್ಗಕೆ ನಮ್ಮ ನಾಡು ಏಳಲೇಳಲೇಳಲೇಳಲಿ॥ಪ॥ ಎಲ್ಲಿ ಮನವು ನಿರ್ಭಯದಿ ತಲೆಯನೆತ್ತಿ ನಿಲುವುದೋ। ಎಲ್ಲಿ ಜ್ಞಾನಸುಧಾಪಾನ ಎಲ್ಲರಿಗೂ ಸಿಗುವುದೋ॥1॥ ಎಲ್ಲಿ ಮನೆಯ ಅಡ್ಡಗೋಡೆ ಇಲ್ಲದೆಯೆ ವಿಶಾಲವೋ। ಎಲ್ಲಿ ಮಾತು ಸತ್ಯದಾಳದಿಂದ ಹೊಮ್ಮಿ ಬರುವುದೋ॥2॥ ಎಲ್ಲಿ ಸತತ ಕರ್ಮಪೂರ್ಣ ಸಿದ್ಧಿ ಪಡೆದು ಮೆರೆವುದೋ। ಎಲ್ಲಿ

ತಿಳಿವು ಕಟ್ಟಳೆಯ ಮಳಲ ತೊರೆದು ಹರಿವುದೋ॥3॥ ಎಲ್ಲಿ ನೀನು ನಮಗೆ ಧೈರ್ಯ ಎಲ್ಲಿ ನೀನು ನಮಗೆ ಸ್ಥೈರ್ಯ ವರವಿಕಾಸಗೊಳಿಸಿ ಸದಾ ಅಭ್ಯುದಯವ ಕೋರುವೆಯೋ॥4॥

ಆಯಾ ಸಮಯ್ (ಹಿಂದಿ) **ರಾಗ: ಶುದ್ಧಧನ್ಯಾಸಿ**

ಆಯಾ ಸಮಯ್ ಜವಾನೋಂ ಜಾಗೋ ಭಾರತ್ ಭೂಮಿ ಪುಕಾರತೀ। ಉಠೋ ಶತ್ರು ಕಿ ಸೇನಾ ದೇಖೋ ಸೀಮಾ ಪರ್ ಲಲಕಾರ್‌ತೀ॥ ಬೈರೀ ಭಾರತ ಕೀ ಧರತೀಪರ್, ಕರತಾ ಕಿತನೀ ಮನ್‌ಮಾನೀ। ಆಜ್ ದಿಖಾ ದೋ ಉನ್ ದುಷ್ಟೋಂ ಕೋ, ಕಿತನಾ ಹೈ ಹಮ್‌ಮೆ ಪಾನೀ। ಕೈಸೆ ಚುಪ್ ಬೈಠೇ ಹೋ ಭಾಯಿ, ಜನನೀ ಬಾಟ್ ನಿಹಾರತೀ॥ ಮತ್ ಭೂಲೋ ರಾಣಾ ಪ್ರತಾಪ್ ಕೋ, ಔರ್ ಝಾನ್ಸೀಕಿ ಮಹಾರಾನೀ। ಮತ್ ಭೂಲೋ ಶಮ್‌ಶೇರ್ ಶಿವಾ ಕೋ, ತಾಂತ್ಯಾಟೋಪೆ ಸೆನಾನೀ। ಬತಲಾ ದೋ ಕೈಸೆ ಭಾರತ ಕೀ, ಸೇನಾ ಹೈ ಹೂಂಕಾರತೀ॥ ಆವೋ ಸಬ್ ಮಿಲ್‌ಕರೆ ಪ್ರತಿಜ್ಞಾ, ಮಾ ಕಾ ಕಷ್ಟ ಮಿಟಾಯೇಂಗೆ। ಜೈಸೆ ಭೀ ಹೋಗಾ ರಿಪುದಲ್ ಕೋ, ಹಮ ಸಬ್ ಮಾರ್ ಭಗಾಯೇಂಗೇ। ಸಮಯ ಆಗಯಾ ಅಬ್ ಬಢನೆ ಕಾ, ಬೋಲೋ ಜಯ ಜಯ ಭಾರತೀ॥

ಇದು ಭಾರತ ಇದು ಭಾರತಿ **ರಾಗ: ಮೋಹನ**

ಇದು ಭಾರತ ಇದು ಭಾರತಿ। ಇದು ಬಾಳಿನ ಬೆಳಕಿನ ಆರತಿ। ತಾತಾ ಆರತಿ॥ಪ॥ ಪಡುವಣ ಮೂಡಣ ಕಡಲಿನ ಕೂಡು। ಮೂಡುವ ಮುಳುಗುವ ನೇಸರ ಜೋಡು। ಉತ್ತರದೆತ್ತರ ಬೆಳ್ಳಿಯ ಬೀಡು ಮುಗಿಲನು ಸೀಳುವ ಗೂಳಿಯ ಕೋಡು॥1॥ ಮೀನಿನ ಹೆಣ್ಣಿನ ಮಗು ನುಡಿದಿತ್ತು। ಹುತ್ತದ ಕಣ್ಣಿನ ಪರೆಹರಿದಿತ್ತು। ಕಾಣದ ಲೋಕದ ಗಾಳಿಯ ಕಿಚ್ಚು। ಕತ್ತಲೆಯೊಳಗೂ ಬೆಳಕಾಗಿತ್ತು॥2॥ ನಮಗೀ ನೆಲಹೊಲ ಅನ್ನದ ಬಟ್ಟಲು। ಚಿಣ್ಣರಿ ಗಿದುವೇ ಚಿನ್ನದ ತೊಟ್ಟಿಲು। ನಾಳಿನ ಕನಸಿನ ಬಾಗಿಲು ತಟ್ಟಲು। ಹಿಂಜರಿಯದೆ ನಡೆ ಒಂದೇ ಮೆಟ್ಟಲು॥3॥

ಈ ಹಿಂದು ದೇಶವು ನಮ್ಮ ಮನೆ **ರಾಗ: ಮೋಹನ**

ಈ ಹಿಂದು ದೇಶವು ನಮ್ಮ ಮನೆ। ನಮ್ಮ ಮನೇ ಇದು ನಮ್ಮ ಮನೆ॥ ಉತ್ತರದಲ್ಲಿ ಭಾರಿ ಹಿಮಾಚಲ। ದಕ್ಷಿಣದಲ್ಲಿ ಕನ್ಯಾಕುಮಾರಿ। ಪೂರ್ವ ಪಶ್ಚಿಮದಲಿ ನೀಲಿ ಸಮುದ್ರ। ಪಡುವಣ ಮೂಡಣ ಬೆಟ್ಟದ ಸಾಲು॥1॥ ಕರ್ನಾಟಕ ಕೇರಳ ತಮಿಳ್‌ನಾಡು ಆಂಧ್ರ ಮುಂಬೈ ಅಸ್ಸಾಂ ಉತ್ಕಲವಂಗೇ। ರಾಜಾಸ್ಥಾನಾ ಪಂಜಾಬ್ ಕಾಶ್ಮೀರ ಉತ್ತರ ಮಧ್ಯ ಹಿಮಾಚಲ ಪ್ರಾಂತ್ಯ॥2॥ ತಾಯಿ ಕಾವೇರಿ ಕೃಷ್ಣ ಗೋದಾವರಿ। ನರ್ಮದ ತಪತೀ ತುಂಗಭದ್ರತಾ। ಗಂಗಾ ತಾಯಿ ಸಿಂಧೂ ರಾಣಿ। ಚಂದದಿ ಹರಿಯುವ ಅಂದದನಾಡು॥3॥ ಗೀತ ಸಂದೇಶ ಆದೇಶದಂತೆ। ಕಾತುರರಾಗಿ ಕಾಯುವ ನಾವು। ಗೀತಾ ಮಾತೆಯ ಗೀತೆಯ ನೆನೆಯುತ। ಮಾತೆಯ ಕಾಯುವ ಬೇಗನೆ ಬನ್ನಿ॥4॥

ವೈಷ್ಣವ ಜನ ತೋ (ಗುಜರಾತಿ) **ರಾಗ : ಯಮನ್, ತ್ರಿತಾಳ**

ವೈಷ್ಣವ ಜನ ತೋ ತೇನೇ ಕಹಿಯೇ। ಜೇ ಪೀಡ ಪರಾಯೀ ಜಾನೇರೇ॥ಪ॥ ಪರದುಃಖೇ ಉಪಕಾರ ಕರೇ ತೋಯೇ। ಮನ ಅಭಿಮಾನ ನ ಆರೇ ರೇ॥ ಸಕಳ ಲೋಕಮಾಂ ಸಹುನೇ ವಂದೇ। ನಿಂದಾ ನ ಕರೇ ಕೇನೀ ರೇ। ವಾಚ ಕಾಛ ಮನ ನಿಶ್ಚಳ ರಾಖೇ। ಧನ ಧನ ಜನನೀ ತೇನೀ ರೇ॥ ಸಮದೃಷ್ಟಿ ನೇ ತೃಷ್ಣಾ ತ್ಯಾಗೀ। ಪರಸ್ತ್ರೀ ಜೇನೇ ಮಾತ ರೇ। ಜಿಹ್ವಾ ಥಕೀ ಅಸತ್ಯ ನ ಬೋಲೇ ಪರಧನ ನವ ಝಾಲೇ ಹಾಥರೇ॥ ಮೋಹ ಮಾಯಾ ವ್ಯಾಪೇ ನಹಿ ಜೇನೇ। ದೃಢ ವೈರಾಗ್ಯ ಜೇನಾ ಮನಮಾಂ ರೇ। ರಾಮನಾಮಶು ತಾಳೀ ಲಾಗೀ॥ ಸಕಳ ತೀರಥ ತೇನಾ ತನಮಾಂ ರೇ॥ ವಣಲೋಭಿ ನೇ ಕಪಟರಹಿತ ಛೇ॥ ಕಾಮ ಕ್ರೋಧ ನಿವಾರ್ಯ ರೇ। ಭಣೇ ನರಸೈಯೋ ತೇನು ದರುಸನ ಕರತಾ। ಕುಳ ಏಕೋತೇರ ತಾರ್ಯಾರೇ॥

ಎಲ್ಲರ ನೋವನು ಬಲ್ಲವನಾದರೆ (ಮೇಲಿನ ಕೃತಿಯ ಕನ್ನಡಾನುವಾದ) ರಾಗ:ಯಮನ್

ಎಲ್ಲರ ನೋವನು ಬಲ್ಲವನಾದರೆ। ಗೆಲ್ಲುವೆ ನೀನು ಬಾಳಲ್ಲಿ।।ಪ।। ಲೋಭವಿಲ್ಲದ ಉಪಕಾರವೆ ಸುಖವು। ಗರ್ವವು ಬರದಿರೆ ಮನದಲ್ಲಿ।।ಅ.ಪ.।। ಸಕಲ ಜೀವದಲಿ ಗೌರವವಿರಲಿ। ನಿಂದೆ ಅಸೂಯೆ ಅಳಿದಿರಲಿ। ನಿರ್ಮಲ ನಡೆನುಡಿ ನಿಶ್ಚಲ ನಿಲುವನು। ಕಲಿಸಿದ ತಾಯಿಗೆ ಹಿತವಿರಲಿ।। 1।। ಸಮಭಾವದಲಿ ದುರಾಸೆಯು ನೀಗಲಿ। ವನಿತೆಗೆ ಅಭಯದ ನೆರಳಿರಳಿ। ಸುಳ್ಳಿನ ರುಚಿಯನೆ ಅರಿಯದ ನಾಲಿಗೆ। ಪರಧನವನ್ನು ಬೇಡೆನಲಿ।।2।। ಥಳುಕು ಬೆಳಕುಗಳ ಮೋಹವ ಮೀರಿ। ಸ್ಥಿತಪ್ರಜ್ಞೆಯ ಮನ ಉದಯಿಸಲಿ। ಮನುಜ ರೂಪದಲೆ ದೇವರ ಕಂಡರೆ ಪುಣ್ಯಧಾಮಗಳೆ ಹೃದಯದಲಿ।।3।। ಕಪಟವರಿಯದೆ ಸಾಗು ನೀ ಬೀಳದೆ। ರಾಗ ದ್ವೇಷಗಳ ಸುಳಿಯಲ್ಲಿ। ಮಮತೆಯಲ್ಲಿಯೆ ಮನುಜನಾಗುವಾ। ಪಯಣವೆ ಬಾಳಿನ ಗುರಿಯಿಲ್ಲ।।4।।

ಎಲೆಗಳು ನೂರಾರು ಭಾವದ ರಾಗ: ಮಾಂಡ್

ಎಲೆಗಳು ನೂರಾರು ಭಾವದ ಎಳೆಗಳು ನೂರಾರು। ಎಲೆಗಳ ಬಣ್ಣ ಒಂದೇ ಹಸಿರು। ಜಾತಿ ಭಾಷೆ ಪಂಥ ಹಲವು। ಅವುಗಳ ಹಿಂದೆ ಮಾತ್ರ ಒಂದೇ ಒಲವು।।ಪ।। ಸಾಗೋಣ ಒಟ್ಟಿಗೆ ಸಾಗೋಣ। ನಾವು ನೀವು ಸೇರಿ ಒಂದಾಗಿ। ನೀಗೋಣ ಭಿನ್ನತೆ ನೀಗೋಣ। ಸಾವಿರ ಹೆಜ್ಜೆ ಒಂದೇ ಗುರಿಗಾಗಿ।।1।। ಕಿಡಿಗಳು ನೂರಾರು ಬೆಳಕಿನ ಕುಡಿಗಳು ನೂರಾರು। ಬೆಳಕಿನ ಪರಿಗೆ ಒಂದೇ ಹೆಸರು। ಸೂರ್ಯ ಚಂದ್ರ ಲಾಂದ್ರ ಹಣತೆ। ಅವುಗಳ ಹಿಂದೆ ಮಾತ್ರ ಒಂದೇ ಘನತೆ।।2।। ತೆರೆಯೋಣ ಹೃದಯ ತೆರೆಯೋಣ। ನಾವು ನೀವು ಸೇರಿ ಒಂದಾಗಿ।।2।। ಮರೆಯೋಣ ಭೇದ ಮರೆಯೋಣ। ನದಿಗಳು ಕೂಡಿದ ಪ್ರೀತಿಯ ಕಡಲಾಗಿ।।3।। ಪದಗಳು ನೂರಾರು ಬದುಕಿನ ಹದಗಳು ನೂರಾರು। ಪದಗಳ ಹಿಂದೆ ಒಂದೇ ಉಸಿರು। ಅಕ್ಕರೆಯಿಂದ ಒಟ್ಟಿಗೆ ಬಾಳೋಣ। ಭಾರತಮಾತೆಗೆ ನಮ್ಮ ಪ್ರೀತಿಯ ತೋರೋಣ।।4।। ಕಟ್ಟೋಣ ನಾಡನು ಕಟ್ಟೋಣ ನಾವು ನೀವು ಸೇರಿ ಒಂದಾಗಿ। ಮುಟ್ಟೋಣ ಮಾಡನು ಮುಟ್ಟೋಣ। ತಾರೆಗಳೇ ಈ ನಾಡಿನ ಸೂರಾಗಿ।।5।।

ಏಕ್ ಹಮಾರೀ ಧರತೀ ಸಬ್ ಕೀ (ಹಿಂದಿ)

ಏಕ್ ಹಮಾರೀ ಧರತೀ ಸಬ್ ಕೀ ಜಿಸಕಿ ಮಿಟ್ಟಿಮೆ ಜನಮೆ ಹಮ್। ಮಿಲಿ ಏಕ್ ಹೀ ಧೂಪ್ ಹಮೆ ಹೈ। ಸೀಂಚೆ ಗಯೆ ಏಕ ಜಲಸೆ ಹಮ್।। ಫಲೇ ಹುಎ ಹೈ ಝೂಲ್ ಝೂಲ್‌ಕರ್। ಪವನೋಂಮೆ ಹಮ್ ಏಕ್ ಪವನ್ ಕೆ। ರಂಗ ರಂಗಕೆ ರೂಪ್ ಹಮಾರೆ। ಅಲಗ್ ಅಲಗ್ ಹೈ ಕ್ಯಾರೀ ಕ್ಯಾರೀ।। ಲೇಕಿನ್ ಹಮ್ ಸಬ್‌ಸೆ ಮಿಲಕರ್ ಹೀ। ಇಸ್ ಉಪವನ ಕೀ ಶೋಭಾ ಸಾರೀ। ಏಕ್ ಹಮಾರಾ ಮಾಲೀ ಹಮ್ ಸಬ್। ರಹತೆ ನೀಚೆ ಏಕ್ ಗಗನಕೆ।। ಸೂರಜ್ ಏಕ್ ಹಮಾರಾ ಜಿಸ್‌ಕೀ। ಕಿರಣೋಂ ಉಸಕೀ ಕಲೀ ಖಿಲಾತೀ। ಏಕ್ ಹಮಾರಾ ಚಾಂದ್ ಚಾಂದ್ ನೀ। ಜಿಸಕೀ ಹಮ್ ಸಬಕೋ ನಹಲಾತೀ।।ಮಿಲೆ ಏಕ್‌ಸೆ ಸ್ವರ ಹಮ್‌ಕೋ ಹೈ। ಭ್ರಮರೋಂಕೆ ಮೀಠೆ ಗುಂಜನ್ ಕೆ।। ಕಾಂಟೋಂಮೆ ಖಿಲಕರ್ ಹಮ್ ಸಬ್‌ನೆ ಹಸ್ ಹಸ್ ಕರ್ ಹೈ ಜೀನಾ ಸೀಖಾ ಏಕ ಸೂತ್ರಮೆ ಬಂಧ್‌ಕರ್ ಹಮ್‌ನೆ ಹಾರ್ ಗಲೇ ಕಾ ಬನ್‌ನಾ ಸೀಖಾ।। ಸಬ್‌ಕೆಲಿಯೆ ಸುಗಂಧ್ ಹಮಾರೀ ಹಮ್ ಶೃಂಗಾರ್ ಧನೀ-ನಿರ್ಧನ್ ಕೆ।।

ಏ ಮೇರೆ ಪ್ಯಾರೆ ವತನ್ (ಹಿಂದಿ) ರಾಗ: ಕಲಾವತಿ

ಏ ಮೇರೆ ಪ್ಯಾರೆ ವತನ್ ಏ ಮೇರೆ ಬಿಛಡೆ ಚಮನ್। ತುಝ್ ಪರ್ ದಿಲ್ ಕುರ್ಬಾನ್। ತೂಹಿ ಮೇರೀ ಆರಜೂ ತೂಹಿ ಮೇರೀ ಆಬರೂ ತೂ ಹಿ ಮೇರೀ ಜಾನ್।। ತೇರೆ ದಾಮನ್ ಸೆ ಜೋ ಆಯೇ। ಉನ್ ಹವಾ ಓಂ ಕೊ ಸಲಾಮ್। ಚೂಮ್ ಲೂಂ ಮೈ ಉಸ್ ಜುಬಾನ್ ಕೊ। ಜಿಸ್ ಪರ್ ಆಯೆ ತೇರಾ ನಾಮ್। ತೂ ಹಿ ಮೇರೀ ಬಹುರಿ ಕಿಸ್ಮತ್। ತೂಹಿ ಮೇರೀ ಜಾನ್ । ತುಝ್ ಪರ್ ದಿಲ್ ಕುರ್ಬಾನ್।।

ಒಂದಾಗಿರುವೆವು ನಾವೆಲ್ಲ **ರಾಗ: ಮೋಹನ**

ಒಂದಾಗಿರುವೆವು ನಾವೆಲ್ಲ ಚೆಂದಾಗಿರುವೆವು ನಾವೆಲ್ಲಾ। ಹಿಂದೂಸ್ಥಾನದೊಳಿರುವವರೆಲ್ಲ।।ಪ।। ಬಡಗಣ ವೈರಿಯ ಧಾಳಿ, ಪಡುವಣ ವೇಷದ ಗಾಳಿ। ಬೀಸಿದರೂನೂ ಅಂಜುವವರಲ್ಲ, ಕೂಡಿದ್ದರೆ ಹಿಮಗಿರಿಯ ಬಲ।ಅ.ಪ।। ಮನೆಗಳು ಬೇರೆ ಮತಗಳು ಬೇರೆ। ಆಡಿ ಬೆಳೆಯಲಿಹುದೊಂದೆ ನೆಲ। ಜನಮನ ಒಂದೆ, ಜೀವನ ಒಂದೆ। ಭಾರತಹಿತ ಸಾಧನೆಯ ಛಲ।।1।। ದೇಶದ ಜ್ಞಾನ ದೇಶದ ಮಾನ। ಎದೆಯೊಳಗುಕ್ಕುವ ಅಭಿಮಾನ। ನುಡಿಯೊಳಗ್ಹಿರಿದು, ನಡೆಯೊಳಗ್ಹಿರಿದು। ರಣದೊಳಗಿದೆ ಆ ಕ್ಷಾತ್ರ ಬಲ।।2।। ಇಂದಿನವರೆಗೂ ಹಿಮಗಿರಿಗೈದಿದೆ। ಭರತಕುಲದ ಸಂರಕ್ಷಣೆಯಾ। ಭರತನುಜಾತರ ನೀಡಿದೆ ಹಿಮಗಿರಿ। ಹಾಯಲು ಹೊಸಿವೆವು ತೋಳಬಲ।।3।।

ಒಂದುಗೂಡಿ ಬನ್ನಿ ನಾಡಸೇವೆಗೆ **ರಾಗ:ಮಾಂಡ್**

ಒಂದುಗೂಡಿ ಬನ್ನಿ ನಾಡಸೇವೆಗೆ।ಶುದ್ಧ ಮನದಿ ಶ್ರದ್ಧೆಯಿಂದ ಗೈವ ಪೂಜೆಗೆ। ಬದ್ಧರಾಗಿ ದಿವ್ಯಧ್ಯೇಯ ಆದರ್ಶಕೆ। ಸಿದ್ಧರಾಗಿ ಸರ್ವಸ್ವ ನೈವೇದ್ಯಕೆ।।ಪ।। ನಮ್ಮ ಬೆವರು ರಕ್ತವ ತೈಲದಂತೆ ಎರೆಯುವಾ ನಾಡಗುಡಿಯ ಬೆಳಗಲು ಬತ್ತಿಯಂತೆ, ಉರಿಯುವಾ। ಕತ್ತಲನ್ನು ತೊಲಗಿಸಿ ಸುತ್ತ ಬೆಳಕ ಮೂಡಿಸಿ। ಮನದಿ ಮನೆಯ ಮಾಡಿದಂಥ ಮೌಢ್ಯವನ್ನು ತೊಲಗಿಸಿ।।1।। ಸಮ್ಮನಿರದೆ ಕಾರ್ಯಕಾಗಿ ಸತತಕಾಯ ಸವೆಸುವಾ। ಹೆಮ್ಮೆಯಿಂದ ಒಮ್ಮನದಲಿ ಗುರಿಯ ಕಡೆಗೆ ಚಲಿಸುವಾ। ಸೋಲಿನಿಂದ ಕುಗ್ಗದೆ ಸವಾಲುಗಳಿಗೆ ಜಗ್ಗದೆ ವಿರೋಧಕೆಂದೂ ಬಗ್ಗದಂಥ ಗಟ್ಟಿತನವ ಗಳಿಸುವಾ।।2।। ಬಿದ್ದ ಜನರ ಮುಗ್ಧತೆಯನು ದುರುಪಯೋಗಪಡಿಸಿಹ। ವಿವಿಧ ಆಮಿಷಗಳೊಡ್ಡಿ ತಪ್ಪುದಿಶೆಗೆ ನಡೆಸಿಹ। ನಯವಂಚಕ ನರಿಗಳ ಕಿತ್ತು ಬಿಸುಟು ಸೋಗನು। ವಿಫಲಗೊಳಿಸಿ ಕೃತಕವೇಷ ಧರಿಸಿದವರ ಸಂಚನು।।3।। ಸೇವೆಯೊಂದೆ ದಾರಿದೀಪ ಪತಿತ ಜನರ ಬಾಳಿಗೆ। ಸೇವೆಯೊಂದೆ ದಿವ್ಯಮಂತ್ರ ದಿಟದಿ ನಮ್ಮ ಪಾಲಿಗೆ। ಸೇವೆಯಿಂದ ದೂರಗೊಳಿಸಿ ಉಚ್ಚನೀಚ ಭಿನ್ನತೆ। ಸೇವೆಯಿಂದ ಗಳಿಸಬನ್ನಿ ಮಾತೃಭುವಿಗೆ ಮಾನ್ಯತೆ।।4।।

ಒಂದೇ[3] ನಾವೆಲ್ಲರೂ ಒಂದೇ **ರಾಗ: ಕಲಾವತಿ**

ಒಂದೇ ಒಂದೇ ಒಂದೇ ನಾವೆಲ್ಲರೂ ಒಂದೇ। ಈ ದೇಶದೊಳೆಲ್ಲೆ ಇದ್ದರೂ ಭಾರತ ನಮಗೊಂದೆ।।ಪ।। ಹಲವು ಕೊಂಬೆಗಳು ಚಾಚಿಕೊಂಡರು ಮರಕ್ಕೆ ಬುಡಒಂದೇ। ಸಾವಿರ ನದಿಗಳು ಹೇಗೆ ಹರಿದರು ಕೂಡುವ ಕಡಲೊಂದೆ।।1।। ಇರುಳಿಗೆ ಸಾವಿರ ಚುಕ್ಕೆಗಳಿದ್ದರು ಹಗಲಿಗೆ ರವಿ ಒಂದೇ। ಅಗಣಿತ ಗ್ರಹ ಮಂಡಲಗಳ ಚಲನೆಗೆ ಆಕಾಶವು ಒಂದೇ।।2।। ನೂರು ಬಗೆಯ ಆರಾಧನೆ ಇದ್ದರು ದೇವರು ಎಲ್ಲರಿಗೊಂದೆ। ಹಲವು ಬಣ್ಣಗಳ ಹಸುಗಳು ಕರೆಯುವ ಹಾಲಿನ ಬಿಳುಪೊಂದೆ।।3।। ನಡೆನುಡಿ ಭೇದಗಳೆಷ್ಟೇ ಇದ್ದರು ಬದುಕುವ ಜನವೊಂದೆ। ನೆರಳು ಬೆಳಕುಗಳ ರೆಕ್ಕೆಯ ಬಿಚ್ಚುತ ಹಾರಾಡುವ ಧ್ವಜವೊಂದೆ।।4।।

ಓ ದಾರಿಗನೇ ಪ್ರಿಯ

ಓ ದಾರಿಗನೇ ಪ್ರಿಯ ನೇಹಿಗನೇ। ಗೈಯುವ ಬಾ ನವಯುಗ ನಿರ್ಮಾಣ ಸಮಾಜದೇವತೆ ಗರ್ಪಿತವಾಗಲಿ। ನಮ್ಮೆಲ್ಲರ ತನು ಮನ ಧನ ಪ್ರಾಣ।।ಪ।। ಹಿಡಿಕೂಳಿನ ಬರಿಗೋಳಿನ ಬಾಳಿಗೆ। ಮಾರುವೆಯಾ ತನುಮನವನು ಗೆಳೆಯಾ? ಪಶುಬಲದಿದಿರಿಗೆ ಅಡಿಯಾಳಾಗುತ ಮರೆಯುವೆಯಾ ಮಾನವತ್ವದ ಗುರಿಯ? ।।1।। ಭ್ರಮೆಯನು ಕೊಡವಿಕೊ ಕಣ್ತೆರೆದರಿತುಕೊ। ಮಾನವ ಜೀವನದನಂತ ಮಹಿಮೆ। ಬಿಸಿಯಾರುವ ಮೊದಲೇ ಜಗವರಿಯಲಿ। ನಿನ್ನಯ ಪವಿತ್ರ ರಕ್ತದ ಹಿರಿಮೆ।।2।। ಇಚ್ಛಾಶಕ್ತಿಯು ಭೂಮವನಪ್ಪಲಿ ಮೋಹದ ಭೋಗದ ಕನಸನು ಮುರಿದು। ಹೃದಯದ ಹಕ್ಕಿಯು ಆಗಸವಾಳಲಿ। ಸೋಗಿನ ಸೊಬಗಿನ ಪೊರೆಯನು ಹರಿದು।।3।। ಬಾಳೆಲ್ಲವು ಮುಡುಪಾಗಿಡು ವೀರನೆ। ದಿನದಿನವೂ ಹೊಸಹೊಸ ಸಾಹಸಕೆ। ಧ್ಯೇಯದ ಆ ಆನಂದದಿ ವಿಹರಿಸು ಹರಡಲಿ ಚಿರಕೀರ್ತಿಯು ಯುಗ ಯುಗಕೆ।।4।।

ಕಟ್ಟುವೆವು ನಾವು ಹೊಸ ನಾಡೊಂದನು **ರಾಗ:ಮಾಂಡ್**

ಕಟ್ಟುವೆವು ನಾವು ಹೊಸ ನಾಡೊಂದನು ರಸದ ಬೀಡೊಂದನು॥ಪ॥ ಹೊಸನೆತ್ತರುಕ್ಕುಕ್ಕಿ ಆರಿಹೋಗುವ ಮುನ್ನ। ಹರೆಯದೀ ಮಾಂತ್ರಿಕನ ಮಾಟ ಮಸುಳುವ ಮುನ್ನ। ಉತ್ಸಾಹ ಸಾಹಸದ ಉತ್ತುಂಗ ವೀಚಿಗಳ। ಈ ಕ್ಷುಬ್ಧ ಸಾಗರವು ಬತ್ತಿ ಹೋಗುವ ಮುನ್ನ॥1॥ ನಮ್ಮೆದೆಯ ಕನಸುಗಳೆ ಕಾಮಧೇನು। ಆದಾವು, ಕರೆದಾವು ವಾಂಛಿತವನು ಕರೆವ ಕೈಗಿಹುದಿದೊ। ಕನಸುಗಳ ಹರಕೆ। ಗುರಿತಪ್ಪದೊಮ್ಮುಖದ ಬಯಕೆ ಬೆಂಬಲಕೆ॥2॥ ಕೋಟೆಗೋಡೆಗೆ ನಮ್ಮ ಹೆಣಗಳೇ ಮೆಟ್ಟಿಲು, ನಮ್ಮ ಸಾವೇ ನೋವೆ ಹೊಸ ನಾಡ ತೊಟ್ಟಿಲು। ಆದಾವು ಅಂಜುವೆದೆ ನಮ್ಮದಲ್ಲ। ಸೋಲುಬಗೆ ವೀರನಿಗೆ ಸಲ್ಲ ಹೊಲ್ಲ॥3॥ ನಮ್ಮೆದೆಯ ತುಂಬಿರುವ ಆದರ ನರುಗಂಪು ಹೊರಹೊಮ್ಮುವುದು ಕಾದು ನೋಡು ಉತ್ಸಾಹ ಉದ್ವೇಗ ಉದ್ರೇಕಗಳ ವೀರ ಯುವಜನದ ನಾಡಗುಡಿಯು॥4॥ ಆದರ ಹಾರಾಟಕ್ಕೆ ಬಾನೆ ಗಡಿಯು ಬರಲು ಬಿಡವೆಂದಿಗೂ ಅದಕೆ ತಡೆಯು। ತಡೆವವರು ಬನ್ನಿರೋ ಹೊಡೆವವರು ಬನ್ನಿರೋ ಕೆಡೆನುಡಿವ ಕೆಡೆಬಗೆವ ಕೆಡುಕು ಜನರೇ ಬನ್ನಿ ಕೊಟ್ಟೆವಿದೊ ವೀಳೆಯವನು॥5॥ ನಿಮ್ಮೆಲ್ಲರನು ತೊಡೆದು ನಿಮ್ಮ ಮಸಣದ ಮೇಲೆ ಕಟ್ಟುವೆವು। ನಾವು ಹೊಸ ನಾಡೊಂದನು, ಸುಖದ ಬೀಡೊಂದನು॥6॥

ಕೋಟಿ2 ಕಂಠೋಂ ನೆ ಗಾಯಾ (ಹಿಂದಿ) **ರಾಗ: ಕಲ್ಯಾಣಿ**

ಕೋಟಿ ಕೋಟಿ ಕಂಠೋಂ ನೆ ಗಾಯಾ ಮಾ ಕಾ ಗೌರವ್‌ಗಾನ್ ಹೈ। ಏಕ್‌ರಹೆ ಹೈ, ಏಕ್‌ರಹೇಂಗೆ ಭಾರತ ಕೀ ಸಂತಾನ್ ಹೈ॥ ಪಂಥ ವಿವಿಧ ಚಿಂತನ ನಾನಾವಿಧ, ಬಹುವಿಧಿ ಕಲಾ ಪ್ರದೇಶ್‌ಕೀ ಅಲಗ್ ವೇಷ್ ಭಾಷಾ ವಿಶೇಷ್ ಹೈ ಸುಂದರತಾ ಇಸ್ ದೇಶ್ ಕೀ। ಇನಕೋ ಬಾಂಟ್-ಬಾಂಟ್ ಕರ್ ದೇಖೇಂ ದುಶ್ಮನ್ ಯಾ ನಾದಾನ್ ಹೈ॥ ಏಕ್ ರಹೆ ಹೈ ಏಕ್ ರಹೇಂಗೆ ಭಾರತ್ ಕೀ ಸಂತಾನ್ ಹೈ॥ ಸಮಝಾಯೇಂಗೆ ನಾದಾನೋಂ ಕೋ ಸೋಯಾ ದೇಶ್ ಜಗಾಯೇಂಗೆ। ದುಶ್ಮನ್ ಕೆ ನಾಪಾಕ್ ಇರಾದೆ ಜಡ್ ಸೆ ಕಾಟ್ ಮಿಟಾಯೇಂಗೆ। ಭಾರತ ಭಾಗ್ಯ ವಿಧಾತ ಹಮ್ ಹೈ ಜನ್ ಜನ್ ಕೀ ಆವಾಜ್ ಹೈ। ಏಕ್ ರಹೆಹೈ। ಏಕ ರಹೇಂಗೆ। ಭಾರತ್ ಕೀ ಸಂತಾನ್ ಹೈ॥ ಊಂಚ್ ನೀಚ್ ನಿಜ್ ಕೆ ವಿಭೇದ್ ನೆ ದುರ್ಬಲ್ ಕಿಯಾ ಸ್ವದೇಶ್ ಕೋ। ಬಾಹರ್ ಸೇ ಭೀತರ್ ಸೇ ಘೇರಾ, ಅಂಧಿಯಾರ್ ನೆ ದೇಶ್ ಕೊ। ಮಿಟೆ ಭೇದ್ ಮಿಟ್ ಜಾಯೆ ಅಂಧೇರಾ ಜಲತೀ ಹುಯೀ ಮಶಾಲ್ ಹೈ॥ ಏಕ್ ರಹೆ ಹೈ ಏಕ್ ರಹೇಂಗೆ ಭಾರತ್ ಕೀ ಸಂತಾನ್ ಹೈ॥

ಕೋಟಿ ಕಂಠೋಂ ಸೇ ನಿಕಲೀ (ಹಿಂದಿ) **ರಾಗ: ಸಿಂಧುಭೈರವಿ**

ಕೋಟಿ ಕಂಠೋಂ ಸೇ ನಿಕಲೀ ಆಜ್ ಯಹೀ ಸ್ವರ್ ಧಾರಾಹೈ। ಭಾರತ್ ವರ್ಷ್ ಹಮಾರಾ ಹೈ, ಯಹ್ ಹಿಂದೂಸ್ಥಾನ್ ಹಮಾರಾ ಹೈ॥ ಜಿಸ್ ದಿನ್ ಸಬ್ ಸೆ ಪಹಲೇ ಜಾಗೇ, ನವಲ ಸೃಜನ್ ಕೇ ಸ್ವಪ್ನ ಘನೇ ಜಿಸ್ ದಿನ್ ದೇಶ್ ಕಾಲ್ ಕೆ ದೋ-ದೋ ವಿಸ್ತೃತ್ ವಿಮಲ್ ವಿತಾನ್ ತನೆ ಜಿಸ್ ಕ್ಷಣ್‌ನಭ್ ಮೇ ತಾರೆ ಛಿಟಕೇ ಜಿಸ್ ದಿನ್ ಸೂರಜ್ ಚಾಂದ್ ಬನೆ ತಬ್ ಸೇ ಹೈ ಯಹ್ ದೇಶ್ ಹಮಾರಾ, ಯಹ್ ಅಭಿಮಾನ್ ಹಮಾರಾ ಹೈ। ಭಾರತ್ ವರ್ಷ್ ಹಮಾರಾ ಹೈ। ಯಹ್ ಹಿಂದೂಸ್ತಾನ್ ಹಮಾರಾ ಹೈ॥1॥ ಹೈ ಆಸನ್ನ ಭೂತ್ ಅತಿ ಉಜ್ವಲ್ ಹೈ ಅತೀತ್ ಗೌರವಶಾಲೀ ಔ ಛಿಟಕೀ ಹೈ ವರ್ತಮಾನ್ ಪರ್ ಬಲಿ ಕೆ ಶೋಣಿತ್ ಕೀ ಲಾಲೀ, ನವ ಉಷಾಸೀ ವಿಜಯ್ ಹಮಾರೀ ವಿಹಸ್ ರಹೀ ಹೈ ಮತ್ ವಾಲೀ ಹಮ್ ಮಾನವ್ ಕೋ ಮುಕ್ತ್ ಕರೇಂಗೇ ಯಹೀ ವಿಧಾನ್ ಹಮಾರಾ ಹೈ। ಭಾರತ್ ವರ್ಷ್ ಹಮಾರಾ ಹೈ। ಯಹ್ ಹಿಂದೂಸ್ತಾನ್ ಹಮಾರಾ ಹೈ॥2॥ ಗರಜ್ ಉಠೇ ಚಾಲೀಸ್ ಕೋಟಿಜನ್ ಸುನ್-ಯೇ ವಚನ್ ಉಛಾಹ್ ಭರೇ॥ ಕಾಂಪ್ ಉಠೇ ಪ್ರತಿಪಕ್ಷೀ ಜನ್ ಗಣ್ ಉನ್‌ಕೀ ಅಂತಸ್ತಲ್ ಸಿಹರೇ ಆಜ್ ನಯೇ ಯುಗ್ ಕೇ ನಯನೋಂಸೆ ಜ್ವಲಿತ್ ಅಗ್ನಿ ಕೆ ಪುಂಜ್ ಝರೆ ಕೌನ್ ಸಾಮನೇ ಆಯೇಗಾ? ಯಹ್ ದೇಶ್ ಮಹಾನ್ ಹಮಾರಾ ಹೈ। ಭಾರತ್ ವರ್ಷ್ ಹಮಾರಾ ಹೈ। ಯಹ್ ಹಿಂದೂಸ್ತಾನ್ ಹಮಾರಾ ಹೈ॥3॥

ಚಂದನ್ ಹೈ ಇಸ್ ದೇಶಕಿ ಮಾಟಿ (ಹಿಂದಿ) **ರಾಗ: ಸಿಂಧೂಭೈರವಿ**

ಚಂದನ್ ಹೈ ಇಸ್ ದೇಶಕಿ ಮಾಟಿ ತಪೋಭೂಮಿ ಹರ್ ಗ್ರಾಮ ಹೈ। ಹರ್ ಬಾಲಾ ದೇವಿ ಕೀ ಪ್ರತಿಮಾ। ಬಚ್ಚಾಬಚ್ಚಾ ರಾಮ ಹೈ॥ಪ॥ ಹರ ಶರೀರ್ ಮಂದಿರ ಸಾ ಪಾವನ್। ಹರ ಮಾನವ ಉಪಕಾರಿ ಹೈ। ಜಹಾಂ ಸಿಂಹ ಬನ ಗಯೇ ಖಿಲೌನೇ। ಗಾಯಿ ಜಹಾಂ ಮಾ ಪ್ಯಾರೀ ಹೈ। ಜಹಾಂ ಸವೇರಾ ಶಂಖ ಬಜಾತಾ। ಲೋರೀ ಗಾತೀ ಶ್ಯಾಮ ಹೈ॥1॥ ಜಹಾಂ ಕರ್ಮಸೇ ಭಾಗ್ಯ ಬದಲತಾ। ಶ್ರಮನಿಷ್ಠಾ ಕಲ್ಯಾಣಿ ಹೈ। ತ್ಯಾಗ ಔರ್ ತಪಕೀ ಗಾಥಾಯೇಂ ಗಾತೀ ಕವಿ ಕೀ ವಾಣೀ ಹೈ। ಜ್ಞಾನ ಜಹಾಂ ಕಾ ಗಂಗಾ ಜಲ ಸಾ ನಿರ್ಮಲ ಹೈ ಅವಿರಾಮ ಹೈ॥2॥ ಜಿಸಕೇ ಸೈನಿಕ ಸಮರ ಭೂಮಿ ಮೇ। ಗಾಯಾ ಕರತೇ ಗೀತಾ ಹೈ। ಜಹಾಂ ಖೇತಮೇ ಹಲಕೇ ನೀಚೆ। ಖೇಲಾ ಕರತೀ ಸೀತಾ ಹೈ। ಜೀವನ ಕಾ ಆದರ್ಶ ಜಹಾಂ ಪರ್। ಪರಮೇಶ್ವರ ಕಾ ಧಾಮ ಹೈ॥3॥

ಚಿತ್ರಕಾರ್ ತೂ ಚಿತ್ರ ಬನಾದೇ (ಹಿಂದಿ) **ರಾಗ:ಹಿಂದೂಸ್ಥಾನಿಕಾಪಿ**

ಚಿತ್ರಕಾರ್ ತೂ ಚಿತ್ರ ಬನಾದೇ ಉನ್ ಸೈನಿಕ್ ಮತ್‌ವಾಲೋಂಕಾ ಪ್ರಿಯ ಸ್ವದೇಶ ಕೀ ಬಲವೇದೀ ಪರ ಹಸಹಸ ಮರನೇವಾಲೋಂಕಾ॥ಪ॥ ರಣೋನ್ಮತ್ತರಣವಾದ್ಯ ಧ್ವನಿ ಸೇ ಮಸ್ತ ಝೂಮನೇವಾಲೋಂಕಾ ಮಾತೃಭೂಮಿ ಹಿತ ಫಾಂಸೀ ಕೀ ಭೀ ಡೋರ ಚೂಮನೇ ವಾಲೋಂಕಾ॥1॥ ಅಂಕಿತ ಕರದೇ ಚಿತ್ರ ಅರೇ ಫಿರ ವಿರೋಂಕೆ ಬಲಿದಾನೋಂಕಾ। ಆಜಾದೀ ಕೇ ದೀವಾನೋಂಕಾ ಮೃತ್ಯುಕೇ ಮೆಹಮಾನೋಂಕಾ॥2॥ ಶಿವಪ್ರತಾಪ ಗುರು ಗೋವಿಂದಸಿಂಹ ಛತ್ರಸಾಲ ಬಲಶಾಲೀ ಕಾ। ಚಿತ್ರ ಬನಾ ತೂ ಅಶ್ವಾರೋಹಿಣಿ ರಾಣೀ ಝಾಂಸೀ ವಾಲೀಕಾ॥3॥ ದೃಶ್ಯದಿಖಾ ತೂ ಹಲ್ದಿಘಾಟಿಕಾ ಆರಾವಲಿ ಕೇ ಪರ್ವತಕಾ। ದೃಶ್ಯದಿಖಾ ತೂ ಲಡತೆ ವೀರೋಂಕಾ ಪಲಟನ ಔರ ರಿಸಾಲೋಂಕಾ॥4॥ ಜಲಿಯನವಾಲಾಬಾಗ ಬನಾದೇ ಆಗ್ ಲಗಾದೇ ಪ್ರಾಣೋಂಮೇ। ನೂತನ ಜೋಶ ಆಜ್ ಲಗಾದೇ ಭಾರತಕೇ ಮರ್ದಾನೋಂ ಮೇ॥5॥ ವಂದನೀಯ ಭಾರತಮಾತಾ ಕೀ ಬನಾ ಕರುಣ ವಿಹ್ವಲ ತಸವೀರ। ಕಾಟ್ ರಹೇ ಹೈ ಉಸಕಾ ಬಂಧನ್ ಭಾರತಕೇ ಅಸಂಖ್ಯ ನರವೀರ॥6॥ ಕೋಮಲ ಕರೋಂ ಮೇ ಚೂಡಿವಾಲೇ ಆಜ್ ಪುನಃ ತಲವಾರ ದಿಖಾ। ಉತ್ತೇಜಿತ ಕರ ವೀರಭಾವಕೋ ಬನಾ ಸಫಲ ನಿಜ ಚಿತ್ರಕಲಾ॥7॥

ಚೆಲುವೆ ಯಾರೋ ನನ್ನ ತಾಯಿಯಂತೆ **ರಾಗ: ನಾಟ**

ಚೆಲುವೆ ಯಾರೋ ನನ್ನ ತಾಯಿಯಂತೆ। ಸತ್ಯಕ್ಕೆ ನೆಲೆಯಾದ ಒಲವಿನಂತೆ॥ಪ॥ ಕಣ್ಣೆರಡು ನಕ್ಷತ್ರ ಬಣ್ಣ ನೀಲಿ ಕುಡಿನೋಟ। ಹೊರಳಿತೋ ಮಿಂಚುತಾಳಿ। ಹಸಿರನುಡುವಳು ಅಮ್ಮ ಹರುಷದಲ್ಲೀ। ಉಸಿರಾಡುವಳು ಮರುಗ ಮಲ್ಲಿಗೆಯಲೀ॥1॥ ಉದಯ ರವಿಹಣೆಗಿಟ್ಟ ಭಾಗ್ಯಬಿಂಬ। ಆಗಸದ ಕಪ್ಪು ಜಡೆ ಬೆನ್ನು ತುಂಬ। ಸಾಲು ತೇಲುವ ಹಸಿರು ಗಿರಿಯ ಮಾಲೆ। ಸರವಾಗಿ ಮೆರೆಯುತಿದೆ ಎದೆಯ ಮೇಲೆ॥2॥ ರಾಮಕೃಷ್ಣರು ಇವಳ ವೀರಭಾವ। ವ್ಯಾಸ ಶುಕ ವಾಲ್ಮೀಕಿ ಜ್ಞಾನ ದಾಹ। ಇವಳ ಸಹನೆಗೆ ಹೆಸರು ಸೀತೆಯೆಂದು। ಪ್ರೀತಿ ಕ್ಷಮೆ ಕರುಣೆಯೇ ನೀತಿಯೆಂದು॥3॥

ಜನಗಣ ಮನ ಅಧಿನಾಯಕ (ರಾಷ್ಟ್ರಗೀತೆ)(ಬಂಗಾಳಿ)

ಜನಗಣ ಮನ ಅಧಿನಾಯಕ ಜಯಹೇ। ಭಾರತ ಭಾಗ್ಯ ವಿಧಾತಾ॥ ಪಂಜಾಬ ಸಿಂಧು ಗುಜರಾತ ಮರಾಠಾ। ದ್ರಾವಿಡ ಉತ್ಕಲ ವಂಗಾ॥ ವಿಂಧ್ಯ ಹಿಮಾಚಲ ಯಮುನಾ ಗಂಗಾ। ಉಚ್ಛಲ ಜಲಧಿ ತರಂಗಾ॥ ತವ ಶುಭ ನಾಮೇ ಜಾಗೇ ತವಶುಭ ಆಶಿಷ ಮಾಗೇ॥ ಗಾಹೇ ತವ ಜಯಗಾಥಾ। ಜನಗಣ ಮಂಗಳದಾಯಕ ಜಯಹೇ॥ ಭಾರತ ಭಾಗ್ಯ ವಿಧಾತಾ। ಜಯ ಹೇ ಜಯ ಹೇ ಜಯ ಹೇ॥ ಜಯ ಜಯ ಜಯ ಜಯ ಹೇ॥

ಜನನೀ ಭಾರತಿ ಜನ್ಮ ಧಾತ್ರಿ **ರಾಗ: ವಲಚಿ**

ಜನನೀ ಭಾರತಿ ಜನ್ಮ ಧಾತ್ರಿ ದಿವ್ಯ ನಾಡಿದು ಸೋದರಿ। ಬಾದರಾಯಣ ಪರಮ ಪುರುಷರ ಪುಣ್ಯ ಬೀಡಿದು। ಸೋದರ॥ ಪ॥ ಎಲ್ಲಿ ರಾಮಾಯಣವು ಬೆಳಗಿತು ಎಲ್ಲಿ ವೀಣೆಯ ಸುಧೆಯು ಹರಿಯಿತು। ವೇದಘೋಷಗಳೆಲ್ಲಿ

ಮೊಳಗಿತೊ ಅದುವೆ ಭಾರತ ಸೋದರ।। ನಮ್ಮ ನಾಡಿದು ಸೋದರೀ।।1।। ಎಲ್ಲಿ ಮೋಹನ ಕೊಳಲನೂದಿದ ಎಲ್ಲಿ ಪರಶಿವ ನರ್ತಿಸಿದನು। ವಾಣಿಲಕುಮಿ ಗೌರಿಗಣಪತಿ ಪೂಜೆಗೊಳ್ಳುವ ನಾಡಿದು।। ದೇವತೆಗಳ ಬೀಡಿದು।।2।। ಗಂಗಾ ಯಮುನಾ ತುಂಗಾ ಭದ್ರಾ ಸಿಂಧು ಮಹಾನದಿ ಕೃಷ್ಣೆ ಗೋದೆ ಕಾವೇರಿಯರು ಹರಿವ ನಾಡಿದು ನಮ್ಮದು ಸುಫಲ ಸುಂದರ ಬೀಡಿದು।।3।।

ಜಗಕೆ ಶಾಂತಿಮಂತ್ರ ಇತ್ತ **ರಾಗ: ಶಂಕರಾಭರಣ-ನೋಟ್**

ಜಗಕೆ ಶಾಂತಿಮಂತ್ರ ಇತ್ತ ದೇಶ ನಮ್ಮ ಭಾರತ।। ಯುಗಯುಗದಿ ಮಹಾತ್ಮರುದಿಸಿ। ಕೀರ್ತಿ ಪಡೆದ ಭಾರತ।। ಜಾಗತಿಕ ಪ್ರಶಾಂತಿಯಲ್ಲಿ ಜಗವನೆಲ್ಲ ಮಿಗಿಲಿಸಿ। ಯೋಗಿರತ್ನಗಳನು ಇತ್ತ ದೇಶ ನಮ್ಮ ಭಾರತ।। ಹಿಂದು ಮುಸಲ್ಮಾನ ಕ್ರೈಸ್ತ ಒಂದೇ ಒಂದು ಪಂಗಡ। ಬಂಧು ಬಾಂಧವರ ತೆರದಿ ವಾಸಿಸುವರು ಸಂಗಡ।। ಜಾತಿ ಭೇದ ವರ್ಣ ಭೇದ ಮೇಲುಕೀಳು ಅಳಿಯಲೀ। ಭಾರತೀಯರೊಂದೆ ಎಂಬ ಭಾವನೆಗಳ ತಿಳಿಯಲಿ।। ಒಂದೆ ಆತ್ಮ ಭಿನ್ನ ದೇಹ। ಒಂದೆ ಭಾವ ವೆನಿಸಲಿ। ಒಂದೆ ನಾಗರಿಕ ಜನತೆ। ಭಾರತೀಯರೆನಿಸಿರಿ।।

ಜನನೀ ಜನ್ಮಭೂಮಿ **ರಾಗ: ಮಲಯಮಾರುತ**

ಜನನೀ ಜನ್ಮಭೂಮಿ ಓ ಭಾರತಿ ನಿನ್ನಯ ಅಡಿಗಳಿಗೆ ಪೊಡಮಡುವೆ ನಾ ಅಡಿಗಡಿಗೆ। ಜನನೀ ಓ ಜನನೀ ಜನ್ಮಭೂಮಿ।।ಪ।। ಜನ್ಮ ಜನ್ಮದಾ ಪುಣ್ಯದ ಫಲವು ಕರುಣೆಯ ತೋರಿದ ಒಲವಿನ ಬಲವು। ಬಂದಿಹೆ ಧರೆಗೆ ನಿನ್ನೊಡಲೊಳಗೆ ಕೋಟಿ ಕೋಟಿ ಜನ ಸೋದರರೆನಗೆ।।1।। ಮೇಲೆ ಹಿಮಾಚಲ ಕಾಲಡಿ ಕಡಲು ಬಂಗಾರದ ನಿಧಿ ತುಂಬಿದೆ ಒಡಲು। ಶ್ರೀಗಂಧ ಸೌಗಂಧವು ತುಂಬ ಏನೆಂಬೆನು ಈ ಸ್ವರ್ಗದ ಬಿಂಬ।।2।। ಸಾವಿರ ಜನ್ಮವು ಬಂದರೆ ಬರಲಿ ತಾಯ ಮಡಿಲೆನಗಿರಲಿ। ನಿನ್ನಲೆ ಜನನ ನಿನ್ನಲೆ ಮರಣ ಎನ್ನಯ ಜೀವನ ನಿನಗೇ ಶರಣ।।3।। ಉಜ್ವಲ ಕಲೆ ಸಂಸ್ಕೃತಿಗಳ ನಾಡು ಕೆಚ್ಚೆದೆ ಕಲಿಗಳ ಸಾಹಸ ಬೀಡು। ಶಂಕರ ಬಸವ ವಿವೇಕರ ನೆಲವು ಪಾವನವು ಸೌಭಾಗ್ಯದ ನಾಡಿದು।।4।।

ಜಯ ಜನನೀ ಜಯ ಪುಣ್ಯಧರಾ (ಹಿಂದಿ) **ರಾಗ: ಮಧ್ಯಮಾವತಿ**

ಜಯ ಜನನೀ ಜಯ ಪುಣ್ಯಧರಾ ಅನುಪಮ ತೇರೀ ಪರಂಪರಾ।।ಪ।। ಸತ್ಯ ಅಹಿಂಸಾ ಕೀ ಜ್ಯೋತಿ, ತೂ ಮಾನವತಾ ಕೀ ಮೋತೀ। ಋಷಿಯೋಂ ಕೀ ತೂ ಭೂರುಚಿರಾ। ಜಯ ಜನನೀ ಜಯ ಪುಣ್ಯಧರಾ।।1।। ಶುಭ್ ಧರ್ಮೋಂ ಕಾ ತೂ ಆಲಯ್ ಸತ್ ಪಂಥೋಂ ಕಾ ತೂ ಆಶ್ರಯ್। ಆಂಚಲ್ ತೇರಾ ಪ್ರೇಮ್ ಭರಾ। ಜಯ ಜನನೀ ಜಯ ಪುಣ್ಯಧರಾ।।2।। ಮುಕ್ತಿ ಭಾವನಾ ಸೆ ಭೂಷಿತ್, ಬಲಿದಾನೋಂಸೆ ತೂ ಪೂಜಿತ್। ವೀರ್ ಪ್ರಸೂತಾ ವಸುಂಧರಾ, ಜಯ ಜನನೀ ಜಯ ಪುಣ್ಯಧರಾ।।3।। ತೇರೀ ಸುಂದರ್ ಸರಿತಾಏಂ ಗಿರಿ ಗೌರವ್ ಕೀ ಮಾಲಾಏಂ। ತನ್ ಮನ್ ತೇರಾ ಪ್ರೇಮ್ ಭರಾ, ಜಯ ಜನನೀ ಜಯ ಪುಣ್ಯಧರಾ।। 4।। ತುಝುಸೆ ಹೀ ಹಮ್ ಸಂವರ್ಧಿತ್, ತನ್-ಮನ್-ಧನ್ ತುಝುಕೋ ಅರ್ಪಿತ್। ತೂ ಕರುಣಾಮಯ್ ಪ್ರಿಯಂವರಾ ಜಯ ಜನನೀ ಜಯ ಪುಣ್ಯಧರಾ।।5।।

ಜಯ2 ಪ್ಯಾರಾ ಭಾರತ್ (ಹಿಂದಿ) **ರಾಗ: ಅಭೇರಿ**

ಜಯ ಜಯ ಪ್ಯಾರಾ ಭಾರತ್ ದೇಶ್। ಜಯ ಜಯ ಪ್ಯಾರಾ, ಜಗ್ ಸೇ ನ್ಯಾರಾ। ಶೋಭಿತ್ ಸಾರಾ, ದೇಶ್ ಹಮಾರಾ। ಜಗತ್ ಮುಕುಟ್, ಜಗದೀಶ್‌ದುಲಾರಾ। ಜಗ್‌ಸೌಭಾಗ್ಯ ಸುದೇಶ್।।1।। ಜಯಜಯ ಶುಭ್ರ ಹಿಮಾಚಲ್ ಶೃಂಗಾ। ಕಲರವ ನಿರತ ಕಲೋಲಿನೀ ಗಂಗಾ। ಭಾನು ಪ್ರತಾಪ್ ಚಮತ್ಕೃತ್ ಅಂಗಾ। ತೇಜಪುಂಜ ತಪವೇಶ್।।2।। ಜಗ್ ಮೇ ಕೋಟಿಕೋಟಿ ಜುಗ್ ಜೀವೇ। ಜೀವನ್‌ಸುಲಭ್ ಅಮೀರಸ ಪೀವೇ। ಸುಖದ್ ವಿತಾನ್ ಸುಕೃತ ಕಾ ಸೀವೇ ರಹೇ ಸ್ವತಂತ್ರ ಹಮೇಶಾ।।

ಜಯ[2] ಭಾರತವರ್ಷ ಮಹಾನ್ (ಹಿಂದಿ)

ಜಯ ಜಯ ಭಾರತವರ್ಷ ಮಹಾನ್। ಜಯ ಜಯ ಜಯ ಜಯ ಹಿಂದೂಸ್ತಾನ್॥ಪ॥ ಯಹ್ ಖುಷಿಯೋಂಕೀ ಜನ್ಮ ಭೂಮಿ ಹೈ। ಮಾತೃ ಭೂಮಿ ಯಹ್ ಕರ್ಮ ಭೂಮಿ ಹೈ। ಯಹೀ ಶಾಂತಿಕಾ ಅಗ್ರದೂತ್ ಹೈ। ನವರತ್ನೋಂಕೀ ಖಾನ್॥ ಜಯಜಯಜಯಜಯ ಹಿಂದೂಸ್ತಾನ್॥1॥ ಇಸ್‌ಕೆ ಅಂತಸ್ ಮೆ ಗಂಗಾ ಜಲ್। ಇಸ್‌ಕೀ ಸಾಂಸೋಂಮೆ ಮಲಯಾನಿಲ್। ಲೇಕಿನ್ ಇಸ್‌ಕೆ ಅಂದರ್ ಮೆ ಹೈ। ಛಿಪೆ ಪ್ರಬಲ್ ತೂಫಾನ್॥ ಜಯ....... ಹಿಂದೂಸ್ತಾನ್॥2॥ ಮರಣ್ ಯಹಾಂ ಉತ್ಸವ್ ಕಹಲಾತಾ। ಶಿವಕಾ ಯಹಾಂ ಶಕ್ತಿಸೆ ನಾತಾ। ಯಹಾಂ ಶಹೀದೋಂನೆ ಲಿಖಾ ಹೈ। ಜೀವನ್ ಸತ್ಯ ವಿಧಾನ್॥ ಜಯ......... ಹಿಂದೂಸ್ತಾನ್॥3॥

ಜಯ ಹೇ ಜಯ2 ಜನನೀ — ರಾಗ: ಸಾರಂಗ

ಜಯ ಹೇ ಜಯ ಜಯ ಜನನೀ ಭಾರತೀ। ಜಯ ಹೇ ಜಯ ಜಯ ಪಾವನ ಮೂರುತಿ ॥ಪ॥ ಧವಳ ಹಿಮಾಲಯ ಶೋಭಾಭರಣೆ। ಸುನೀಲ ಸಾಗರ ಚುಂಬಿತ ಚರಣೆ। ನವವಿಕಸಿತ ಸುಮ ಮಾಲಾಧರಣೆ। ನವೋದಿತಾರುಣ ಸುವರ್ಣ ಕಿರಣೆ॥1॥ ವೇದಶಾಸ್ತ್ರ ಗೀತಾಮೃತ ವರ್ಷಿಣಿ। ಗಾಯನ ನರ್ತನ ಕಾವ್ಯ ವಿಲಾಸಿನಿ। ಶಾಂತ ಹೃದಯೇ ಸನ್ಮಂಗಳದಾಯಿನಿ। ಪ್ರೇಮ ಸ್ವರೂಪಿಣಿ ಕ್ಷೇಮಕಾರಿಣಿ॥2॥

ಜಲಭರಿತೆ ಫಲಭರಿತೆ

ಜಲಭರಿತೆ ಫಲಭರಿತೆ ತೆಂಕಣದ ತಂಬೆಲರ ಸರಿತೆ। ಸೊಂಪಿಡಿದ ಪೈರು ಪಚ್ಚೆಯ ತವರ್ಮನೆಯೆ ಹೇ ತಾಯಿ॥ಪ॥ ಬೆಳ್ದಿಂಗಳಲಿ ಮಿಂದು ಮಿರುಗುವಿರುಳನಟ್ಟವಳೆ। ಹೂ ಚಿಗುರು ಮುಡಿದ ತರುಲತೆಗಳನೆ ತೊಟ್ಟವಳೆ॥ ಇನಿನಗೆಯ ಜೇನ್ದನಿಯ। ಸುಖದಾತೆ ವರದಾತೆ ಹೇ ಮಾತೆ! ॥1॥ ಕಂಠಕೋಟಿಯ ಸಿಂಹಗರ್ಜನೆ ಸಿಡಿಸಿ। ಬಾಹುಕೋಟಿಯ ಶಸ್ತ್ರಚಾಲನೆ ನಡೆಸಿ ರೌದ್ರರೂಪವ ತಳೆವ ಭೈರವಿಯೆ॥ ನೀನು ಅಬಲಯೆ ತಾಯೆ? ಸರ್ವಬಲ ಸಂಪನ್ನೆ ಶರಣು ಅಭಯಾವರಣೆ ವೈರಿಕುಲಧ್ವಂಸಿನಿಯೆ, ತಾಯೆ! ॥2॥ ನೀ ವಿದ್ಯೆ ನೀ ಧರ್ಮ ನೀ ಹೃದಯ ನೀನಾತ್ಮ। ಓಡಲೊಳಾಡುವ ಪ್ರಾಣ ನೀನೇ ಬಾಹುಗಳ ಸ್ಫುರಿಸುತಿಹ ಶಕ್ತಿ ಹೃದಯಗಳ ಸ್ಪಂದಿಸಿಹ ಭಕ್ತಿ ಗುಡಿಗುಡಿಯ ಗರ್ಭದಲಿ ನಿಂದು ಪೂಜೆಗೊಳುತಿಹೆ ಮೂರ್ತಿ ನೀನೆ! ॥3॥ ನೀ ದುರ್ಗೆ ಈರೈವ ಕೈಗಳನಾಡಿಸುವೆ ನೀ ಕಮಲೆ ಕಮಲದಳದಂಗಣದಿ ಕ್ರೀಡಿಸುವೆ ವಾಣಿ, ವಿದ್ಯಾಸುಧೆಯನೂಡುತಿಹೆ ನಿನಗಿದೋ ಪೊಡುಮಡುವೆ ಶತನಮನ ಸಿರಿಯೊಡತಿ ಪರಿಶುದ್ಧೆ ಎಣೆರಹಿತೆ ಜಲಭರಿತೆ ಫಲಭರಿತೆ ಓ ಮಾತೆ ವಂದಿಸುವೆ ತಾಯೆ ॥4॥ ಶ್ಯಾಮಲೆ ಸರಳೆ ಸುಸ್ಮಿತೆ ಸಾಲಂಕೃತೆ ಸಕಲ ಸಂಪನ್ಮೂಲೆ ಸರ್ವಸಮೃದ್ಧಿಯಾಗಿಹಳೆ ತಾಯೆ! ॥5॥

ಜೀವನ್ ಮೇ ಕುಛ್ ಕರ್‌ನಾ (ಹಿಂದಿ) — ರಾಗ: ಸಿಂಧುಭೈರವಿ

ಜೀವನ್ ಮೇ ಕುಛ್ ಕರ್‌ನಾ ಹೈ ತೋ। ಮನ್ ಕೋ ಮಾರೆ ಮತ್ ಬೈಠೋ। ಆಗೇ ಆಗೇ ಬಢನಾ ಹೈ ತೋ। ಹಿಮ್ಮತ್ ಹಾರೇ ಮತ್ ಬೈಠೋ॥ಪ॥ ಚಲ್ ನೇ ವಾಲಾ ಮಂಜಿಲ್ ಪಾತಾ। ಬೈಠಾ ಪೀಛೇ ರಹತಾ ಹೈ। ಠಹರಾ ಪಾನೀ ಸಡ್‌ನೆ ಲಗ್‌ತಾ। ಬಹತಾ ನಿರ್ಮಲ್ ಹೋತಾ ಹೈ। ಪಾವ್ ಮಿಲೆ ಚಲ್‌ನೇ ಕೀ ಖಾತಿರ್। ಪಾವ್ ಪಸಾರೇ ಮತ್ ಬೈಠೋ। ॥1॥ ತೇಜ್ ದೌಡನೇವಾಲಾಖರ್ ಹಾ। ದೋ ಪಲ್ ಚಲ್ ಕರ್ ಹಾರ್ ಗಯಾ। ಧೀರೇ ಧೀರೇ ಚಲ್ ಕರ್ ಕುಛುವಾ। ದೇಖೋ ಬಾಜೀ ಮಾರ್ ಗಯಾ। ಚಲೋ ಕದಂ ಸೆ ಕದಂ ಮಿಲ್ ಕರ್। ದೂರ್ ಕಿನಾರೆ ಮತ್ ಬೈಠೋ॥2॥ ಧರತೀ ಚಲ್ ತೀ ತಾರೆ ಚಲತೇ। ಚಾಂದ್ ರಾತ್‌ಭರ್ ಚಲತಾ ಹೈ। ಕಿರಣೋಂಕಾ ಉಪಹಾರ್ ಬಾಂಟ್‌ನೇ। ಸೂರಜ್ ರೋಜ್ ನಿಕಲ್‌ತೇ ಹೈ। ಹವಾ ಚಲೇ ತೋ ಮಹಕ್ ಬಿಖೇರೆ। ತುಮ್ ಭೀ ಪ್ಯಾರೆ ಮತ್ ಬೈಠೋ॥3॥

ತಾಯಿ ಭಾರತಿಯ ಪಾದಪದ್ಮಗಳ **ರಾಗ: ಕಲ್ಯಾಣವಸಂತ**

ತಾಯಿ ಭಾರತಿಯ ಪಾದಪದ್ಮಗಳ ಪೂಜಿಸೋಣ ಬನ್ನಿ। ಹಿಂದು ಸಾಗರದ ಬಿಂದುಬಿಂದುಗಳೆ ಒಂದುಗೂಡಿ ಬನ್ನಿ॥ಪ॥ ಧ್ಯೇಯ ಭಾಸ್ಕರನ ದಿವ್ಯ ಕಿರಣಗಳ ನವ್ಯ ರಮ್ಯಲಾಸ್ಯ। ತರುಣರಂಗದೊಳು ಅರುಣಗೈಯುತಿಹ ನವೋದಯದ ನಾಟ್ಯ। ಬಾಹುಬಾಹುಗಳ ಸ್ಫುರಣಗೊಳಿಸುತಲಿ ನಲಿಯುತೀಗ ಬನ್ನಿ॥1॥ ಶಕ್ತಿಯಿಂದ ಅಭಿವ್ಯಕ್ತಗೊಳಿಸಿರೈ ದೇಶಭಕ್ತಿಯನ್ನು। ತಪ್ತ ಮನಗಳ ಸುಪ್ತವಾಗಿರುವ ಧ್ಯೇಯದೀಪ್ತಿಯನ್ನು। ತ್ಯಾಗ ಸಾಹಸದ ಪುಷ್ಪಮಾಲೆಯನು ತಾಯಿಗೆ ತೊಡಿಸಬನ್ನಿ॥2॥ ಮಾತೃಭೂಮಿಯ ವಿಚ್ಛಿದ್ರಗೊಳಿಸುತಿರೆ ಕ್ಷುದ್ರ ಅರಿಯ ಸಂಚು। ಪ್ರಲಯರುದ್ರನುರಿಗಣ್ಣ ತೆರೆಸಿರೈ ಹರಿಸಿ ಪ್ರಖರ ಮಿಂಚು। ಶಸ್ತ್ರಶಾಸ್ತ್ರಗಳ ಅಸ್ತ್ರಚಾಲನೆಗೆ ಸಿದ್ಧರಾಗಿ ಬನ್ನಿ॥3॥ ಭರತಭೂಮಿಯಲಿ ಭರದಿ ಭೋರಿಡಲಿ ದಿವ್ಯಪಾಂಚಜನ್ಯ। ಯೋಗಯಾಗಗಳ ತ್ಯಾಗಭೂಮಿಯಲಿ ಜನಿಸಿದವರೆ ಧನ್ಯ। ನಾಡರಕ್ಷಣೆಗೆ ಬಾಳಕ್ಷಣಕ್ಷಣವ ಮುಡಿಪು ನೀಡಬನ್ನಿ॥4॥

ತಾಯಿ ಭಾರತೀ ನಿನ್ನ **ರಾಗ: ಶುದ್ಧಧನ್ಯಾಸಿ**

ತಾಯಿ ಭಾರತೀ ನಿನ್ನ ಮೂರುತಿ ಎದೆಯಗುಡಿಯೊಳಿಟ್ಟು ಭಜಿಸಿ ಜ್ವಲಿಪೆನಾರತಿ॥ಪ॥ ಜಗದೆ ಮೊದಲ ಜ್ಞಾನಕಿರಣ ಧಾತ್ರಿ ಎಂಬ ಕೀರುತಿ। ಪ್ರೇಮ ಶಾಂತಿ ಸ್ನೇಹಗಳಲಿ ಸದಾ ನಿನ್ನ ಅನುರತಿ। ಆತ್ಮದೀಕ್ಷೆ ನೀಡಿ ಜನರ ತಮವ ಕಳೆದ ಸತ್ಕೃತಿ। ಮರ್ಮವರುಹಿ ವಿಶ್ವಕ್ಕೆಲ್ಲ ಮಾರ್ಗ ತೋರುತಿ॥1॥ ತಾಯೆ ನಿನ್ನ ಉದರದಲ್ಲಿ ಬಂದ ರಾಮ ರಘುಪತಿ। ಪಾಂಚಜನ್ಯ ಮೊಳಗಿ ಗೀತೆಯೊರೆದ ಪಾರ್ಥಸಾರಥಿ। ವ್ಯಾಸಬುದ್ಧ ಮಧ್ವ ಬಸವ ಶಂಕರಾದಿ ಋಷಿಯತಿ। ಶಿವ ಪ್ರತಾಪರೆಮಗೆವಂದ್ಯ ಶೌರ್ಯ ಸಂತತಿ॥2॥ ಹರಸುತಾಯೆ ಧ್ಯೇಯಪಥದಿ ಸಾಗಲೆಮ್ಮ ನಲ್ಮತಿ। ಎಮ್ಮ ಹಿರಿಯರಂತೆ ನಿನ್ನ ಸೇವೆಗೈಯ್ಯೆ ಸಮ್ಮತಿ। ನಮನ ತಾಯೆ ಶಕ್ತಿ ನೀಡೆ ಲಕ್ಷ್ಮೀ ದುರ್ಗಿ ಸರಸ್ವತಿ। ನಿನ್ನ ಹಿರಿಮೆ ಗರಿಮೆಗೆನ್ನ ಪ್ರಾಣದಾಹುತಿ॥3॥

ದೇಶಕಾಗಿ ದುಡಿಯುವಾ **ರಾಗ: ತಿಲಂಗ್**

ದೇಶಕಾಗಿ ದುಡಿಯುವಾ, ದೇಶಕಾಗಿ ಮಡಿಯುವಾ। ನಾವು ಭಾರತೀಯರು, ಪರಮ ದೇಶ ಭಕ್ತರು॥ಪ॥ ಒಳಜಗಳವನೆಲ್ಲ ಮರೆತು ಒಂದುಗೂಡಿ ನಡೆಯುವ। ಜಾತಿಪಂಥಗಳನು ಮರೆತು ಒಕ್ಕೊರಳಲಿ ಹಾಡುವಾ॥1॥ ಸೊಕ್ಕಿಮೆರೆವ ವೈರಿಗಳಿಗೆ ಪ್ರಳಯರುದ್ರರಾಗುವಾ। ನೊಂದು ನರಳಿ ಬೆಂದ ಜನರ ಕಣ್ಣೀರನು ತೊಡೆಯುವಾ॥2॥ ತನುಮನಗಳನೆಲ್ಲ ನೀಡಿ ತಾಯ್ನೆಲವನು ಕಾಯುವಾ। ನಮ್ಮ ಜೀವ ನೋಯ್ದರೂ ರಾಷ್ಟ್ರವನ್ನು ಉಳಿಸುವಾ॥3॥

ದೇಶಕೇ ಬಹಾದುರೋ (ಹಿಂದಿ) **ರಾಗ: ಕಲ್ಯಾಣವಸಂತ**

ದೇಶಕೇ ಬಹಾದುರೋ, ಜಾಗೋ ಜಯಾತುರೋಂ। ಹೈ ಸಮಯ ಪ್ರಯಾಣ್ ಕಾ। ಹಿಂದು ದೇಶ ಹಿಂದು ಕಾ। ರಾಷ್ಟ್ರಧರ್ಮ ಕೇ ಲಿಯೇ ಜೀಯೇ ಮರೇ॥ಪ॥ ಹಮ್ ಜವಾನ ದೇಶ ಕೇ, ಲಾಡಲೇ ಸ್ವದೇಶ ಕೇ। ಗತಿ ಕಭೀ ರುಕೇ ನಹೀಂ, ಸರ್ ಕಭೀ ಝುಕೇ ನಹೀಂ। ಪಂಥ್ ಆಗ್ ಸೇ ಭರಾ, ಡಗಮಗಾ ರಹೀ ಧರಾ। ವಾತ ಝೋರ ಝೋರ ದೇಹ ಸಬ ಝುಕೋರ ದೇ। ಪರ ವಿರಾಮ ಲೇ ನ ಹಮ್, ಬಢೇ ಕದಮ್ ಬಢೇ ಕದಮ್॥1॥ ಮರ್ದ ಹೋ ಬಢೇ ಚಲೋ, ಶೃಂಗ ಪರ ಚಢೇ ಚಲೋ। ಅಸಮಾನ ಭೇಂಟ ಲೋ, ಅಂಕ ಮೇ ಲಪೇಟ ಲೋ। ಲಕ್ಷ್ಯ ಅಭೀ ದೂರ ಹೈ, ಶ್ರಮ ತನಿಕ್ ಜರೂರ ಹೈ। ಹಿಂದು ಬಂಧು ಸಾಥ ಲೇ, ಭಂಗ ಸಿಂಧು ಪೂರ್ಣ ಲೇ। ವಿಘ್ನವ್ಯೂಹ ತೋಡಕರ್ ಬಢೇ ಚಲೋ ಬಢೇ ಚಲೋ॥2॥ ತನ್ ಸ್ವಜಾತಿ ಮೇ ಪಲೇ, ಮನ್ ವಿಜಾತಿ ಮೇ ಢಲೇ। ಉಸ್ ಕೃತಘ್ನ ಪಾಪ್ ಕೋ ಕರತ್ ಬೀಚ ಗಾಢ ದೋ। ಜೋ ಚರಿತ್ರವಾನ ಹೈ ವಹ ಸದಾ ಮಹಾನ್ ಹೈ। ಗಾಂವ್ ಗಾಂವ್ ಝುಮತೀ, ವಿಜಯ ಪಾಂವ ಚೂಮತೀ। ಆ ರಹೀ ನಿಹಾರ ಲೋ, ಬಹಾದುರೋ ಬಹಾದುರೋ॥3॥

ದೇಶಸೇವೆ ಈಶಸೇವೆ **ರಾಗ: ಕಲ್ಯಾಣಿ**

ದೇಶಸೇವೆ ಈಶಸೇವೆ। ದೇಶ ತಂದೆ ತಾಯಿ। ದೇಶ ಬಂಧು ಬಳಗವು। ನಮ್ಮ ದೇಶ ಅಮರವು। ನಮ್ಮ ದೇಶ ಅಮರವು॥1॥ ದೇಶಕಾಗಿ ಜೀವ ತೊರೆದ। ಹಿರಿಯ ಕಿರಿಯ ಧೀರರು। ಬೆಳ್ಳಿಚುಕ್ಕೆಯಂತೆ ನಮಗೆ। ಹೊಳೆವ ಬೆಳಕ ತೋರ್ವರು॥2॥ ಧೈರ್ಯ ನಮ್ಮ ಮಾರ್ಗದೀಪ। ತ್ಯಾಗ ನಮ್ಮ ತಂತ್ರ ಮಂತ್ರ। ಸಹನೆ ನಮ್ಮ ದಿವ್ಯ ದೀಕ್ಷೆ। ಪ್ರೇಮ ನಮ್ಮ ಜೀವದುಸಿರು॥3॥

ದೇಶ ದೇಶ ದೇಶ ದೇಶ ದೇಶ ನನ್ನದು **ರಾಗ: ಕಲ್ಯಾಣವಸಂತ**

ದೇಶ ದೇಶ ದೇಶ ದೇಶ ದೇಶ ನನ್ನದು। ಸಿಂಧು ಕಣಿವೆ ಕೈಲಾಸ ಗಿರಿಯು ನನ್ನದು॥ಪ॥ ಹರಿಹರಿಯುವ ನೀರಕಣ ಮೇಲ್ನಗುವ ಬಾನಂಗಣ। ಹಸಿರಾಗಿಹ ಮಣ್ಣಕಣ ಹಾರಾಡುವ ಹಕ್ಕಿಗಣ। ಹೊಳೆಹೊಳೆಯುವ ಚುಕ್ಕಿಗಣ ಎಲ್ಲ ನನ್ನದು। ಎಲ್ಲಾ ನನ್ನದು, ಎಲ್ಲಾ ನನ್ನದು॥2॥ ನರಹರಿಯ ಪಾಂಚಜನ್ಯ, ರಕ್ತದೊಳಗೆ ರಾಮಾಯಣ। ವೇದಗಳ ಉದ್ಘೋಷ ಮಂತ್ರತಂತ್ರ ಆವಾಸ। ಕಿವಿಯ ಮೊರೆವ ಮೇಘದೂತ ಕರುಳ ಕೊರೆವ ಕುರುಕ್ಷೇತ್ರ। ಎಲ್ಲಾ ನನ್ನದು, ಎಲ್ಲಾ ನನ್ನದು॥3॥ ವ್ಯಾಸ ಭಾಸ ಕಾಳಿದಾಸ ಬುದ್ಧ ಬಸವ ಕನಕದಾಸ। ರಾಮಕೃಷ್ಣ ಪರಮಹಂಸ ಮಧುಕೇಶವ ನೀಲಹಂಸ। ತಾಯ ಮಡಿಲ ಮುಗುಳುನಗೆ ಕೋಟಿ ತುಟಿಯ ಮಂದಹಾಸ ಎಲ್ಲ ನನ್ನದು ಎಲ್ಲಾ ನನ್ನದು॥4॥ ನಗೆ ಚೆಲ್ಲುವ ಮಲ್ಲಿಗೆಯ ಹೂದಳವು ನನ್ನದು। ಬಗೆಬಗೆಯ ತೆಂಗುಬಾಳೆ ಕಡಲಾಗಿಹ ಕಾಡಹೊಳೆ। ಬೆಳೆದುನಿಂತ ವನಸಿರಿಯು। ಕಂಗೊಳಿಪ ಬೃಂದಾವನ। ಎಲ್ಲಾ ನನ್ನದು, ಎಲ್ಲಾ ನನ್ನದು॥5॥

ಧರೆಗವತರಿಸಿದೆ ಸ್ವರ್ಗದ **ರಾಗ: ಶಿವರಂಜನಿ**

ಧರೆಗವತರಿಸಿದೆ ಸ್ವರ್ಗದ ಸ್ಪರ್ಧಿಯು ಸುಂದರ ತಾಯ್ನೆಲವು ... ನಮ್ಮೀ ತಾಯ್ನೆಲವು। ದೇವಿ ನಿನ್ನಯ ಸೊಬಗಿನ ಮಹಿಮೆಯ ಬಣ್ಣಿಸಲಸದಳವು॥ಪ॥ ಧವಳ ಹಿಮಾಲಯ ಮುಕುಟದ ಮೆರುಗು। ಕಾಲ್ತೊಳೆಯುತಲಿದೆ ಜಲಧಿಯ ಬುರುಗು। ಗಂಗಾ ಬಯಲಿದು ಹಸುರಿನ ಸೆರಗು। ಕಣಕಣ ಮಂಗಳವು ನಮ್ಮೀ ತಾಯ್ನೆಲವು॥1॥ ಕಾಶ್ಮೀರದಲಿ ಸುರಿವುದು ತುಹಿನ। ರಾಜಾಸ್ಥಾನದಿ ಸುಡುವುದು ಪುಲಿನ। ಮಲಯಾಚಲದಲಿ ಗಂಧದ ಪವನ। ವಿಧವಿಧ ಹೂ ಫಲವು ನಮ್ಮೀ ತಾಯ್ನೆಲವು॥2॥ ಹಲವು ಭಾಷೆ ನುಡಿ ಲಿಪಿಗಳ ತೋಟ। ವಿವಿಧ ಪಂಥ ಮತಗಳ ರಸದೂಟ। ಕಾಣಲು ಕಾಮನಬಿಲ್ಲಿನ ನೋಟ। ಬಗೆಬಗೆ ಸಂಕುಲವು ನಮ್ಮೀ ತಾಯ್ನೆಲವು॥3॥ ಪುಣ್ಯವಂತರಿಗೆ ಇದುವೆ ನಾಕ। ಖಳರಿಗೆ ಆಗಿದೆ ಶಿವನ ಪಿನಾಕ। ಶರಣಾಗತರಿಗೆ ಅಭಯದಾಯಕ। ಯುಗಯುಗದೀ ನಿಲುವು ನಮ್ಮೀ ತಾಯ್ನೆಲವು॥4॥ ಗಂಗೆ ತುಂಗೆಯರ ಅಮೃತ ಸ್ತನ್ಯ। ಕುಡಿಸುತ ಮಾಡಿದೆ ಜೀವನ ಧನ್ಯ। ಮುಡಿಪಿದು ಬದುಕು ನಿನಗೆ ಅನನ್ಯ। ಕ್ಷಣಕ್ಷಣ ಬಲ ಛಲವು ನಮ್ಮೀ ತಾಯ್ನೆಲವು॥5॥

ನದ ನದಿಗಳ ಗಿರಿವನಗಳ **ರಾಗ: ಮೋಹನ**

ನದ ನದಿಗಳ ಗಿರಿವನಗಳ ತಾಯೇ ಭರತಮಾತೆ। ಓಂಕಾರದ ಝೇಂಕಾರದ ನಿನಗಿದೊ ಶುಭಗೀತೆ॥ಪ॥ಹಿಮಚುಂಬಿತ ಶಿಖರದಲ್ಲಿ ತಾಯೆನೀನು ನೆಲೆಸು। ಬಿರುಗಾಳಿಯ ಭಿತ್ತಿಯಿಂದ ನೀನೆಮ್ಮನು ಹರಸು॥1॥ ಗಂಗೆಯಮುನೆ ಸಂಗಮದಲಿ ನಿನ್ನ ವೇದಘೋಷ। ದೇವದಾರು ವನಗಳಲ್ಲಿ ನಿನ್ನ ಮಂದಹಾಸ॥2॥ ವಿಂಧ್ಯಾಚಲದೀಚೆಗಿಲ್ಲಿ ಸಂಧ್ಯಾರುಣಛಾಯೆ। ಕಾವೇರಿಯ ತೆರೆಗಳಲ್ಲಿ ಮೀನಾಕ್ಷಿಯ ಮಾಯೆ॥3॥ ಪರ್ವತಗಳ ಶಿಖರದಿಂದ ಕಡಲಂಚಿನ ತನಕ। ತಾಯೇ ನಿನ್ನ ಮಕುಟದಿಂದ ಹೊಳೆಯಲಿ ಮಣಿಕನಕ॥4॥

ನನ್ನ ದೇಶ ನನ್ನ ಜನ **ರಾಗ: ಕಲ್ಯಾಣಿ**

ನನ್ನ ದೇಶ ನನ್ನ ಜನ। ನನ್ನ ಮಾನ, ಪ್ರಾಣ ಧನ। ತೀರಿಸುವೆನೆ ಅದರ ಋಣ। ಈ ಒಂದೇ ಜನ್ಮದಿ?॥ಪ॥ ಕೆಂಪು

ನೆಲದ ಹಸಿರು ಬೆಳೆ। ಕಪ್ಪು ಮಣ್ಣ ಮೊಗದಕಳೆ। ಸೂರ್ಯಚಂದ್ರ ಚಿಕ್ಕೆಗಳೆ। ನಮ್ಮ ಹಿರಿಯ ಒಕ್ಕಲು।।1।। ನೂರು ಭಾವ ಭಾಷೆ ನೆಲೆ। ನೂರು ಬಣ್ಣ ವೇಷ, ಕಲೆ। ಸ್ವಚ್ಛಂದದ ಹಕ್ಕಿಗಳೆ। ನಮ್ಮ ಹಾಡು ಬದುಕಲು।।2।। ಪ್ರಾಚೀನವ ತಿಕ್ಕಿ ತೊಳೆ। ವರ್ತಮಾನ ಜೀವಕಳೆ। ಉಕ್ಕೇರಲಿ ಬಾಳಹೊಳೆ। ಆ ಭವಿಷ್ಯದೊಡಲಿಗೆ।।3।। ಮೈ ಕೊಡವಿದೆ ಮೂಕಜನ। ಕೈ ಹಿಡಿಯಿರಿ ನಾಕುಚಣ। ಎದ್ದೇಳಲಿ ಎಲ್ಲ ಗುಣ। ಆ ಸಮೃದ್ಧ ಬಾಳಿಗೆ।।4।।

ನಮ್ಮ ಮನದ ಭೂಮಿಯಲ್ಲಿ — ರಾಗ: ಬೃಂದಾವನಸಾರಂಗ

ನಮ್ಮ ಮನದ ಭೂಮಿಯಲ್ಲಿ ಪ್ರೇಮ ಬೀಜ ಬಿತ್ತುವ। ಸೂರ್ಯ ಚಂದ್ರರಿರುವವರೆಗೆ ಇದೇ ಪ್ರೀತಿ ಬೆಳೆಸುವ।।1।। ಅಣ್ಣ ತಮ್ಮ ಅಕ್ಕ ತಂಗಿ (ಓ ನಮ್ಮ ಚಿನ್ನರೆ) 2ಸಲ। ಯಾವ ಜಾತಿ ಯಾವ ಮತ (ಮಕ್ಕಳೊಂದೆಲ್ಲವೇ) 2 ಸಲ।।2।। ಕಾಮಧೇನು ಕಲ್ಪವೃಕ್ಷದಂತೆ ಭರತ ಮಾತೆಯು। ಭಕ್ತಿಯುಂದ ಮಡಿಯುವವಗೆ(ಬೇಡಿದುದನು ಕೊಡುವಳು) 2 ಸಲ।।3।। ಕೊನೆಯ ರಕ್ತ ಹನಿಯವರೆಗೆ (ನಾವು ತೊಡುವ ಫಣವಿದು) 2 ಸಲ। ನಮ್ಮ ಶೌರ್ಯ ಕಾರ್ಯ ದೇಶ ಪ್ರಗತಿಗಿದೋ ಮೀಸಲು(2 ಸಲ)।।4।।

ನವ ಭಾರತ ತರುಣರೆ — ರಾಗ: ಸಿಂಧುಭೈರವಿ

ನವ ಭಾರತ ತರುಣರೆ। ಹದಿ ಹರೆಯದ ಕನಸಿಗರೇ। ನೀವು ಎಚ್ಚರಾದರೆ ಭರತಮಾತೆಗಿರದು ಹೊರೆ। ನಿಮ್ಮ ಶ್ರದ್ಧೆ ಕೊನರಿದರೆ ಹರಿವುದಿಲ್ಲಿ ತಮದ ಪೊರೆ।।ಪ।। ಮೌಲ್ಯ ಅಳಿದ ನಾಡಿನಲ್ಲಿ ಸತ್ಯ ಸೊಗಡು ಬೆಳಗಲು। ಭ್ರಷ್ಟವಾದ ಬಾಳಿನಲ್ಲಿ ನಿಷ್ಠೆಗಂಗೆ ತುಳುಕಲು। ನೀಯತ್ತಿನ ಹೊಸನೆತ್ತರು ಪ್ರವಹಿಸಲಿ ಧಮನಿಯಲಿ। ಚಾರಿತ್ರ್ಯದ ನವಕೇತನ ಹಾರುತಿರಲಿ ಎತ್ತರದಲಿ।।1।। ಎಡಬಲದಲಿ ಸಾವಿರಾರು ಅನ್ಯಾಯ ನಡೆದರು। ನಿಮ್ಮ ಕುರುಡು ತನದ ಫಲಕೆ ಧರ್ಮದ ಗಡಿಪಾರು। ಹಗಲು ಇರುಳು ಕೋಟಿ ಕೋಟಿ ಅಕ್ರಮವೆ ಮೆರೆದರು। ನಿಮ್ಮ ಆಲಸ್ಯ ನೆವಕೆ ನಲುಗಬೇಕೆ ತಾಯಿ ಹೆಸರು?।।2।। ವಿಶ್ವ ಜನತೆ ಕಣ್ಣ ಸೆಳೆವ ಸಂಸ್ಕೃತಿಯ ಬೀಡಿನಲಿ। ಹಿಂಸೆ ಕ್ರೌರ್ಯ, ಭೇದ ಭವಣೆ ಕಿಚ್ಚಿಟ್ಟಿದೆ ಹೃದಯಕೆ। ದೇಶದ ಸ್ಥಿತಿ ಸಾಗುತ್ತಿದೆ ಅವನತಿಯ ಜಾಡಿನಲಿ। ನಿಮ್ಮ ಕರುಳು ಹಿಂಡದೇನು? ಜಾಣ ಕಿವುಡು ಏತಕೆ?

ನಾನೇ ಭಾರತೀಯ — ರಾಗ: ಮೋಹನ

ನಾನೇ ಭಾರತೀಯ।।ಪ।। ನಾನು ಕನ್ನಡಿಗ। ನಾನು ಹಿಂದಿಯವ ನಾನೇ ತಮಿಳನಯ್ಯ।। ನಾನು ತೆಲುಗಿನವ ನಾನು ಮಲೆಯಾಳಿ। ನಾನೇ ಭಾರತೀಯ।।1।। ನಾನು ಹಿಂದುಜನು, ನಾನು ಫಾರಸಿಕ। ನಾನೆ ಮಹಮದೀಯ।। ನಾನು ಯೇಸು ಕುಲ। ನಾನು ಗುರುಭಕ್ತ। ನಾನೆ ಭಾರತೀಯ।।2।। ಭಾಷೆ ನೂರೆಂಟು ಧರ್ಮ ಕಗ್ಗಂಟು। ಎಂದು ಹೇಳಬಹುದೇ? ಲಕ್ಷ ದನಿಯೆದ್ದು ಮುಗಿಲ ಮುಟ್ಟಿದರು। ತಾಳ ತಪ್ಪಬಹುದೇ।।3।। ಮಾತು ನೂರಿರಲಿ ಮತವು ಏನಿರಲಿ ದೇಶ ಧರ್ಮಒಂದು। ದುಡಿಮೆ ಕೈದುಂಬಿ। ಕಸುವು ಮೈದುಂಬಿ। ಜತೆಯಾಗು ಬಾ ಬಂಧು।।4।।

ನಮ್ಮ ದೇಶದ ಭೂಮಿ — ರಾಗ: ಚಾರುಕೇಶಿ

ನಮ್ಮ ದೇಶದ ಭೂಮಿ, ಉಗಿಯಲಿ ಚಿನ್ನ। ಉಗಿಯಲಿ ವಜ್ರ ವೈಢೂರ್ಯ।।ನಮ್ಮ।। ನಮ್ಮ ದೇಶದ ಜನತೆ ತೋರಲಿ ಘನತೆ, ಬಾಳಲಿ ಸುಖ ಸಂತೋಷದಲಿ ಓ...... ಹೋ.....) ಭಾರತ ಮಾತೆಯ ಮಕ್ಕಳು ನಾವು। ಶಾಂತಿಯ ಬಾಳನು ಬಾಳುವೆವು।।1।। ನಮ್ಮ ದೇಶದ ಜನರು ಸ್ವಾತಂತ್ರ್ಯವೀರರು। ನಾಡಿನ ಹಿತಕೆ ಮಡಿಯುವರು। ಭಾರತ ಮಾತೆಯ ಮಕ್ಕಳು ನಾವು। ಶಾಂತಿಯ ಬಾಳನು ಬಾಳುವೆವು।।2।। ನಮ್ಮ ಭಾರತ ಮಾತೆಯು ವೀರಸುಪುತ್ರರ ನಾಡಿನ ಮಕ್ಕಳ ಹರಸುವಳು(ಓ....)।। ಭಾರತ ಮಾತೆಯ ಮಕ್ಕಳು ನಾವು ಶಾಂತಿಯ ಬಾಳನು ಬಾಳುವೆವು।।3।।

ನಾವು ಎಳೆಯರು — ರಾಗ: ಮೋಹನ-ಮ.ಶ್ರ

ನಾವು ಎಳೆಯರು ನಾವು ಗೆಳೆಯರು ಹೃದಯ ಹೂವಿನ ಹಂದರ। ನಾಳೆ ನಾವೇ ನಾಡ ಹಿರಿಯರು। ನಮ್ಮ ಕನಸದೊ

ಸುಂದರ॥ಪ॥ ಹಿಂದು ಮುಸ್ಲಿಂ ಕ್ರೈಸ್ತರೆಲ್ಲರಿಗೊಂದೆ ಭಾರತ ಮಂದಿರ। ಶಾಂತಿದಾತನು ಗಾಂಧಿತಾತನು। ಎದೆಯ ಬಾನಿನ ಚಂದಿರ॥ 1॥ ಜಾತಿರೋಗದ ಭೀತಿ ಕಳೆಯುತ ನೀತಿ ಮಾರ್ಗದಿ ನಡೆವೆವು। ಒಂದೆ ಮಾನವ ಕುಲವು ಎನ್ನುತ ವಿಶ್ವ ಧರ್ಮವ ಪಡೆವೆವು॥2॥ ವೈರ ಮತ್ಸರ ಸ್ವಾರ್ಥವಂಚನೆ ಕ್ರಿಮಿಗಳೆಲ್ಲವ ತೊಡೆವೆವು। ದೇಶ ಸೇವೆಗೆ ದೇಹ ಸವೆಸುವ ದೀಕ್ಷೆ ಇಂದೇ ತೊಡುವೆವು॥3॥ ನಮ್ಮ ಸುತ್ತಲು ಹೆಣೆದು ಕೊಳ್ಳಲಿ ಸ್ನೇಹಪಾಶದ ಬಂಧನ। ಬೆಳಕು ಬೀರಲಿ ಗಂಧ ಹರಡಲಿ ಉರಿದು ಪ್ರೇಮದ ಚಂದನ॥4॥ ನಮ್ಮ ಶಕ್ತಿಗೆ ದಿವ್ಯ ಭಕ್ತಿಗೆ ದೇಶವಾಗಲಿ ನಂದನ। ಅಂದು ಪ್ರೇಮದಿ ಎತ್ತಿಕೊಳ್ಳಲಿ ಭೂಮಿ ತನ್ನಯ ಕಂದನ॥5॥

ನಾವು ನೀವು ಅವರು ಇವರು — ರಾಗ:ಪುನ್ನಾಗವರಾಳಿ

ನಾವು ನೀವು ಅವರು ಇವರು ಒಂದೇ ಒಂದೇ ಒಂದೇ ಭೂಮಿತಾಯ ಕುಡಿಗಳಿಂದು ಪಣವ ತೊಡಿರಿ ಇಂದೇ ಪಣವ ತೊಡಿರಿ ಇಂದೇ॥ಪ॥ ಸ್ವಸ್ವಭಾವ ಚಹರೇ ಬೇರೇ ತಾಯ ಬಸಿರು ಒಂದೇ। ಕಳಸ ಶಿಲುಬೆ ಬಿಳಿಮೀನಾರು ಧರ್ಮದುಸಿರು ಒಂದೇ ಧರ್ಮದುಸಿರು ಒಂದೇ॥1॥ ಆಂಗ್ಲ ಆಫ್ರಿಕನ್ನರಲ್ಲಿ ಹರಿವ ನೆತ್ತರೊಂದೇ। ಅಕ್ಕಿರಾಗಿ ಬಿಳಿದು ಕಂದು ಹುಲ್ಲು ಬಣ್ಣ ಒಂದೇ। ಹುಲ್ಲು ಬಣ್ಣ ಒಂದೇ॥2॥ ಬಾಣ ಬಿರುಸು ಕುಂಡಹಣತೆ ಬೆಳಕಿನಸತ್ವ ಒಂದೇ॥2ಸಾರಿ॥ ಕಂದವೃತ್ತ ತ್ರಿಪದಿ ವಚನ ರಸಕವಿತ್ವ ಒಂದೇ। ರಸಕವಿತ್ವ ಒಂದೇ ಕರ್ನಾಟಕ ವಂಗ ಆಂಧ್ರ ಭಾರತೀಯರೊಂದೇ॥3॥ ಪೂರ್ವೋತ್ತರ ಪಡುತೇಂಕಣ ಗಾಳಿಮುಗಿಲು ಒಂದೇ ಗಾಳಿ ಮುಗಿಲು ಒಂದೇ॥ ರೋಜಜಾಜಿ ದಾಸವಾಳ ಮಣ್ಣಸಾರ ಒಂದೇ॥2ಸಾರಿ॥ ಇರುವೆ ನವಿಲು ಕ್ರಿಮಿ ಪತಂಗ ಪ್ರಾಣಧಾರೇ ಒಂದೇ। ಪ್ರಾಣಧಾರೆ ಒಂದೇ॥4॥ ಕೃಷ್ಣ ಬುದ್ಧ ಮಹಮ್ಮದ್‌ಯೇಸ್ ಭಗವದ್ ವಂಶ ಒಂದೇ॥ ಚುಕ್ಕಿ ಚಂದ್ರ ಗ್ರಹಸಮೂಹ ನಿಹಾರಿಕೆ ಒಂದೇ ನಿಹಾರಿಕೆ ಒಂದೇ॥5॥

ನಾವೆಲ್ಲರೂ ಒಂದಾಗಿ — ರಾಗ: ಅಭೇರಿ

ನಾವೆಲ್ಲರೂ ಒಂದಾಗಿ ಬಾಳೋಣ ಬನ್ನಿ। ನಾವಿಂದು ಹೊಸ ನಾಡ ಕಟ್ಟೋಣ ಬನ್ನಿ॥ಪ॥ ಶಕ್ತಿಯೂ ಶಾಂತಿಯೂ ಸದ್ಭಾವದಲ್ಲಿ ಯುಕ್ತಿಯೂ ಮುಕ್ತಿಯೂ ಸೌಹಾರ್ದದಲ್ಲಿ॥3ಸಾರಿ॥ ನಲಿಯುತ್ತ ಮುಂದೆ ಸಾಗೋಣ ಬನ್ನಿ। ನಾವಿಂದು ಹೊಸ ನಾಡ ಕಟ್ಟೋಣ ಬನ್ನಿ॥1॥ ರವಿಚಂದ್ರರಂತೆ ನೆಲ ಜಲಗಳು ಒಂದೇ। ಧರ್ಮಗಳೊಂದೆ ಕುಲಜನವು ಒಂದೇ। ಒಂದೇ ಒಂದೇ ಒಂದೇ ಏಕತೆಯ ಈ ಹಾಡು ಹಾಡೋಣ ಬನ್ನಿ ನಾವಿಂದು ಹೊಸನಾಡ ಕಟ್ಟೋಣ ಬನ್ನಿ॥2॥

ನಾವೆಲ್ಲರೂ ಒಂದೇ ಜಾತಿ — ರಾಗ: ಬೃಂದಾವನಿ

ನಾವೆಲ್ಲರೂ ಒಂದೇ ಜಾತಿ, ಒಂದೇ, ಮತ ಒಂದೇ ಕುಲ ನಾವು ಮನುಜರು। ನರರ ನಡುವಿನಡ್ಡ ಗೋಡೆಗಳನು ಕುಟ್ಟಿ ಕೆಡುಹುವೆವು ನಾವು ವಿಲಯರುದ್ರರು। ಹೊಸ ಬಾಳಿನ ಹೊಸ ಸಮತೆಯ ಸಮರಸವನು ಸಮೆವೆವು। ನಾವು ನವ ವಿಧಾತರು॥ ತೆರೆಬಾಗಿಲ ಹೊರನೋಟದ ಹೊರ ಹಸುರಿನ ಹಂದರ ನಮ್ಮ ಹೃದಯ ಮಂದಿರ। ಅಲ್ಲಿ ಎಲ್ಲ ಜನಕು ಇದೆ ಸ್ವಾಗತವು ನಿರಂತರ ಚಿರಾ ಉದಾರ ಸುಂದರ। ಬನ್ನಿರಣ್ಣ ಬನ್ನಿರೆಲ್ಲ ಬಣ್ಣದಣ್ಣ ತಮ್ಮರು ನಡೆನುಡಿಯ ನೂರು ಗೋಡೆ ಗೋಡೆ ನಿಮಿರಿ ನಿಂತರೂ। ನಾವೆಲ್ಲರೂ ಒಂದೆ ತಾಯ ಎದೆಯಾಸೆಯ ಕುಡಿಗಳು। ಒಂದೆ ಮಹಾ ಪ್ರೇಮಾಗ್ನಿಯ ಹೋಮಾಗ್ನಿಯ ಕಿಡಿಗಳು॥ ಭೂಮವಾವುದನ್ನೊ ಇಲ್ಲಿ ಬೆಳೆಯೆ ಬಂದ ಭೀಮರು। ಪ್ರೇಮ ಸಿದ್ಧಿಗಾಗಿ ನೋನುತಿರುವ ಸತ್ಯಕಾಮರು। ಕೈಕೈಗಳ ಕುಲುಕಿಸಿ, ಎದೆಗೆದೆಯನು ಹಾಯಿಸಿ। ಭೇದವೆಲ್ಲ ಸುಟ್ಟುರಿವೊಲು ಎದೆಯೊಲವನು ಕೆರಳಿಸಿ। ತೊಳತೊಳಗುವ ನರತೆಯೆಂಬ ಬಂಗಾರವನರಳಿಸಿ। ಯುವಜನವಿದೊ ನವಜನವಿದೊ ದುಡುಕುತಿಹುದು ಮುಂದಕೆ। ಪದಪದಕೂ ಯುಗಯುಗಗಳೆ ಸರಿಯುತಿರಲು ಹಿಂದಕೆ। ಒಮ್ಮತದೊಗ್ಗಟ್ಟಿನ ಒಬ್ಬಗೆಬಾಳಿನ ಚಂದಕೆ॥ ಜಾತಿಮತದ ಗುಹೆಗಳಿಂದ ಹೊರಬನ್ನಿರಿ ಬಯಲಿಗೆ। ಕೃತಕ ತಿಮಿರದಾಳದಿಂದ ವಿಸ್ತಾರದ ಬೆಳಕಿಗೆ। ಸೇರಿಕೊಳ್ಳಿ ಕೂಡಿಕೊಳ್ಳಿ ಮುನ್ನುಗ್ಗುವ ಸಾಲಿಗೆ। ಕತ್ತಲೊಡನೆ ಹೂಡಿದ ಈ ಉತ್ಸಾಹದ ಧಾಳಿಗೆ। ಕೂಡಿಸಿರೆದೆ

ಕೊರಲುಗಳನು ಹೊಸ ಬಾಳಿನ ಹಾಡಿಗೆ। ನಾವೆಲ್ಲರು ಒಂದೆ ಜಾತಿ, ಒಂದೆ ಮತ, ಒಂದೆ ಕುಲ। ನಾವು ಮನುಜರು। ಹೊಸ ಬಾಳಿನ ಹೊಸ ಸಮತೆಯ ಸಮರಸವನು ಸಮೆವೆವು ನಾವು ನವವಿಧಾತರು॥

ನೀಡ ಬನ್ನಿರಿ ನಾಡಿಗೆ ತುಂಬದಿರುವುದು **ರಾಗ: ಸಿಂಧುಭೈರವಿ**

ನೀಡ ಬನ್ನಿರಿ ನಾಡಿಗೆ ತುಂಬದಿರುವುದು ಜೋಳಿಗೆ। ಗಡಿಯ ಕಾಯುತ ಹೋರುತಿರುವರು ಭಾರತಾಂಬೆಯ ಪುತ್ರರು॥ಪ॥ ಹಿಮದ ಕೋಡಿಗೆ ವೀರ ಯೋಧರು। ರಕ್ತ ತಿಲಕವನಿಟ್ಟರು। ರಾಷ್ಟ್ರರಕ್ಷಣೆಗಾಗಿ ಕಂಕಣ। ತೊಟ್ಟು ಬನ್ನಿರಿ ನಿಲ್ಲದೇ। ಪಾಂಚಜನ್ಯದ ವೀರ ಘೋಷಣೆ। ಮತ್ತೆ ಮೊಳಗಂಗುಗ್ಗದೆ॥1॥ ಜನ್ಮಭೂಮಿಯ ಮರೆಯಲಾರೆವು ಎನುತ ಭಾಷೆಯ ಮಾಡಿರಿ। ಭರತ ಖಂಡದ ಕ್ಷಾತ್ರ ಉಕ್ಕಲಿ। ನಾಡ ಬಾವುಟ ಮೆರೆಯಲಿ। ಹೆಜ್ಜೆ ಹೆಜ್ಜೆಗೂ ಹಿರಿಮೆ ನಿಲ್ಲಲಿ। ಗಾಂಧಿ ಹರಕೆಯು ಸಲ್ಲಲಿ॥2॥

ನೂರು ಧರ್ಮ ಬೆಳಗುತಿದೆ **ರಾಗ: ಬೃಂದಾವನಸಾರಂಗ–ಕೆ. ರಾಜಲಕ್ಷ್ಮಿ**

ನೂರು ಧರ್ಮ ಬೆಳಗುತಿದೆ ಈ ನೆಲದಲಿ। ನೂರು ಭಾಷೆ ಬಳಕೆ ಇದೆ ಈ ನೆಲದಲಿ। ಬಾಳಿ ಬೆಳಗುವಂಥ ನಾಡ ಪ್ರಗತಿಗಾಗಿ ಶ್ರಮಿಸುವಾ। ತಾಯ ಮೊಗದ ಕಾಂತಿ ಕುಂದಿಸದೆ ಬೆಳೆಸುವಾ॥ ಧರ್ಮ ಭಾಷೆ ಭಾಷೆ ಧರ್ಮ ಒಂದಕ್ಕೊಂದಾಸರೆ। ಧರ್ಮಭಾಷೆ ಸಂಯೋಗದ ಹಿಡಿತ ನುಡಿತ ಬೇರೆ। ಧರ್ಮ ಬೇರೆ ಆದರೇನು ಕರ್ಮಯೋಗಿಯಾಗುವಾ। ಮೈತ್ರಿ ಸಹನೆಯಿಂದ ಬಾಳಿ ಮುಂದೆ ಮುಂದೆ ಸಾಗುವಾ॥

ಪಾಡಿರಿ ಭಾರತ ಕುವರರು ಕೂಡಿ **ರಾಗ: ಸೌಖ್ಯದಾಯಿನಿ**

ಪಾಡಿರಿ ಭಾರತ ಕುವರರು ಕೂಡಿ ಸ್ವತಂತ್ರ ಗೀತೆಯನು। ನಾಡಿನ ಮಕ್ಕಳ ಭವಿಷ್ಯಕ್ಕಾಗಿ ನೀಡಿರಿ ತನುಮನವ॥ ಗಂಗಾ ಯಮುನಾ ಪಾವನ ನದಿಗಳ ಸಂಗಮ ಸ್ಥಾನವಿದು। ಜನ್ನ ಕಾಳಿದಾಸಾದಿ ಕವಿಗಳ ಪೊನ್ನಿನ ಭಾರತವೂ॥1॥ ಅಶೋಕ ರನ್ನ ಝಾನ್ಸಿ, ಚೆನ್ನಮ್ಮರ ಹಿರಿಮೆಯ ತವರೂರು ಕವಿ ರವೀಂದ್ರನಾಥ ಠಾಕೂರರ ಕಾವ್ಯಸಾಗರವು॥2॥ ಹಿಂದು ಕ್ರೈಸ್ತ ಮುಸಲ್ಮಾನರೊಳಗೆ ಭೇಧವ ಮರೆತು ನೀವ್ ವಿಶ್ವಧರ್ಮಶಾಂತಿ। ಪ್ರೇಮಗಳ ದೇಶವ ಕಟ್ಟಲು ಪಣವ ತೊಡಿರಿ ನೀವ್॥3॥

ಪುಣ್ಯಭೂಮಿ ಜನ್ಮಭೂಮಿ **ರಾಗ: ಬೃಂದಾವನಸಾರಂಗ**

ಪುಣ್ಯಭೂಮಿ ಜನ್ಮಭೂಮಿ ನಮ್ಮ ಭೂಮಿ ಭಾರತ। ರಮ್ಯಭೂಮಿ ದಿವ್ಯಭೂಮಿ ನಮ್ಮ ಭವ್ಯ ಭಾರತ॥ಪ॥ ಗಗನಚುಂಬಿ ಶಿಖರಗಳ ಹಚ್ಚ ಹಸಿರು ವನಗಳ। ನೃತ್ಯ ಗಾನ ಕಲೆಗಳ ಚತುರ ಶಿಲ್ಪ ಕಲೆಗಳ॥ ಅ.ಪ॥ ಗಾಂಧೀ ಸುಭಾಷ್ ನೆಹರುರನ್ನು ಪಡೆದ ನಮ್ಮ ಭಾರತ। ಮಹಾವೀರ ಬುದ್ಧನಾನಕ ಪರಮಹಂಸ ಕುವರರ ಇಂಥ ದಿವ್ಯ ಜ್ಯೋತಿಗಳನು ಪಡೆದ ನಮ್ಮ ಭಾರತ॥1॥ ಗಂಗೆ ಸಿಂಧು ಯಮುನೆ ಕಾವೇರಿ, ಕೃಷ್ಣೆ ಗೋದಾವರಿ ಇಂಥ ಪುಣ್ಯ ನದಿಗಳ ಪಡೆದ ನಮ್ಮ ಭಾರತ। ರಮ್ಯಭೂಮಿ ದಿವ್ಯಭೂಮಿ ನಮ್ಮ ಭವ್ಯ ಭಾರತ॥2॥

ಬಚ್ಚೋಂಸಾ ಭೋಲಾ (ಹಿಂದಿ) **ರಾಗ: ಕಲ್ಯಾಣಿ**

ಬಚ್ಚೋಂಸಾ ಭೋಲಾ ರಾಜ್ ದುಲಾರಾ ಹೈ। ಯಹ್ ದೇಶ್ ಹಮಾರಾ ಪ್ಯಾರಾ ಪ್ಯಾರಾ ಹೈ॥ಪ॥ ಇಸ್‌ಕೇ ಪರ್ವತ್ ಇಸ್‌ಕೀ ಪಾವನ್ ನದಿಯಾಂ। ಭರ್‌ಪೇಟ್ ನಹಾಯೀಹೈ ಜಿನ್ ಮೇ ಸದಿಯಾಂ। ವೈಸೆತೋ ಸಾರೆ ದೇಶ್ ಸಿತಾರೇ ಹೈ। ಲೇಕಿನ್ ಯಹ್ ಉನ್ ಸಬ್ ಮೇ ಧ್ರುವತಾರಾ ಹೈ॥1॥ ಕೋಣಾರ್ಕ್, ಅಜಂತ, ಸುಂದರ್ ತಾಜ್‌ಮಹಲ್। ಗಂಭೀರ ಹಿಮಾಲಯ್ ಉಸ್ ಪರ್ ಗಂಗಾಜಲ್। ಜೋ ದುನಿಯಾ ಭರ್ ಮೇ ಪ್ಯಾರ್ ಲುಟಾತಾ ಹೈ। ಯಹ್ ದೇಶ್ ಹಮಾರಾ ವಹ್ ಬಂಜಾರಾ ಹೈ॥2॥ ಯೆ ಬಹುರಂಗೀ ಆಕಾಶ್ ಕಹಾಂ ಹೋಂಗೇ। ಕವೀ ಹೋಂಗೆ ತುಲಸೀದಾಸ್ ಕಹಾಂ ಹೋಂಗೇ। ಗಢ್ ಕಾ ಮೈಲಾ ಮೇರಠ್ ಕೀ ನೌಚಂದೀ। ಇನ್‌ಪರ್ ಹಮ್‌ನೇ ಹರ್ ವೈಭವ್ ಹಾರಾ ಹೈ॥3॥

ಬನ್ನಿ ಮಕ್ಕಳೇ ಬನ್ನಿ **ರಾಗ: ಮೋಹನ**

ಬನ್ನಿ ಮಕ್ಕಳೇ ಬನ್ನಿ ಮಕ್ಕಳೇ ಭವ್ಯ ನಾಡ ಕಟ್ಟುವಾ, ದಿಟ್ಟ ಹೆಜ್ಜೆ ಇಡುತ ನಾವು। ದೇಶ ಸೇವೆ ಮಾಡುವಾ।।ಪ।। ಬನ್ನಿ ಮಕ್ಕಳೆ ಬನ್ನಿ (2ಸಾರಿ) ಬನ್ನಿ (2ಸಾರಿ) ಬನ್ನಿ (8ಸಾರಿ)।। ಹಿರಿದು ಕಿರಿದು ಭೇದ ಬಿಟ್ಟು। ಮೇಲು ಕೀಳು ಭಾವ ತೊರೆದು।2ಸಾರಿ। ಒಂದೆ ತಾಯ ಮಕ್ಕಳೆಂದು ಕೂಡಿ ಕೊಂಡು ನಡೆಯುವಾ(2ಸಾರಿ)।।1।। ಒಳ್ಳೆ ವಿದ್ಯೆ ಬುದ್ಧಿ ಕಲಿತು ಧೀರ ಪ್ರಜೆಗಳಾಗುವಾ।2ಸಾರಿ। ದೇಶ ದೇಶ ಮೂಲೆಗಳಿಗೂಶಾಂತಿ ಮಂತ್ರ ಸಾರುವಾ.....।2ಸಾರಿ।।2।। ಗಾಂಧೀ ತಾತ ಹೇಳಿದಂತೆ ಹಿಂಸೆ ಬಿಟ್ಟು ಸ್ನೇಹ ಮಾಡಿ।।2ಸಾರಿ।। ಒಳಿತು ಬಯಕೆಯಿಂದ ಕೂಡಿ ಎಲ್ಲರೊಡನೆ ಕೂಡುವಾ।।2ಸಾರಿ।।3।। ಶೌರ್ಯವೀರ ಧೈರ್ಯದಿಂದ ದುಷ್ಟಶಕ್ತಿ ಗೆಲ್ಲುವಾ।।2ಸಾರಿ।। ಜ್ಞಾನಶಕ್ತಿ ಬೆಳೆಸಿ ನಾವು ಸ್ವಚ್ಛಬಾಳ ನಡೆಸುವಾ।।2ಸಾರಿ।।4।।

ಬನ್ನಿ ಸೋದರರೆ ಬನ್ನಿ ಬಾಂಧವರೆ **ರಾಗ: ಸೌಖ್ಯದಾಯಿನಿ**

ಬನ್ನಿ ಸೋದರರೆ ಬನ್ನಿ ಬಾಂಧವರೆ ಹೃದಯ ಹೃದಯಗಳ ಬೆಸೆಯೋಣ। ವಸುಧಾ ಕುಟುಂಬ ರಚಿಸೋಣ। ಮೊಳಗಲಿ ತಾಯ ಯಶೋಗಾನ। ಭಾರತೀ ಜಯ ಭಾರತೀ। ಜಯ ಭಾರತೀ ಜಯ ಭಾರತೀ।।ಪ।। ಹಸಿವಡಗಲಿ ತೃಷೆ ಹಿಂಗಲಿ ಅಜ್ಞಾನದ ಪೊರೆ ಹರಿಯಲಿ। ರೋಗ ರೂಢಿಗಳಿಗೊದಗಲಿ ಅವಸಾನ - ಸುತರೆಮಗಿದು ಕರ್ತವ್ಯಪಣ। ಧರೆ ಎನಿಸಲಿ ಆನಂದವನ।। ವಸುಧಾ ಕುಟುಂಬ....।। ಕೊರತೆ ಕಲುಷಗಳನಳಿದಳಿದು-ಸರಿಯುತ್ತರ ಸುರಿಮಳೆಗರೆದು ಸರ್ವವ್ಯಾಪಿಯಾಗಲಿ ಸಂಕ್ರಮಣ - ಸಂಘಟನಾಬಲ ನಿರ್ಮಾಣ ವಿಶ್ವ ಸಂತತಿಯ ಕಲ್ಯಾಣ।।ವಸುಧಾಕುಟುಂಬ....।।2।। ಹಿಂದು ಚಿಂತನಾನುಷ್ಠಾನ - ತಂದೊಲಿಸಲಿ ಜಗದುತ್ಥಾನ। ಮಾತೆ ಭಾರತಿಯ ವೈಭವ ಸುದಿನ - ಮೈದಾಳಲಿ ನೆಲದಭಿಮಾನ। ಹಿಂದುತ್ವದ ನವ ಜಾಗರಣ।।ವಸುಧಾ ಕುಟುಂಬ....।।3।।

ಬನ್ನಿರೈ ಗೆಳೆಯರೆ ಒಂದುಗೂಡಿರೀಗಲೇ **ರಾಗ: ತಿಲಂಗ್**

ಬನ್ನಿರೈ ಗೆಳೆಯರೆ ಒಂದುಗೂಡಿರೀಗಲೇ। ಹಿಂದು ಮಾತೆಗಾಗಿ ಮೀಸಲಿಡೀ ನಿಮ್ಮ ತನುಮನ।।ಪ।। ಬನ್ನಿರೈ ವೀರರೇ ವೀರರೇ ಶೂರರೇ। ಚೆನ್ನ ನಾಡ ಕಟ್ಟಲು ರಾಷ್ಟ್ರಧ್ವಜವನೆತ್ತಲು। ಕಾರ್ಯಕಿಂದು ಹತ್ತಲು।।1।। ಕತ್ತಲೆಯು ಹಬ್ಬಿತ್ತು ಸುತ್ತಮಬ್ಬು ಮುಸುಕಿತ್ತು। ಕತ್ತಲೆಯ ನೀಗಿದ್ದೀರಿ ಆನಂದ ಹೊಂದಿರಿ।।2।। ಗಾಂಧಿ, ಪಟೇಲ್, ನೆಹರು, ಆಜಾದ್, ರಾಜೇಂದ್ರ ಪ್ರಸಾದರು। ರಾಷ್ಟ್ರಸ್ತಂಭ ಆಗಿದ್ದಂತೆ ನೀವೂ ಆಗಲು।।3।।

ಬಂಗಾರದಿ ಬರೆದಿಟ್ಟಿದೆ **ರಾಗ: ಮೋಹನ**

ಬಂಗಾರದಿ ಬರೆದಿಟ್ಟಿದೆ ಭಾರತ ಇತಿಹಾಸ। ಪುಟಪುಟದಲಿ ಪುಟಿದೆದ್ದಿದೆ ವೀರರ ಸಂದೇಶ।।ಪ।। ನೆಲ ನಮ್ಮದು ಜಲ ನಮ್ಮದು ನಮ್ಮದು ಈ ದೇಶ। ಗಿರಿ ನಮ್ಮದು ಝರಿ ನಮ್ಮದು ನಮ್ಮದು ಈ ದೇಶ। ಸ್ವಾತಂತ್ರ್ಯದಿ ಸ್ವಧರ್ಮವೆ ಶಾಂತಿಯ ಮೈತಳೆದು। ಜಗಕೀಯುವ ಸಂದೇಶವ ಕೇಳಿರಿ ಕಿವಿ ತೆರೆದು।।1।। ನೆರೆ ನಾಡಿನ ಒಂದಂಗುಲ ನಮಗೊಗ್ಗದು ಸಲ್ಲ। ಶರಣೆನ್ನುತ ಬಂದವರನು ಕೈ ಬಿಡುವವರಲ್ಲ। ಇದು ಕೇವಲ ಕವಿಕಲ್ಪನೆ ಬಣ್ಣನೆ ಮಾತಲ್ಲ। ಇದು ನಿತ್ಯವು ಇದು ಸತ್ಯವು ಉತ್ಪ್ರೇಕ್ಷೆಯು ಅಲ್ಲ।।2।।

ಬಂದೆವಿದೋ2 ತಾಯೆ ನಿನ್ನ **ರಾಗ: ವಸಂತ**

ಬಂದೆವಿದೋ ಬಂದೆವಿದೋ ತಾಯೆ ನಿನ್ನ ಕರೆಗೆ। ನಮ್ಮ ಧಮನಿಯಲ್ಲಿ ರಕುತ ಧುಮುಕುತಿರುವ ವರೆಗೆ। ವೀರಮಾತೆ ಧೀರರಾಗಿ ನಿನ್ನ ಗೌರವಕ್ಕೆ ಕಾದಿ ವಿಜಯ ಮಾಲೆ ಹಿಡಿದು। ಬಹೆವು ನಿನ್ನ ಪಾದಕೆ।।1।। ನಮ್ಮ ಪ್ರಾಣ ನಮ್ಮ ತ್ರಾಣ ಅರ್ಪಣ ತವ ಪದಕೆ। ಎದೆಯ ನೆಚ್ಚು ಭುಜದ ಕೆಚ್ಚು ದರ್ಪಣತಮ ಜಯಕೆ। ಬಂದೆವಿದೊ ಭಾರತಾಂಬೆ ಧ್ವಜವನೆತ್ತಿ ಬಾನಿಗೆ। ಕಾದಿ ವಿಜಯ ಮಾಲೆ ಹಿಡಿದು ಬಹೆವು ನಿನ್ನ ಪಾದಕೆ।।2।। ನೀನೆ ಇತ್ತ ಶೌರ್ಯ ಧೈರ್ಯ ತಾಯೆ ನಿನಗೆ

ಕಾಣ್ಕೆ। ತಳೆದು ಬಂದೆವಿದೋ ಮಾತೆ ಬಂಧುರತೆಯ ರೆಕ್ಕೆ। ಮಾತೃ ಭಕ್ತಿ ಸ್ಫೂರ್ತಿಯಾಗಿ ವಿಜಯ ವೀರ ಸಿರಿಗೆ। ಕಾದಿ ಜಯದ ಮಾಲೆ ಹಿಡಿದು ಬಹೆವು ನಿನ್ನ ಪದಕೆ॥3॥

ಭರತನಾಳಿದ ಭವ್ಯ ಭಾರತ — ರಾಗ: ಮೋಹನ

ಭರತನಾಳಿದ ಭವ್ಯ ಭಾರತ। ರಾಮ ಚಂದ್ರನ ದೇಗುಲ। ಮಹಾಭಾರತವಾಗಿ ನಿಂತಿದೆ ವ್ಯಾಸಹಾಡಲು ಜೋಗುಳ॥ ಬುದ್ಧ ಬಸವರು ಸಿದ್ಧ ಶರಣರು ಜನಿಸಿ ಬೆಳಗಿಹ ನಾಡಿದು। ಸತ್ಯ ಶಾಂತಿಯ ಪ್ರೇಮ ಕೀರ್ತಿಯ ಹೊನಲು ಹರಿಸಿದ ಜಾಡಿದು। ಗಂಗಾಧರರು ತಿಲಕವಿಟ್ಟು ನೊಸಲಿಗೆ ಸ್ವಾತಂತ್ರ್ಯ ಘೋಷಣೆ ಗೈದರು॥ ಬಂಧ ಹರಿಯುವ ಛಂದ ಸೂತ್ರಕೆ ಲೋಕಮಾನ್ಯರೇ ಆದರು। ಕವಿರವೀಂದ್ರರು ಒಲಿಸಿ ವಿದ್ಯೆಯ ಕೀರ್ತಿ ಸರಸತಿ ತಂದರು। ಸಾಹಿತ್ಯಸಂಸ್ಕೃತಿ, ಕಲೆಯ ಮೂರುತಿ ಗುರುದೇವರಾಗಿಯೆ ನಿಂದರು। ಬಾಪು ಭಾರತಲೋಕ ಬೆಳಗುತ ವಿಶ್ವವಂದ್ಯ ರಾದರು। ದೀನದಲಿತರ ಸೇವೆಗೈಯುತ ಸತ್ಯಕಾಗಿಯೆ ಮಡಿದರು॥

ಭಾರತ ಗೀತೆಯ ಹಾಡುವೆವು — ರಾಗ: ಶುದ್ಧಧನ್ಯಾಸಿ

ಭಾರತ ಗೀತೆಯ ಹಾಡುವೆವು ನಾವು। ಭಾರತ ಮಾತೆಯ ಮಕ್ಕಳು ನಾವು। ಹಾರಿಸಿ ಧ್ವಜವನು ಕೂಗುವೆವು। ಭಾರತ ಜನನಿಯ ಪೊಗಳುವೆವು॥1॥ ಗಂಗಾ ಯಮುನಾ ಸಿಂಧೂ ಕಾವೇರಿ। ಮಂಗಳೆಯರು ಹರಿದಾಡುವರು। ಬಂಗಾರದ ಗಣಿ ಉನ್ನತ ಹಿಮಗಿರಿ। ಕಂಗೊಳಿಸುವುದೆ ಭಾಗ್ಯದ ನಗರಿ॥2॥ ಮಿಂಚಿನ ಪ್ರಭೆಗುಡಿ ಗೋಪುರ ನೋಡು। ರಂಜಿಪ ವನಗಳ ಸೊಂಪಿನ ಕಾಡು। ಪಂಚಮ ಸ್ವರದಲಿ ಕೋಗಿಲೆ ಹಾಡು। ಮಂಜುಳ ಗೀತೆಯ ಇಂಪಿಗೆ ಧ್ವನಿಕೊಡು॥3॥ ಬುದ್ಧ ಮಹಾತ್ಮ ಗಾಂಧಿಯ ತತ್ವವು। ಒಂದೇ ಶಾಂತಿಯ ದಾರಿಗೆ ಮಂತ್ರವು। ವಿದ್ಯೆಯು ಅಹಿಂಸಾ ತತ್ವವು ಶುದ್ಧ। ಮನದಿ ಸಹ ಬಾಳ್ವೆಯ ಧರ್ಮವು॥4॥

ಭಾರತೀಯರು ನಾವು — ರಾಗ: ಕಲ್ಯಾಣಿ

ಭಾರತೀಯರು ನಾವು ಎಂದೆಂದು ಒಂದೇ। ಭಾವೈಕ್ಯದಲ್ಲಿ ಕೂಡಿ ನಡೆಯುವೆವು ಮುಂದೆ॥ಪ॥ ನೂರು ಮತ ನಮಗಿರಲಿ। ನೂರು ಮಾತಾಗಿರಲಿ। ನಾಡಿನಾ ಜನಮನ ನಾವೆಲ್ಲ ಒಂದೆ। ನಾಡರಕ್ಷಣೆಗಾಗಿ ನಡೆಯುವೆವು ಮುಂದೆ॥1॥ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ। ಕಂಗೊಳಿಪ ತಾಯ್ನಾಡೆ ಪ್ರಾಣಕ್ಕು ಮಿಗಿಲೆಮಗೆ। ಕುಲಭೇದ ಜಲಭೇದ ಜಾತಿ ಭೇದವ ತೊರೆದು। ಕಾಳಗಕೆ ಒಂದಾಗಿ ನಡೆಯುವೆವು ಮುಂದೆ॥2॥ ನಮ್ಮ ನೆಲದಿಂದ ಹಗೆ ದೂರ ಸರಿಯುವತನಕ। ನಮ್ಮ ಧಮನಿಯಲಿ ಬಿಸಿರಕ್ತವಿರುವನಕ। ನಮ್ಮುಸಿರು ನಮ್ಮಬಲ ನಗನಾಣ್ಯ ಧನಕನಕ। ನಮಗೆ ಬೆಂಬಲವಾಗಿ ನಮ್ಮ ಛಲವಿರುವನಕ॥3॥

ಭಾರತ ಮಾತೆಯ ಮಕ್ಕಳು ನಾವು — ರಾಗ: ಶುದ್ಧಧನ್ಯಾಸಿ

ಭಾರತ ಮಾತೆಯ ಮಕ್ಕಳು ನಾವು ಕನ್ನಡ ನೆಲದೊಳಗೆ। ನಮ್ಮೀ ನಾಡಿನ ಚೆಲುವಿಗೆ ಸಾಟಿ। ಇರುವುದೆ ಜಗದೊಳಗೆ॥ಪ॥ ಭಾಷೆ ಉಡುಗೆಮತ ಪದ್ಧತಿ ಹಲವು ವೈಶಿಷ್ಟ್ಯ ಒಂದೊಂದೇ। ಉತ್ತರ ದಕ್ಷಿಣ ಭಾರತಕೆಲ್ಲ। ಸಂಸ್ಕೃತಿ ತಾನೊಂದೆ॥1॥ ಧರ್ಮ ಸಮನ್ವಯ ಮಾನವ ಪ್ರೇಮವು ಕನ್ನಡ ಸಹಜಗುಣ॥2ಸಾರಿ॥ ಉದಿಸುವ ನವಶತಮಾನದ ಗುರಿಯ ಸಾಧಿಸಿ ದುಡಿಯೋಣ॥2॥ ನಗುತಲಿ ದುಡಿವೆವು ಶಪಥವ ಮಾಡಿ ಹೃದಯವು ಒಂದಾಗಿ।2ಸಾರಿ। ಭಾರತ ಕೀರ್ತಿಗೆ ಚ್ಯುತಿ ಬರದಂತೆ ಸತ್ಯಕೆ ತಲೆಬಾಗಿ॥3॥ ಸಕಲ ಜೀವರಿಗೆ ಲೇಸನೆ ಬಯಸಿ ಬೆಳಕನು ಹಂಚುವೆವು। ವಿಶ್ವದ ಸುಖಶಾಂತಿಯ ಹಾರೈಸಿ ಶುಭವನೆ ಕೋರುವೆವು॥4॥

ಭಾರತವರ್ಷ್ ಮಹಾನ್ (ಹಿಂದಿ) ರಾಗ: ಮೋಹನ

ಭಾರತವರ್ಷ್ ಮಹಾನ್, ಭಾರತ್‌ವರ್ಷ್ ಮಹಾನ್॥ಪ॥ ಗಗನವಿಚುಂಬಿತ್ ಮಸ್ತಕ್ ಹಿಮನಗ್। ಪಹನೇ ರವಿಕಿರಣೋಂಕೀ ಮಾಲಾ। ತೇರೇ ಪಾವನ್ ಚರಣ್ ಧೋ ರಹಾ ಹಿಂದ್ ಮಹಾಸಾಗರ್ ಮತ್‌ವಾಲಾ। ದ್ವಿಜ್‌ಗಣ್ ಬಂದೀ ಆಜ್ ಗಾ ರಹಾ ತೇರಾ। ಮಂಗಲ್ ಗಾನ್ ತೇರಾ ಮಂಗಲ್ ಗಾನ್॥1॥ ಕಲ್ ಕಲ್ ಕರತೀ ಕಲಿಮಲ್ ಹರತೀ। ಬಹತೀ ಕರುಣಾರಸ್ ಕೀ ಗಂಗಾ। ಬೃಂದಾವನ್ ಕೋ ಸರಸ್ ಬನಾತೀ। ಪಾವನ್ ಜಮುನಾ ತುಂಗ್ ತರಂಗಾ। ಜಗಕೋ ಅಮೃತ್ ರಸ್ ಸೇ ಕರತೀ ಜೋ ಅಮರತ್ವ ಪ್ರಧಾನ್ ಜೋ ಅಮರತ್ವ ಪ್ರಧಾನ್॥2॥ ಮುನಿ ದಧೀಚಿನೇ ಅಸ್ತಿದಾನ್ ಕರ್ ಜಗತೀಕಾ ಕಲ್ಯಾಣ್ ಕಿಯಾ ಥಾ। ಶಿಬೀನೆ ಅಪನೆ ಅಂಗ್ ಕಾಟ್ ಕರ್। ಶರಣಾಗತ್ ಕಾ ತ್ರಾಣ್ ಕಿಯಾ ಥಾ॥ ರಾಮ ಕೃಷ್ಣ್‌ಸೆ ದಿವ್ಯ ಪುರುಷ್ ಹೈ ತೇರೀ ವರಸಂತಾನ್॥3॥ ಪರಹಿತ್ ತೇರಾ ಪಾವನ್ ಪಥ್ ಹೈ। ತ್ಯಾಗಭಾವ್ ಸಂಸ್ಕೃತಿ ಹೈ ತೇರೀ। ಅಖಿಲ ವಿಶ್ವ ಸಂಪನ್ನ ಸುಖೀ ಹೈ ಏಕ್ ಯಹೀ ಆಕಾಂಕ್ಷಾ ತೇರೀ। ತೇರೀ ಮಮತಾಮೆ ಪಲ್ ಕರ್‌ಹೀ ಜಗ್ ಪಾತಾ ಸಮ್ಮಾನ್॥ ಭಾರತವರ್ಷ್ ಮಹಾನ್॥4॥

ಭಾರತೀಯ್ ಹೈ ಹಮ್ (ಹಿಂದಿ) ರಾಗ: ಶಂಕರಾಭರಣ–ನೋಟ್

ಭಾರತೀಯ್ ಹೈ ಹಮ್ ಭಾರತೀಯ ಹೈ। ಭಾಗ್ಯವಾನ್ ಲೋಗ್ ಹಮ್ ಭಾರತೀಯ ಹೈ॥ ಚಾರತಾಲ್ ಸೇ ಬನೆ ಏಕ್ ಫೂಲ್ ಬಾಗ್ ಮೇ। ಆಗೇ ಚಲ್ ರಹೆ ಹಮ್ ರಹೆ ದೀಪ್ ಬನ್ ತೇರೆ॥1॥ ಬಾಪೂ ಏಕ್ ಪಥ್ ದಿಖಾಯೆ ಸತ್ಯ ಅಹಿಂಸಾ। ಸೇವಾಕೀ ಏಕ್ ರಾಹ್‌ಮದರ್ ತೆರೆಸಾ। ರಾಷ್ಟ್ರೋಂ ಕೆ ಹಿತ ಕೆಲಿಯೇ ನೆಹರೂ ಪಂಚಶೀಲ್ ವಿಶ್ವ ಪ್ರೇಮ ತತ್ವ ಹೈ ಭಾರತ ತಂತ್ರವಾಣೀ॥2॥ ಸರ್ವಧರ್ಮ ಸರ್ವಲೋಕ ರಹೆ ಏಕ್ ರಾಷ್ಟ್ರ। ನಾನಾ ಪರಿಭಾಷೋಂ ಕೀ ಚಿಡಿಯೋಂ ಕೆ ಧಾಮ್। ದೇವ ಏಕ ನಾಮ್ ವಿವಿಧ ಐಸೆ ಕರ್ಮತತ್ವ ಕಾ। ತತ್ವ ಕಹ್ತೇ ಚಲ್‌ತೇ ರಹೆ ಸತ್ಯಧರ್ಮ ದೇಶ॥3॥

ಭಾರತಾಂಬೆ ನಮ್ಮ ಮಾತೆ ರಾಗ: ಶಂಕರಾಭರಣ

ಭಾರತಾಂಬೆ ನಮ್ಮ ಮಾತೆ ಜೀವಕಿಂತ ಮೇಲು। ಜೀವಕಿಂತ ಮೇಲು ನಮ್ಮ ಪ್ರಾಣಕಿಂತ ಮೇಲು॥ಪ॥ ಭಿನ್ನ ಭಿನ್ನ ಭೇದ ಭಾವ ಎಲ್ಲವನ್ನು ನೀಗುತ। ಒಂದೆ ತಾಯ ಮಕ್ಕಳೆಲ್ಲ ನಾವು ನೀವು ಎನ್ನುತ। ಒಂದು ಗೂಡಿ ಬಾಳುತ, ಒಂದು ಗೂಡಿ ಬಾಳುತ॥1॥ ಜಗದ ಶಾಂತಿ ಜನರ ಶಾಂತಿ ಕೂಡಿ ಕೂಡಿ ಸಾಧಿಸಿ। ಶಾಂತಿ ಮಂತ್ರ ಶಾಂತಿ ಸ್ಮರಣೆ ಶಾಂತಿ ದಳಗಳಿಂದಲೆ ಜಗದಿ ಶಾಂತಿ ನೆಲೆಸಲಿ॥2ಸಾರಿ॥

ಮೇರೆ ರಂಗ ದೇ ಬಸಂತೀ ಚೋಲಾ (ಹಿಂದಿ – ಕವಾಲಿ)

ಮೇರೆ ರಂಗ ದೇ ಬಸಂತೀ ಚೋಲಾ॥ಪ॥ ಜಿಸ್ ರಂಗ ಮೇ ರಾಣಾಪ್ರತಾಪನೇ ಮಾಂ ಕಾ ಬಂಧನ ಖೋಲಾ। ಜಿಸ ರಂಗ ಮೇ ರಂಗ ವೀರ ಶಿವಾಜೀ ಜನನೀ ಜಯ ಜಯ ಬೋಲಾ॥1॥ ಜಿಸ ರಂಗ ಮೇ ರಂಗ ಛತ್ರಸಾಲ ನೇ ಘರ ಕಾ ಸಬ ಸುಖ ಛೋಡಾ। ವನ ವನ ಮಾರಾ ಫಿರತಾ ಥಾ ದಿಲ ಮೇ ಲಿಯೇ ಫಫೋಲಾ॥2॥ ಸೌ ಸೌ ಮೊಗಲೋಂ ಕೋ ಖದೇಡತಾ ವಹ ಬಲವೀರ ಅಕೇಲಾ। ಯವನೋಂ ಪರ ವಹ ತೇಜ ಕಟಾರೀ ಬರಸಾತೀ ಥೀ ಶೋಲಾ॥3॥

ಯಾವ ನೆಲದ ಗಂಧಗಾಳಿ ರಾಗ: ಯಮನ್

ಯಾವ ನೆಲದ ಗಂಧಗಾಳಿ ಮಣ್ಣ ಕಂಪು ತೀಡಿತೋ। ಯಾವ ಧರೆಗೆ ವರ್ಷಧಾರೆ ಫಲಿಸಿ ಚಿಗುರು ತಂದಿತೋ। ಅದೇ ಎನ್ನ ಜನ್ಮಭೂಮಿ ಅದೇ ಎನ್ನ ಪುಣ್ಯಭೂಮಿ॥ಪ॥ ಬಾನಿನಿಂದ ಇಳಿದ ಗಂಗೆ ಯಾವ ನೆಲದಿ ಹರಿದಳೋ। ತೇಗ ಗಂಧ ತರುಗಳೆಲ್ಲ ಯಾವ ಬನದಿ ಅರಳಿತೋ। ಹಿಮದ ಗಿರಿಯ ಧವಳ ಮಾಲೆ ಯಾರ ಕೊರಳು ಬಳಸಿತೋ॥1॥ ಋಷಿಯ ಕೊನೆಯು ಶ್ರುತಿಯು ಆಗಿ ಎಲ್ಲಿ ಬೆಳಕು ಹೊಮ್ಮಿತೋ। ಉಷೆಯು ಉದಿಸಿ ಬಂದ ಹಾಗೆ ಎಲ್ಲಿ ಹೊಸತು

ಮೂಡಿತೋ। ಭಿನ್ನ ಭಿನ್ನ ಹೃದಯದಲ್ಲೇ ಏಕಸೂತ್ರ ಜನಿಸಿತೋ॥2॥ ದಾಸ ಶರಣರಾದಿಯಾಗಿ ಪಂಥರಾಗಿ ಸಂದರೋ। ರಾಮಕೃಷ್ಣ ಬುದ್ಧ ಸಿದ್ಧ ಮಹಿಮರಾಗಿ ಬೆಳೆದರೋ। ಗೀತೆಯ ನುಡಿ ಬದುಕಿನಲ್ಲಿ ಏಕ ಮಂತ್ರ ಮೂಡಿತೋ॥3॥

ಯಾವ ಸೌಭಾಗ್ಯ ಸಮ **ರಾಗ: ಹಂಸನಾದ**

ಯಾವ ಸೌಭಾಗ್ಯ ಸಮ ಈ ಚೆಲುವಿಗೆ। ಪ್ರೀತಿ ಚಿಮ್ಮುವ ತಾಯ ಮೊಗದ ಸಿರಿಗೇ॥ಪ॥ ಸಾಲು ಹಿಮಗಿರಿ ಇವಳ ಹೆಮ್ಮೆಯ ಮುಡಿ। ಸಾಗರವೆ ಬಿದ್ದಿಹುದು ಕಾಲಿನ ಅಡಿ। ಹಣೆಯಲ್ಲಿ ಮುಗಿಲ ಮುಂಗುರುಳ ಧಾಳಿ। ಉಸಿರಾಡುವಳು ಮರುಗ ಮಲ್ಲಿಗೆಯಲಿ॥1॥ ಉದಯರವಿ ಹಣೆಗಿಟ್ಟ ಭಾಗ್ಯಬಿಂಬ। ಆಗಸದ ಕಪ್ಪು ಜಡೆ ಬೆನ್ನತುಂಬ। ಸಾಲು ತೇಲುವ ಹಸಿರು ಗಿರಿಯ ಮಾಲೆ। ಸರವಾಗಿ ಹೊಳೆಯುತಿದೆ ಎದೆಯ ಮೇಲೆ॥2॥ ರಾಮಕೃಷ್ಣರು ಇವಳ ಧೀರಭಾವ। ವ್ಯಾಸ ಶುಕ ವಾಲ್ಮೀಕಿ ಜ್ಞಾನದಾಹ। ಇವಳ ಸಹನೆಗೆ ಹೆಸರು ಸೀತೆಯೆಂದು। ಪ್ರೀತಿಕ್ಷಮೆ ಕರುಣೆಯೇ ನೀತಿ ಎಂದು॥3॥

ಯಾವರಾಜ್ಯದಲ್ಲಿ ನಾನು ಜೀವಿಸಿದ್ದರೇನು **ರಾಗ: ಸೌಖ್ಯದಾಯಿನಿ**

ಯಾವರಾಜ್ಯದಲ್ಲಿ ನಾನು ಜೀವಿಸಿದ್ದರೇನು? ಭಾರತಾಂಬೆ ನನ್ನ ತಾಯಿ ಭಾರತೀಯ ನಾನು (2ಸಾರಿ) ॥ಪ॥ ಯಾವ ಭಾಷೆಯನ್ನು ನಾನು ಆಡುತ್ತಿದ್ದರೇನು? ಭಾರತಾಂಬೆ ನನ್ನ ತಾಯಿ, ಭಾರತೀಯ ನಾನು (2ಸಾರಿ)॥1॥ ಯಾವ ಧರ್ಮವನ್ನು ನಾನು ನಂಬಿ ನಡೆದರೇನು? ಭಾರತಾಂಬೆ ನನ್ನ ತಾಯಿ, ಭಾರತೀಯ ನಾನು (2ಸಾರಿ) ॥2॥ ಧನಿಕನೇನು, ಬಡವನೇನು, ಸುಖಿಯು ದುಃಖಿಯು ಏನು? ಭಾರತಾಂಬೆ ನನ್ನ ತಾಯಿ, ಭಾರತೀಯ ನಾನು (2ಸಾರಿ)॥3॥

ರಾಷ್ಟ್ರ ಭಕ್ತಿ ಲೇ ಹೃದಯ ಮೇ (ಹಿಂದಿ) **ರಾಗ: ಕಾನಡ**

ರಾಷ್ಟ್ರ ಭಕ್ತಿ ಲೇ ಹೃದಯ ಮೇ ಹೋ ಖಡಾ ಯದಿ ದೇಶ ಸಾರಾ। ಸಂಕಟೋಂ ಕೋ ಪಾರ್ ಕರ ಯಹ ರಾಷ್ಟ್ರ ವಿಜಯೀ ಹೋ ಹಮಾರಾ॥ಪ॥ ಕ್ಯಾ ಕಭೀ ಕಿಸೀನೇ ಸುನಾ ಹೈ ಸೂರ್ಯ ಛಿಪತಾ ತಿಮಿರ ಭಯಸೇ ಕ್ಯಾ ಕಭೀ ಸರಿತಾ ರುಕೀ ಹೈ ಬಾಂಧ ಸೇ ವನ ಪರ್ವತೋಂ ಸೇ। ಜೋ ನ ರುಕತೇ ಮಾರ್ಗ ಚಲತೇ ಚೀರ ಕರ ಸಬ ಸಂಕಟೋಂ ಕೋ। ವರಣ ಕರತೀ ಕೀರ್ತಿ ಉನಕಾ ಚೋಡ ಕರ ಸಬ ಅಸುರ ದಲ ಕೋ। ಧ್ಯೇಯ ಮಂದಿರ ಕೇ ಪಥಿಕ ಕೋ ಕಂಟಕೋಂ ಕ ಹೀ ಹೈ ಸಹಾರಾ॥1॥ ಹಮನ ರುಕನೇ ಕೋ ಚಲೇ ಹೈ ಸೂರ್ಯ ಕೇ ಯದಿ ಪುತ್ರ ಹೈ ತೋ ಹಮ ನ ಹಟನೇ ಕೋ ಚಲೇ ಹೈ ಸರಿತ ಕೀ ಯದಿ ಪ್ರೇರಣಾ ತೋ। ಚರಣ ಅಂಗದ ನೇ ರಖಾ ಹೈ ಆ ಇಸೇ ಕೋಯೀ ಉಠಾಯೇ। ದಹಕತಾ ಜ್ವಾಲಾಮುಖೀ ಯಹ ಆ ಇಸೇ ಕೋಯೀ ಬುಝಾಯೇ। ಮೃತ್ಯು ಕೀ ಪೀಕರ ಸುಧಾ ಹಮ ಚಲ ಪಡೇಂಗೇ ಲೇ ದುಧಾರಾ॥2॥ ಜ್ಞಾನ ಕೇ ವಿಜ್ಞಾನ ಕೇ ಭೀ ಕ್ಷೇತ್ರ ಮೇ ಹಮ ಬಢ ಚಲೇಂಗೇ। ನೀಲ ನಭ ಕೇ ರೂಪ ಕೇ ನವ ಅರ್ಥ ಭೀ ಹಮ ಕರ ಸಕೇಂಗೇ। ಭೋಗ ಕೇ ವಾತಾವರಣ ಮೇ ತ್ಯಾಗ ಕಾ ಸಂದೇಶ ದೇಂಗೇ। ದಾಸ್ಯ ಕೇ ಘನ ಬಾದಲೋಂ ಸೇ ಸೌಖ್ಯ ಕೀ ವರ್ಷಾ ಕರೇಂಗೇ। ಸ್ವಪ್ನ ಯಹ ಸಾಕಾರ ಕರನೇ ಸಂಘಟಿತ ಹೋ ಹಿಂದು ಸಾರಾ॥3॥

ರಾಷ್ಟ್ರಭಕ್ತಿ ಅರಳುತಿಹುದು **ರಾಗ: ಬೃಂದಾವನಸಾರಂಗ**

ರಾಷ್ಟ್ರಭಕ್ತಿ ಅರಳುತಿಹುದು ಸ್ವಾಭಿಮಾನ ಕೆರಳುತಿಹುದು। ಶತ್ರುಗಳೇ ಮೇರೆ ಮೀರಿ ಬಂದರೆಚ್ಚರ। ನೀಡುವೆವು ಶತಕಗಳ ಸೋಲಿಗುತ್ತರ॥ಪ॥ ಒಡೆವ ನೀತಿ ಬಡಿವ ಭೀತಿಗೆಂದೂ ತಲೆಯ ಬಾಗೆವು। ತಡೆದು ಅರಿಯ ಪಡೆಯ ಹೆಡೆಯ ಮೆಟ್ಟಿ ಮುಂದೆ ಸಾಗ್ವೆವು। ನಡೆಯು ನಮದು ನೇರ, ನುಡಿಯು ಗಂಭೀರ॥1॥ ನಮ್ಮ ಗಡಿಯ ಕಡಲ ತಡಿಯ ಗುಡಿಯ ನುಡಿಯ ರಕ್ಷಣೆ। ಅದುವೆ ನಮ್ಮ ಬಾಳಗುರಿಯು ಇಲ್ಲ ಪರಾಕರ್ಷಣೆ। ಹಿಂದು ಪರಮ ವೀರ ಅವನ ಬಲ ಅಪಾರ॥2॥ ಶುದ್ಧ ಹೃದಯ ಸ್ನೇಹವೆಮದು ಮುಗ್ಧನಾದ ಗೆಳೆಯಗೆ। ಸಿದ್ಧರಿಹೆವು ಯುದ್ಧಗಳಿಗೆ ಬದ್ಧರಯ್ಯ ಗೆಲುವಿಗೆ। ಕಾದಿ ರಣದಿ ಘೋರ, ಹರಿಸಿ ರಕ್ತಧಾರ॥3॥ ಪಂಚನದಿಯ ಪುಣ್ಯತಟದಿ ಹೂಡಿ ಕುಟಿಲ ಸಂಚನು। ಒಡೆದು ನಾಡಿನೈಕ್ಯಮತ್ಯ ಹಾಕುತಿಹರು ಹೊಂಚನು। ಖೂಳರಿಪು ಸಂಹಾರ, ಗೈಯಲಿಂದು ಬಾರ॥4॥

ವಿಶ್ವ ಸಂತತಿಯೆಲ್ಲಾ **ರಾಗ: ತಿಲಂಗ್**

ವಿಶ್ವ ಸಂತತಿಯೆಲ್ಲಾ ನಿನ್ನ ಪುಣ್ಯೋದರದ। ಹಸುಗೂಸುಗಳು ಎಂದು ಹಾಲುಣಿಸಿದೆ। ಒಂದೆ ತೊಟ್ಟಿಲೊಳಿಟ್ಟು ತೂಗಿ ಶೋಭನವಾಗಿ। ಪ್ರೇಮ ಸಂಗೀತದೊಳು ಮೈ ಮರೆಸಿದೆ॥ಪ॥ ಸೂರ್ಯಚಂದ್ರರಿಗೆಲ್ಲ ಪ್ರಭೆಯಿನಿತು ಇರಲಿಲ್ಲ। ನಿನ್ನ ಕೀರ್ತಿಯ ಜ್ಯೋತಿ ಪ್ರಜ್ವಲಿಸಿತು। ಮೇಘಮಂಡಲವೇರಿ ವಿಜಯ ವೀರಧ್ವಜವು ಸ್ವಾತಂತ್ರ್ಯ ಸಂಭ್ರಮದಿ ಸಂಚರಿಸಿತು॥1॥ ಅವಮಾನಗಳನಿಂತು ಶತಮಾನ ಸಹಿಸಿರಲು। ಶಕ್ತಿ ಭೈರವಿ ಜನನಿ ತಾಳ್ಮೆಯುಂಟೆ? ಕ್ಷಮೆಯ ಮೀರದೆ ನೋಡು ಶಕ್ತಿಪುತ್ರರು ನಾವು। ಹರಸಿಬಿಡು ತೆರಳುವೆವು ತಡೆವರುಂಟೆ?॥2॥ ಒಮ್ಮತದ ಏಕಪಂಥವ ಹಿಡಿದು ಸಾಗುವೆವು। ಕ್ಷಮಿಸಮ್ಮ ಸೋದರರು ಬಡಿದಾಡೆವು॥ ಹೊಸ ಜಗದ ನಿರ್ಮಾಣದೀ ಸಂಧಿಕಾಲದಲಿ। ನಿನ್ನ ಘನತೆಗೆ ಕೊರತೆಯಾಗಬಿಡೆವು॥3॥ ಹಸಿರುಡಿಗೆ ಪಸೆದುಟ್ಟು ಸಿರಿಮುಡಿಗೆ ಹೂತೊಟ್ಟು। ಭುವನೇಶ್ವರಿಯೇ, ನೀನು ಮೆರೆಯಬೇಕು। ಶುಭದಿನದಿ ಹೊಸಬೆಳಕ ಆನಂದ ಶೋಭೆಯಲಿನಿನ್ನ ಶ್ರೀಮುಖ ಒಮ್ಮೆ ನೋಡಬೇಕು॥4॥

ವಿಶ್ವದ ನಾನಾ ದೇಶವ **ರಾಗ: ಶಿವರಂಜನಿ**

ವಿಶ್ವದ ನಾನಾ ದೇಶವ ಮೀರಿಪ ಚೆಲುವನು ಹೊಂದಿದ ಹಿಂದೂಸ್ಥಾನ್। ನವಿಲಿನ ಪರಿಯಿಹ ಹಿಂದೂ ಜನರಿಗೆ ಪುಷ್ಪಕ ವನವಿದು ಹಿಂದೂಸ್ಥಾನ್॥ಅ.ಪ॥ ಗಿರಿಗಳ ಗಡಣವನೆಲ್ಲವ ಮೀರಿಸಿ ಎಮ್ಮನು ಕಾಯುವ ಹಿಮಗಿರಿಯು। ಬಾನಿನನೆರೆಯವಳಾಗಿಯೆ ಮೆರೆಯುವ ದೇಶವು ನಮ್ಮದು ಹಿಂದೂ ಸ್ಥಾನ್॥1॥ ಪರದೇಶದ ಜನ ಮೋಹಿಪ ತೆರದಲಿ ನಾಡಲಿ ಹಸುರನು ಪಸರಿಸಿಹ। ನದಿಗಳ ತೊಡೆಯಲಿ ಆಡಿಸಿ ಹರಸುವ ದೇಶವು ನಮ್ಮದು ಹಿಂದೂಸ್ಥಾನ್॥2॥ ಒಬ್ಬರಲ್ಲೊಬ್ಬರು ದ್ವೇಷಾಸೂಯೆಯ। ಗೈಯದೆ ಬಾಳಿರಿ ಎನ್ನುತಲೀ। ಎಲ್ಲರೊಳು ಪ್ರೇಮವ ಸಾರುವ। ಧರ್ಮವ ಹೊಂದಿದ ಹಿಂದೂಸ್ಥಾನ್॥3॥ ಹಿಂದೂ ಜನಗಳು ನಾವಿಹೆವು ಹಿಂದೂಸ್ಥಾನವು ನಮ್ಮದೆಲೇ॥4॥

ವೇಷ ಬೇರೆ ಭಾಷೆ ಬೇರೆ **ರಾಗ: ಸಿಂಧುಭೈರವಿ**

ವೇಷ ಬೇರೆ ಭಾಷೆ ಬೇರೆ ದೇಶವೊಂದೆ ಭಾರತ। ಒಂದೆ ತಾಯ ಮಕ್ಕಳೆಂದು ಘೋಷಿಸೋಣ ಸಂತತ॥ಪ॥ ತೀರ್ಥನಗೆಯ ಕ್ಷೇತ್ರವಿದೋ ಭವ್ಯ ನಾಡು ಭಾರತ। ಋಷಿಗಳುಸಿರ ಹರಕೆ ಹೊತ್ತ ದಿವ್ಯನಾಡು ಭಾರತ। ಕಡಲುಗಳನೆ ಉಡುಗೆಯುಟ್ಟು॥1॥ ಘಟ್ಟದೋಳು ಬಳೆಯ ತೊಟ್ಟು ನದಿನದಗಳ ಹಾರವಿಟ್ಟು। ಸೇತುವಿಂದ ಸಿಂಧುವರೆಗು ಬೆಳೆದು ನಿಂತ ಭಾರತ। ಭಂಗಗೊಳದ ವಂಗನಾಡ ಕೂಡಿ ಮೆರೆದಭಾರತ। ಇದೇ ನಮ್ಮ ಭಾರತ ಪುಣ್ಯ ಭೂಮಿ ಭಾರತ॥2॥ ಭರತಖಂಡದಿಂದಲೇನೆ ನಿನಗೆ ಮೋಕ್ಷಪ್ರಾಪ್ತಿ। ತಪ್ಪಿ ನುಡಿದೆಯೆಂದರಹುದು ನಿನಗೆ ತಕ್ಕ ಶಾಸ್ತಿ। ಯಾವ ದೇಶದಲ್ಲೆ ದುಡಿ। ಯಾವ ಮಣ್ಣಿನಲ್ಲೆ ಮಡಿ। ನಿಂತ ನೆಲವು ಹಿಡಿದ ಹುಡಿ॥3॥ ಭರತ ಭೂಮಿಯೆಂದು ತಿಳಿ। ಮಣ್ಣ ಮೋಹ ಬಿಟ್ಟರಿಲ್ಲೊ ನಿನಗೆ ಬೇರೆ ಸದ್ಗತಿ। ಬರಿಯ ಮಾತಿನಲ್ಲೆ ಮುಗಿವುದಲ್ಲೊ ನಿನ್ನ ಸಂಸ್ಕೃತಿ। ಮಾನವತೆಯ ಶುಚಿಮತಿ। ಸನಾತನದ ಸತ್ಕೃತಿ॥4॥

ಶಕ್ತಿ ಸ್ವರೂಪಿಣಿ ಭಾರತ **ರಾಗ: ಸೌಖ್ಯದಾಯಿನಿ**

ಶಕ್ತಿ ಸ್ವರೂಪಿಣಿ ಭಾರತ ಮಾತೆಯ ದುರ್ಜಯ ಪುನರವತಾರ। ಮೂಡುತ್ತಿದೆ ಭಾರತದಲ್ಲೆಲ್ಲೆಡೆ ನವಚೈತನ್ಯದ ಸಂಚಾರ॥ಪ॥ ಮಕ್ಕಳ ಮೈ ಮರೆವಿನ ಯುಗ ಕಳೆದಿದೆ ಅಳಿದಿದೆ ಅಳುಕಿನ ತಿಮಿರ ಏಕಾತ್ಮತೆಯರುಣಪ್ರಭೆ ಮೂಡಿದೆ ಅಡಗಿದೆ ಒಡಕಿನ ಕುಹಕ। ಶತ್ರುವಿನಾಶದ ಆಶ್ವಾಸನೆಯಿದೆ। ಜಗಕಿದೆ ಶಾಂತಿಯ ಶಪಥ। ವಿಜಯದ ಘಳಿಗೆಯಿದೋ ಸಮೀಪಿಸಿದೆ ಮುನ್ನುಗ್ಗಿದೆ ಯುವ ಪಥಿಕ॥1॥ ಸಾವಿಲ್ಲದ ನಾಡಿನ ಸುತರೆದ್ದರು ಯಜ್ಞದ ಸಿದ್ಧತೆಗೆ ಹಿಂದುತ್ವದಮರ ಗಂಗೆಯು ಹರಿದಿದೆ ಸೃಷ್ಟಿಯ ಏಳಿಗೆಗೆ॥ ಯುಗಯುಗಗಳ ಇತಿಹಾಸದ ವಿಜಯದ ವೈಭವ ಶಿಖರಕ್ಕೆ ನವ ಇತಿಹಾಸದ ಧ್ವಜವನೇರಿಸುವ ಉತ್ಸಾಹದ ರಭಸಕ್ಕೆ॥2॥ ಜಡವಾದ ಮೌಢ್ಯದ ಕ್ರೌರ್ಯದ ಸಂಚಿನ ಕಂತೆಗೆ ಕೊನೆ ಹೇಳಿ। ತ್ಯಾಗ

ಶೀಲ ವಿಶ್ವಾಸದ ಶ್ರದ್ಧೆಯ ಕಹಳೆಯಿದೋ ಕೇಳಿ। ಹಿಂದುರಾಷ್ಟ್ರದ ಹೊಸ ಮುಂಜಾವಿನ ಮಂಗಳ ಕ್ಷಣ ಬಂದಿದೆ ಏಳಿ। ಜಗದೆಲ್ಲೆಡೆಯು ಜಡತೆಯು ತೊಡೆಯುವ ದಾಯಿತ್ವಕೆ ಮೈ ತಾಳಿ॥3॥

ಶುಭಸುಖ ಚೈನಕಾ ಬರಖಾ (ಐ.ಎನ್.ಎ.-ರಾಷ್ಟ್ರಗೀತೆ) (ಹಿಂದಿ)

ಶುಭಸುಖ ಚೈನಕಾ ಬರಖಾ ಬರಸೇ ಭಾರತ ಭಾಗ ಹೈ ಜಾಗಾ। ಪಂಜಾಬ ಸಿಂಧು ಗುಜರಾತ ಮರಾಠಾ ದ್ರಾವಿಡ ಉತ್ಕಲ ವಂಗಾ। ಚಂಚಲ ಸಾಗರ ವಿಂಧ್ಯ ಹಿಮಾಚಲ ನೀಲಾ ಜಮುನಾ ಗಂಗಾ। ತೇರೇ ನಿತ ಗುಣ ಗಾಯೇ। ತುಝಸೇ ಜೀವನ ಪಾಯೇ ಸಬತನ ಪಾಯೇ ಆಶಾ। ಸೂರಜ ಬನಕರ ಜಗ ಪರ ಚಮಕೇ ಭಾರತ ನಾಮ ಶುಭಾಗಾ... ಜಯಹೋ.... ಜಯಹೋ.... ಜಯಹೋ... ಜಯ ಜಯ ಜಯ ಜಯಹೋ। ಭಾರತ ನಾಮ ಶುಭಾಗಾ॥1॥ ಸಬಕೇ ದಿಲಮೇ ಪ್ರೀತ ಬಸಾಯೇ ತೇರೀ ಮೀಠೀ ವಾಣೀ। ಹರ್ ಸೂಬೇಕೇ ರಹನೇ ವಾಲೇ ಹರ ಮಜಹಬ್ ಕಿ ಪ್ರಾಣೀ। ಸಬ ಭೇದ ಓಫರಕ ಮಿಟಾಕೇ ಸಬ ಗೋದಮೇ ತೇರೀ ಆಕೇ। ಗೂಂಥೇ ಪ್ರೇಮಕಿ ಮಾಲಾ। ಸೂರಜ ಬನಕರ ಜಗ ಪರ ಚಮಕೇ ಭಾರತ ನಾಮ ಶುಭಾಗಾ। ಜಯಹೋ... ಜಯಹೋ... ಜಯಹೋ... ಜಯ ಜಯ ಜಯ ಜಯಹೋ। ಭಾರತ ನಾಮ ಶುಭಾಗಾ॥2॥ ಸುಬಹ್ ಸಬೇರೇ ಪಂಖ ಪಂಖೇರು ತೇರೇ ಹೀ ಗುಣ ಗಾಯೇ। ಬಾಸ ಭರೀ ಭರಪೂರ ಹವ ಆಯೇ ಜೀವನಮೇ ಋತು ಲಾಯೇ। ಸಬ ಮಿಲಕರ ಹಿಂದ ಪುಕಾರೇ, ಜಯ ಆಜಾದ ಹಿಂದಕೇ ನಾರೇ। ಪ್ಯಾರಾ ದೇಶ ಹಮಾರಾ। ಸೂರಜ ಬನಕರ ಜಗ ಪರ ಚಮಕೇ ಭಾರತ ನಾಮ ಶುಭಾಗಾ। ಜಯಹೋ... ಜಯಹೋ... ಜಯಹೋ... ಜಯ ಜಯ ಜಯ ಜಯಹೋ। ಭಾರತ ನಾಮ ಶುಭಾಗಾ॥3॥

ಸಬಸೆ ಸುಂದರ ದೇಶ್ (ಹಿಂದಿ) ರಾಗ: ಅಭೇರಿ

ಸಬಸೆ ಸುಂದರ ದೇಶ್ ಹಮಾರಾ। ಪ್ರಾಣೋಂಸೆ ಹೈ ಹಮಕೋ ಪ್ಯಾರಾ. ಸಾರೆ ಜಗಸೆ ನ್ಯಾರಾ ನ್ಯಾರಾ। ಹಮ್ ಸಬಕಾ ಹೈ ರಾಜ್ ದುಲ್ಹಾರ॥ಪ॥ ಗೇಹೂ ಚಾವಲ್ ಫೂಲ್ ಫಲೋಂಸೆ। ಬಢಿಯಾ ಖಾನಾ ಹಮೆ ಖಿಲಾತಾ। ಗಂಗಾಯಮುನಾ ಕಾವೇರಿ ಸೆ। ಪ್ಯಾಸ್ ಹಮಾರೀ ಸದಾ ಬುಝಾತಾ॥1॥ ಅಚ್ಛೀ ಬಾತೇಂ ಹಮೇ ಬತಾತಾ। ಸಚ್ಚೀ ರಾಹೇ ಹಮೇ ದಿಖಾತಾ। ದೇಶ ಪ್ರೇಮ ಕಾ ಪಾಠ್ ಪಢಾತಾ। ಸಭೀ ಬುರಾಯೀ ದೂರ್ ಭಗಾತಾ॥2॥ ಲಕ್ಷ್ಯ ಹಮಾರಾ ರಕ್ಷಾ ಇಸ್‌ಕೀ। ಸದಾ ಕರೇಂಗೆ ಸೇವಾ ಇಸ್‌ಕೀ। ಜಯಜಯ ಜಯ ಜಯ ದೇಶ್ ಹಮಾರಾ। ಅಮರ ರಹೇ ಯಹ್ ಭಾರತ್ ಪ್ಯಾರಾ॥3॥

ಸರಹದ್ದಿನ ಬಹುದೂರದವರೆಗೂ ರಾಗ: ಶುದ್ಧ ಧನ್ಯಾಸಿ

ಸರಹದ್ದಿನ ಬಹುದೂರದವರೆಗೂ। ಸುತ್ತಲು ಶಾಂತಿಯು ಲಭಿಸುವವರೆಗೂ। ನಿದ್ರಿಸದಿರು ವೀರಾ। ತಾಯ್ನಾಡಿನ ಧೀರ॥ಪ॥ ಬಾನಂಚಿನ ಬಹುದೂರದವರೆಗೂ। ಭಾರತ ಮಾತೆಯ ಜಯಭೇರಿ। ತೋರಿದೆ ವಿಶ್ವಕೆ ಹೊಸದಾರಿ। ಶಾಂತಿ ಸತ್ಯವೆ ರಣಭೇರಿ। ಭಾರತ ಯೋಧರೆ ಕೈ ಬೀರಿ॥1॥ ಉತ್ತರ ಗಡಿಯಿಂದಾಚೆಗೆ ದೂರ। ದೂರ ದೂರ ಬಹುದೂರ। ಬೀಸುವವರೆಗೂ ಶಾಂತಿ ಸಮೀರ। ನಿದ್ರಿಸದಿರು ವೀರ, ತಾಯ್ನಡಿನ ಧೀರ॥2॥

ಸಾರೇ ಜಹಾಂಸೆ ಅಚ್ಛಾ (ಉರ್ದು) ರಾಗ: ಹಿಂದುಸ್ತಾನಿ ಕಾಪಿ

ಸಾರೇ ಜಹಾಂಸೆ ಅಚ್ಛಾ ಹಿಂದುಸ್ತಾನ್ ಹಮಾರಾ। ಹಮ್ ಬುಲ್ ಬುಲೇ ಹೈಂ ಇಸ್‌ಕೀ ಯೇ ಗುಲ್‌ಸಿತಾ ಹಮಾರಾ॥ಪ॥ ಪರ್‌ಬತ್ ವೋ ಸಬ್ ಸೇ ಊಂಚಾ ಹಮ್ ಸಾಯಾ ಆಸ್ ಮಾಂಕಾ। ವೋ ಸಂತರೀ ಹಮಾರಾ ವೋ ಪಾಸ್ ಬಾ ಹಮಾರಾ॥1॥ ಗೋದೀಮೆ ಖೇಲ್‌ತೀ ಹೈಂ, ಇಸ್‌ಕೀ ಹಜಾರೋಂ ನದಿಯಾಂ। ಗುಲ್‌ಶನ್ ಹೈ ಜಿನ್‌ಕೇ ದಮ್ ಸೆ, ರಶ್ಕೇ ಜಿನಾ ಹಮಾರಾ॥2॥ ಮಜ್‌ಹಬ್ ನಹೀಂ ಸಿಖಾತಾ। ಆಪಸ್ ಮೆ ಬೈರ್ ರಖನಾ। ಹಿಂದೀ ಹೈಂ ಹಮ್ ವತನ್ ಹೈ ಹಿಂದುಸ್ತಾನ್ ಹಮಾರಾ॥3॥

ಈ ನಮ್ಮ ತಾಯಿನಾಡು (ಮೇಲಿನ ಕೃತಿಯ ಕನ್ನಡಭಾವಾನುವಾದ)

ಈ ನಮ್ಮ ತಾಯಿನಾಡು ನಿರುಪಮ ಲಾವಣ್ಯದ ಬೀಡು। ಈ ವನದಲಿ ನಲಿದಾಡುವಾ ಕೋಗಿಲೆಗಳು ನಾವು॥ಪ॥ ಪರ್ವತಗಳಲ್ಲಿ ಹಿರಿಯ ಆಗಸದ ನೆರೆಯ ಗೆಳೆಯ। ರಕ್ಷೆ ಅವನೆ ನಮಗೆ ಅವನೆ ಮಾರ್ಗದರ್ಶಿ ಗುರಿಗೆ॥1॥ ಈ ತಾಯ ಮಡಿಲಿನಲ್ಲಿ ಸಾಸಿರ ನದಿಗಳೇ ಹರಿಯುವುವು। ಈ ಸುಂದರ ನಂದನಕೆ ಆ ಸ್ವರ್ಗವೇ ಕರುಬುವುದು॥2॥ ಈ ನೆಲದ ಧರ್ಮ ಒಂದು ಕಲಿಸದು ದ್ವೇಷವನೆಂದು। ಭಾರತೀಯರು ನಾವು ನಮ್ಮೀದೇಶ ಭಾರತನಾಡು॥3॥

ಸಾರೇ ಜಗಮೇ ಸಬ್ ಸೇ (ಹಿಂದಿ) — ರಾಗ: ಕಾನಡ

ಸಾರೇ ಜಗಮೇ ಸಬ್ ಸೇ ನಿರಾಲಾ। ಅಪನಾ ಹಿಂದುಸ್ತಾನ್ ರೆ। ಜಗ್‌ನೆ ಪೂಜಾ ವೈಭವ್ ಕೋ, ಹಮನೆ ಪೂಜಾ ಇನ್ಸಾನ್ ಕೋ॥ಪ॥ ಮುಕುಟ ಹಿಮಾಲಯ ಕಾ ಹೈ ಸುಂದರ್ ಪಾಂವ ಪಖಾರ್ ರಹಾ ಸಾಗರ್। ಹೃದಯ ಸಿಂಚತೀ ಪಾವನ ಗಂಗಾ ಛಲಕಾತೀ ಅಮೃತ ಗಾಗರ್। ಹರಪನ್ ಘಟ್ ವೃಂದಾವನ ಛಿಡತೀ ಮಧುರ್ ಮುರಲಿಯಾ ತಾನ್ ರೆ। ಜಗ್‌ನೆ ಪೂಜಾ ವೈಭವ ಕೊ ಹಮನೆ ಪೂಜಾ ಇನ್ಸಾನ್ ರೆ॥1॥ ಹಮ್ ನನ್ಹೆ ಬಚ್ಚೋಂಹೀ ಕಲ್ ಕೆ, ಭಾರತ್ ಕೀ ತಸ್ವೀರ ಹೈಂ। ಪ್ಯಾರ್ ಕರೋ ತೋ ಹಮ್ ಗುಲಾಬ್ ಹೈ ದುಶ್ಮನ್ ಕೋ ಶಂಶೀರ್ ಹೈ। ಹಮೆ ಜಾನ್ ಸೆ ಭೀ ಪ್ಯಾರೀ ಹೈ ಅಪನೆ ವತನ್ ಕೀ ಶಾನ್ ರೆ। ಜಗನೆ ಪೂಜಾ ವೈಭವ ಕೋ ಹಮನೆ ಪೂಜಾ ಇನ್ಸಾನ್ ರೆ॥2॥ ನಯೀ ಬಹಾರ ಆಯೀ ಹೈ ದೇಶ್ ಮೆ ಚಾರೋ ದಿಶಿ ಉಡತೀ ಗಂಧ್ ಹೈ। ಖಲಿಯೋಂ ಕೀ ಮೃದು ಮುಸ್ಕಾನೋಂ ಪರ್ ನಹೀ ಕೋಯಿ ಪ್ರತಿಬಂಧ್ ಹೈ। ಖೇತೋಂ ಖಲಿಹಾನೋಂ ಮೆ ಜಾಗಾ ಶ್ರಮ ಕಾ ಹೀ ಭಗವಾನ್ ರೆ। ಜಗನೆ ಪೂಜಾ ವೈಭವ ಕೋ ಹಮ್ ನೆ ಪೂಜಾ ಇನ್ಸಾನ್ ರೆ॥3॥ ಜಾತೀ ಪಾಂತೀ ಔರ್ ಛುಆ ಛೂತ್ ಕಾ ಹಮ್‌ಕೋ ಧಾಗ ಮಿಟಾನಾ ಹೈ। ಸತ್ಯ ಅಹಿಂಸಾ ಸೆ ಹಿಂಸಾ ನಫರತ್ ಕಾ ಶೀಶ ಝುಕಾನಾ ಹೈ। ಕೋಟಿ ಕೋಟಿ ಕಂಠೋಂಸೆ ಗೂಂಜೆ, ದೇಶ್ ಪ್ರೇಮ ಕೆ ಗಾನ್ ರೆ। ಜಗ್‌ನೆ ಪೂಜಾ ವೈಭವ್ ಕೋ, ಹಮನೆ ಪೂಜಾ ಇನ್ಸಾನ್ ರೆ॥4॥

ಸಾವಿರ ಬಗೆಯಲಿ ಸಾಗುತಿದೆ — ರಾಗ: ದುರ್ಗ

ಸಾವಿರ ಬಗೆಯಲಿ ಸಾಗುತಿದೆ। ಸ್ವಾತಂತ್ರ್ಯದ ಲಾಸ್ಯ। ಬಾನೂ ಭೂಮಿಯು ಬರೆಯುತಿದೆ। ಸಿರಿಬೆಳಕಿನ ಭಾಷ್ಯ॥ಪ॥ ಒಣಗಿದ ಮರದಲಿ ಸಾಗುವ ಚೈತ್ರನ ಚಿಗುರಿನ ಧಾಳಿಯಲಿ। ಮುಗಿಲ ಬಾಗಿಲ ಸರಿಸಿ ಸುರಿಯುವ ನಿರ್ಮಲ ಧಾರೆಯಲಿ। ಕಾಷ್ಟದ ಸೆರೆಯಲ್ಲಿ ಕುದಿಯುತ ಮರೆಯಲ್ಲಿ। ಭಗ್ಗನೆ ಬಂಧನ ಬೇಧಿಸುವ ಕೆರಳಿದ ಜ್ವಾಲೆಯಲಿ॥1॥ ಬೆಳಗು ಬಾನಿನಲಿ ಹೊನ್ನಿನ ಬಿಂಬ ಹಚ್ಚಿದ ಸಿರಿಹಣತೆ। ಹಕ್ಕಿದನಿಗಳೇ ದಿಕ್ಕಿನ ತುಂಬ ದನಿಯೊಡೆದಿದೆ ಕವಿತೆ। ಅರಳಿದ ಸುಮಸರಣಿ ಪರಿಮಳದಾ ಭರಣಿ। ವಾಯುಮಂಡಲವೆ ಘಮಘಮಿಸಿ ಕಂಪಾಗಿದೆ ಧರಣಿ॥2॥

ಸೇವೆಯ ಸೇತುವೆ ಕಟ್ಟಲು ಬನ್ನಿ — ರಾಗ: ಸಿಂಧುಭೈರವಿ

ಸೇವೆಯ ಸೇತುವೆ ಕಟ್ಟಲು ಬನ್ನಿ। ವ್ಯಕ್ತಿ ಸಮಾಜದ ನಡುವೆ। ನಾಡ ದೇವತೆಗೆ ಅರ್ಪಿಸಬನ್ನಿ ತನುಮನಧನಗಳ ಒಡವೆ॥ಪ॥ ಸೇವೆಯೆ ತತ್ವದ ಸಾರವು ನಿಜದಿ ಸೇವೆಯೆ ಜೀವನ ಧರ್ಮ। ಸ್ವಾರ್ಥ ದುರಾಶೆಯ ನೀಗಿಸಿ ಬಾಳನು ಸಾರ್ಥಕಗೊಳಿಸುವ ಮರ್ಮ। ಕಂಗೆಡಿಸುವ ಕಗ್ಗತ್ತಲಕೂಪದಿ ಸೇವೆಯೆ ದಾರಿದೀಪ। ದುಃಖಿತ ಜನತೆಯ ಕಂಬನಿಯೊರೆಸುವ ಕರುಣೆಯೇ ಮಾತೃಸ್ವರೂಪ॥1॥ ಅಕ್ಷರವಿದ್ಯೆಯ ಕಲಿಸಿ ನಿರಕ್ಷರಕುಕ್ಷಿಗಳಿಗೆ ಒಲವಿಂದ। ಅಕ್ಷಯ ರಕ್ಷಣೆ ನೀಡುತ ಶೋಷಿತ ಜನತೆಗೆ ಛಲಬಲದಿಂದ। ಕಾರ್ಪಣ್ಯದ ಘಟಸರ್ಪದ ದರ್ಪವ ಮುರಿಯಲು ಸೇವೆಯೆ ಮಾರ್ಗ। ತ್ಯಾಗ ಸಮರ್ಪಣ ಭಾವದಿ ದುಡಿದರೆ ಧರೆಯಿದು ಆಗದೆ ಸ್ವರ್ಗ?॥2॥ ಮನೆ ಮನೆಯಾಗಲಿ ಸೇವಾಧಾಮ ಚಿರವಾತ್ಸಲ್ಯದ ಸೆಲೆಯು। ನೋವಲಿ ನರಳಿಹ ಹತಭಾಗ್ಯರಿಗೆ ನಲಿವನು ನೀಡುವ ನೆಲೆಯು। ಅಸ್ಪೃಶ್ಯತೆ ಅನ್ಯಾಯವನಳಿಸಲು ಗೈಯುವ ದೃಢಸಂಕಲ್ಪ। ಭಾರತಮಾತೆಯ ಆರಾಧನೆಗೆ ಅರ್ಪಿಸಿ ಜೀವನ ಪುಷ್ಪ॥3॥

ಸೇವೆಯೆಂಬ ಯಜ್ಞದಲ್ಲಿ **ರಾಗ: ಸಿಂಧುಭೈರವಿ**

ಸೇವೆಯೆಂಬ ಯಜ್ಞದಲ್ಲಿ ಸಮಿಧೆಯಂತೆ ಉರಿಯುವಾ। ಧ್ಯೇಯ ಮಹಾಜಲಧಿಯೆಡೆಗೆ ಸಲಿಲವಾಗಿ ಹರಿಯುವಾ। ಲೋಕಹಿತದ ಕಾಯಕ ನಾಡಿಗಭಯದಾಯಕ। ವ್ಯಕ್ತಿ ವ್ಯಕ್ತಿಯಾಗಲಿಂದು ನೈಜ ರಾಷ್ಟ್ರಸೇವಕ॥ಪ॥ ಉಚ್ಚ ನೀಚ ಭೇದವ ಅಳಿಸಿ ದೂರಗೊಳಿಸುವಾ। ರೊಚ್ಚು ರೋಷ ನೀಗುತಾ ಬಂಧು ಭಾವ ಬೆಳೆಸುವಾ। ಹಚ್ಚಿ ಜ್ಞಾನದೀವಿಗೆ ಸುತ್ತ ಬೆಳಕ ಬೀರುವಾ। ಕೆಚ್ಚಿನಿಂದ ಮುಂದೆ ಸಾಗಿ ಭರದಿ ಗುರಿಯ ಸೇರುವಾ॥1॥ ಎಲೆಯ ಮರೆಯೊಳರಳಿ ನಗುವ ಸುಮನರಾಶಿಯಂದದಿ। ಕಡಲ ಒಡಲೊಳುಕ್ಕಿ ಮೊರೆವಕೋಟಿ ಅಲೆಗಳಂದದಿ। ವಿಮುಖರಾಗಿ ಖ್ಯಾತಿಗೆ ಪ್ರಚಾರಕೆ ಪ್ರಶಂಸೆಗೆ। ಸಹಜಭಾವದಿಂದ ಧುಮುಕಿ ಬನ್ನಿ ಕಾರ್ಯಕ್ಷೇತ್ರಕೆ॥2॥ ದೀನ ದಲಿತ ಸೇವೆಯೇ ಪರಮ ಆರಾಧನೆ। ಸಾಕು ಬರಿಯ ಬೋಧನೆ ಬೇಕು ಹಿರಿಯ ಸಾಧನೆ। ದಿಟದಿ ನಾವು ಅಳಿಸಬೇಕು ನುಡಿಯ ನಡೆಯ ಅಂತರ। ರಚಿಸಬೇಕು ನವಸಮಾಜ ಸರ್ವಾಂಗ ಸುಂದರ॥3॥

ಹಸಿರು ನೆಲದ ಪುಣ್ಯಭೂಮಿ **ರಾಗ: ಶಂಕರಾಭರಣ–ನೋಟ್**

ಹಸಿರು ನೆಲದ ಪುಣ್ಯಭೂಮಿ ನಮ್ಮ ದೇಶ ಭಾರತವಿದು। ಚಂದದ ದೇಶವು ಇದೆಂಥ ಸ್ವರ್ಣ ದೇಶವು॥ಪ॥ ಜೀವವನ್ನು ಬಲಿ ಇತ್ತ ನಮ್ಮ ಹಿರಿಯರು। ಸ್ವಾತಂತ್ರ್ಯದ ಧ್ವಜವನ್ನು ಎತ್ತಿ ಹಿಡಿದರು। ತ್ರಿವರ್ಣ ಧ್ವಜವ ಹಿಡಿದರು॥1॥ ಗಾಂಧಿ ನೆಹರು ಶಾಸ್ತ್ರಿಗಳಂಥಹ ಲೋಕನಾಯಕರ। ಝಾನ್ಸಿರಾಣಿ ಚೆನ್ನಮ್ಮನಂತ ವೀರರಮಣಿಯರ। ಪಡೆದ ಪುಣ್ಯ ಭೂಮಿಯು॥2॥ ದೇಶಕ್ಕಾಗಿ ಪ್ರಾಣತೆತ್ತ ನಮ್ಮ ಹಿರಿಯರ। ಭಾರತಾಂಬೆ ಹರಸಿದಳು ಭಾರತೀಯರ। ಭಾರತೀಯರ ಅಹಹಾ ಭಾರತೀಯರ॥3॥ ಭಾರತ ದೇಶದಲ್ಲಿ ಜನಿಸಿ ಧನ್ಯರಾದೆವು। ನಮ್ಮ ನಾಡಿಗಾಗಿ ನಾವು ನಿತ್ಯ ದುಡಿವೆವು। ನಾವು ನಿತ್ಯ ದುಡಿವೆವು। ನಿತ್ಯ ನಿತ್ಯ ದುಡಿವೆವು॥4॥

ಹಿಂದ್‌ದೇಶ್ ಕೇ ನಿವಾಸೀ (ಹಿಂದಿ) **ರಾಗ: ಮಲಯಮಾರುತ**

ಹಿಂದ್‌ದೇಶ್ ಕೇ ನಿವಾಸೀ ಸಭೀ ಜನ್ ಏಕ್ ಹೈ। ರಂಗ್-ರೂಪ್, ವೇಷ್ -ಭಾಷಾ ಚಾಹೇ ಅನೇಕ್ ಹೈಂ॥ಪ॥ ಬೇಲಾ, ಗುಲಾಬ್, ಜೂಹೀ, ಚಂಪಾ, ಚಮೇಲೀ। ಪ್ಯಾರೆ ಪ್ಯಾರೆ ಫೂಲ್ ಗೂಂಥೇ ಮಾಲಾ ಮೇ ಏಕ್ ಹೈಂ॥1॥ ಕೋಯಲ್ ಕಿ ಕೂಕ್ ನ್ಯಾರೀ, ಪಪೀಹೇ ಕೀ ಟೇರ್ ಪ್ಯಾರೀ। ಗಾರಹೇ ತರಾನಾ ಬುಲ್ ಬುಲ್ ರಾಗ್ ಮಗರ್ ಏಕ್ ಹೈ॥2॥ ಗಂಗಾ ಜಮುನಾ, ಬ್ರಹ್ಮಪುತ್ರಾ ಕೃಷ್ಣಾ ಕಾವೇರೀ। ಜಾಕೆ ಮಿಲ್‌ಗಯೀ ಸಾಗರ್ ಮೇ ಹುಯೀ ಸಬ್ ಏಕ್ ಹೈಂ॥3॥

ಹಿಮಗಿರಿಯ ಶೃಂಗಾ ದೇವನದಿ **ರಾಗ: ಸಿಂಧುಭೈರವಿ**

ಹಿಮಗಿರಿಯ ಶೃಂಗಾ ದೇವನದಿ ಗಂಗಾ। ಮನದಲಿ ಮೂಡಿಪ ಭಾವವಿನೂತನ ಅನುಪಮ ಉತ್ತುಂಗಾ॥ಪ॥ ದಿವ್ಯ ಸನಾತನ ಸಂಸ್ಕೃತಿಗೆ ವೇದ ಪುರಾಣವೇ ಸಾಕ್ಷಿಗಳು। ಹಿಂದುವಿನುನ್ನತಿ ಅವನತಿಗೆ ಸಾಕ್ಷಿ ಹಿಮಾದ್ರಿಯ ಶಿಖರಗಳು। ಅಂಜುವ ಎದೆಯಲಿ ಧೈರ್ಯದ ಪಂಜನು ಉರಿಸುವ ಮಂಜಿನ ಮಹಲುಗಳು॥1॥ ಆ ಸುರಲೋಕವ ಮೀರಿಸುವಾ ನಾಡಿಗೆ ಧುಮಿಕಿದ ಭಾಗೀರಥೀ। ಭಾರತಮಾತೆಯ ಸಂಗದಲಿ ಧನ್ಯತೆಯಾಂತಿಹ ಭಾಗ್ಯವತೀ। ಹಿಂದೂ ದೇಶದ ಕಣಕಣ ಜನಮನ ಪಾವನಗೊಳಿಸಿಹ ಪುಣ್ಯವತೀ॥2॥ ಸೋಲೇ ಗೆಲುವಿನ ಸೋಪಾನ ದುಡುಕದೆ ನಡೆ ನೀ ಜೋಪಾನ। ನೋವಲಿ ನೊಂದಿಹ ಬಂಧುವಿಗೆ ನೀಡುತ ಧೈರ್ಯ ಸಮಾಧಾನ। ಮಾತೆಯ ಗೌರವ ರಕ್ಷಣೆಗಾಗಿ ಮುಡಿಪಾಗಿರಲೆಮ್ಮಯ ಪ್ರಾಣ॥3॥

ಹಿಂದೂ ಭೂಮಿಯ ಸಿಂಧೂ ಜಲಧಿಯ — ರಾಗ: ರೇವತಿ

ಹಿಂದೂ ಭೂಮಿಯ ಸಿಂಧೂ ಜಲಧಿಯ ಕಣಕಣಗಳ ಚೈತನ್ಯವ ಹೀರಿ। ಹಿಂದುವಿನೆದೆ ಎದೆ ಸ್ಪಂದನಗೊಳುತಿದೆ ಬಾಂಧವ್ಯದ ಮಜಲೇರಿ॥ಪ॥ ಸರಿಸುತ ಕಾರ್ಗತ್ತಲ ದೂರ ಪಸರಿಸುತಾ ಜಾಗೃತಿ ಕದಿರ। ಹಿಂದೂರವಿಯುದಯಿಸಿದನು ನೋಡ ಹಿಂದಕೆ ಸರಿಯಿತು ಮೋಡ। ಅಂಗಳದಲಿ ಮುಂಜಾವಿಗೆ ಸ್ವಾಗತ, ಭವಿಷ್ಯತ್ತಿಗೆ ಯಶಕೋರಿ॥1॥ ಕುಗ್ಗಿದೆ ಸಂಕೋಚದ ಅವಧಿ ಹಿಗ್ಗಿದೆ ಸಂತೋಷದ ಉದದಿ। ಭಾರತಮಾತೆಗೆ ವೈಭವಕಾಲ ಬರುತಿದೆ ಸಂಶಯವಿಲ್ಲ। ಗತಗೌರವವಾ ಮತ್ತೆ ಪಡೆಯುವಾ, ದೃಢನಿರ್ಧಾರವ ತೋರಿ॥2॥ ಸೋಲಿನ ಕಾರಣಗಳ ಹುಡುಕಿ, ವಿಜಯ ರಣಾಂಗಣದೊಳು ಧುಮುಕಿ। ಸಂಗಮಿಸಿದೆ ಚೇತನ ಕಾವೇರಿಯ ಸಂಘಟನೆಯ ನಿಜದಾರಿ। ಒಂದನು ಎರಡಾಗಿಸಿ ನಾಲ್ಕಾಗಿಸಿ ನೂರು ಸಾವಿರವ ಸೇರಿ॥3॥ ವಿಶ್ವವೆ ವಿಶ್ವಾಸವನಿಡುವಾ, ಪ್ರತಿಮಾನವ ಸಂತಸ ಪಡುವಾ। ವಿವಿಧತೆ ಏಕತೆ ಮೇಳೈಸಿಹುದು ದ್ವೈತಾದ್ವೈತವು ನಮದು ಧರ್ಮದ ತಳಹದಿ ಕರ್ಮಕೆ ನಾಂದಿ ಎಂಬೀ ತತ್ವವ ಸಾರಿ॥4॥

ಹೆಮ್ಮೆ ನನಗೆ ಅಮ್ಮ — ರಾಗ: ಚಕ್ರವಾಕ

ಹೆಮ್ಮೆ ನನಗೆ ಅಮ್ಮ ನಿನ್ನ ತಾಯಿ ಎಂದು ಕರೆಯಲು। ಕಂದನೆಂಬ ನಿನ್ನ ಪ್ರೀತಿ ಸವಿಯು ಜೇನಿಗಿಂತಲು॥ಪ॥ ಏನೆತಾನೆ ಇದ್ದರೂ, ನಿನಗೂ ಸಿರಿವಂತರು। ಬಲ್ಲೆನಾನು ಇರುವರೆಷ್ಟೊ ನಿನಗೂ ಧೀಮಂತರು। ಬಾಳಿ ಬಂದ ಗರಿಮೆಯಲ್ಲಿ ಯಾರು ಸಮಕೆ ಬರುವರು। ತಾಳಿ ನಿಂತ ಸಹನೆಯಲ್ಲಿ ನಿನ್ನ ಯಾರು ಗೆಲುವರು॥1॥ ಪ್ರಾಚೀನೇ ಎನಿಸಿದರೂ ಚಿರನೂತನೆ ನೀನು। ವೇದಮೂಲವಾದ ಜ್ಞಾನ ಸುಧೆಗೆ ನೀನು। ಧೇನು ಕೋಟಿ ಕೋಟಿ ಬೆಳಕು ಅರಳಿ ನಿನ್ನ ಪಾದ ತೊಳೆದಿವೆ। ನಿನ್ನ ಕಾಣಲೆಂದು ಚಂದ್ರ ತಾರೆ ನಭದಿ ನೆರೆದಿವೆ॥2॥ ತಂಪು ಆಲದಡಿಗೆ ಬಂದು ನಿಂತ ಭಕ್ತ ನಾನು। ಮೇಲಿನಿಂದ ಕೆಳಗುರುಳಿದ ಭಿತ್ತವಾದರೇನು। ನನ್ನ ಮನದಿ ಅರಳುತ್ತಿದೆ ತಾಯೆ ನಿನ್ನ ರೂಪ। ಕಂಪು ಬೀರಿ ಸುತ್ತಲೆಲ್ಲ ಅರಳಿ ನಿಲುವ ಧೂಪ॥3॥

ಹೋಜಾವೋ ತೈಯಾರ್ (ಹಿಂದಿ) — ರಾಗ: ರೇವತಿ

ಹೋಜಾವೋ ತೈಯಾರ್ ಸಾಥಿಯೋ ಹೋ ಜಾವೋ ತೈಯಾರ್॥ಪ॥ ಅರ್ಪಿತ್ ಕರ್ ದೋ ತನ್ ಮನ್ ಧನ್ ಮಾಂಗ್ ರಹಾ ಬಲಿದಾನ್। ವತನ್ ಅಗರ್ ದೇಶ್‌ಕೇ, ಕಾಮನಾ ಆಯೇ ತೋ ಜೀವನ್ ಬೇಕಾರ್॥1॥ ಸೋಚನೇ ಕಾ ಸಮಯ್ ಗಯಾ ಉಠೋ ಲಿಖೋ ಇತಿಹಾಸ್ ನಯಾ। ಬಂಸೀ ಫೇಂಕೋ ಔರ್ ಉಠಾಲೋ। ಹಾಥೋಂಮೇ ತಲ್ ವಾರ್॥2॥ ತೂಫಾನೀಗತಿ ರುಕೇ ನಹೀಂ ಶೀಶ್ ಕಟೇ ಪರ್। ಝುಕೇ ನಹೀಂ। ಉಠೇ ಹುಯೇ ಮಾಥೇ ಕೇ ಸಮ್ಮುಖ್। ಠಹರ ನಾ ಪಾತೀ ಹಾರ್॥3॥ ಕಾಂಪ್ ಉಠೇ ಧರತೀ ಅಂಬರ್ ಔರ್ ಉಠಾಲೋ। ಊಂಚಾ ಸ್ವರ್। ಕೋಟಿ ಕೋಟಿ ಕಂಠೋಂಸೇ ಗೂಂಜೇ। ಭಾರತ್ ಕಾ ಜೈ ಕಾರ್॥4॥ ಬಾರತ್ ಮಾತಾಕಿ ಜೈ (3ಸಾರಿ)

ಹೋಂಗೇ ಕಾಮ್‌ಯಾಬ್ (ಹಿಂದಿ) — ರಾಗ: ಖರಹರಪ್ರಿಯ

ಹೋಂಗೇ ಕಾಮ್‌ಯಾಬ್ ಹಮ್ ಹೋಂಗೇ ಕಾಮ್‌ಯಾಬ್। ಹಮ್ ಹೋಂಗೇ ಕಾಮ್‌ಯಾಬ್ ಏಕ್ ದಿನ್॥ ಹೋ ಹೋ ಮನ್ ಮೇ ಹೈ ವಿಶ್ವಾಸ್ ಪೂರಾ ಹೈ ವಿಶ್ವಾಸ್ ಹಮ್ ಹೋಂಗೇ ಕಾಮ್‌ಯಾಬ್ ಏಕ್ ದಿನ್॥1॥ ಹಮ್ ಚಲೇಂಗೆ ಸಾಥ್ ಸಾಥ್ ಲೇಕೇ ಹಾಥೋಂ ಮೇ ಹಾಥ್। ಹಮ್ ಚಲೇಂಗೆ ಸಾಥ್ ಸಾಥ್ ಏಕ್ ದಿನ್। ಹೋ ಹೋ ಮನ್ ಮೆ ಹೈ ವಿಶ್ವಾಸ್ ಪೂರಾ ಹೈ ವಿಶ್ವಾಸ್। ಹಮ್ ಹೋಂಗೇ ಕಾಮ್‌ಯಾಬ್ ಏಕ್ ದಿನ್॥2॥ ನಹೀಂ ಡರ್ ಕಿಸೀ ಕಾ ಆಜ್ ನಹೀಂ ಡರ್ ಕಿಸೀ ಕಾ ಆಜ್। ನಹೀಂ ಡರ್ ಕಿಸೀ ಕಾ ಆಜ್ ಏಕ್ ದಿನ। ಹೋ ಹೋ ಮನ್ ಮೆ ಹೈ ವಿಶ್ವಾಸ್ ಪೂರಾ ಹೈ ವಿಶ್ವಾಸ್। ಹಮ್ ಹೋಂಗೇ ಕಾಮ್‌ಯಾಬ್ ಏಕ್ ದಿನ್॥3॥ ಹೋಂಗಿ ಶಾಂತಿ

ಚಾರೋಂ ವೋರ್। ಹೋಂಗಿ ಶಾಂತಿ ಚಾರೋಂ ವೋರ್। ಹೋಂಗಿ ಶಾಂತಿ ಚಾರೋಂ ವೋರ್ ಏಕ್ ದಿನ್। ಹೋ ಹೋ ಮನ್ ಮೇ ಹೈ ವಿಶ್ವಾಸ್ ಪೂರಾ ಹೈ ವಿಶ್ವಾಸ್। ಹಮ್ ಹೋಂಗೇ ಕಾಮ್‌ಯಾಬ್ ಏಕ್ ದಿನ್॥4॥

ಗಾಂಧೀಜಿ

ಆತನ ಪಾಡಿರೊ **ರಾಗ: ಪುನ್ನಾಗವರಾಳಿ**

ಆತನ ಪಾಡಿರೊ ಅನವರತಾ। ಪ್ರೀತಿಯಿಂದಲಿ ನೀವೆಲ್ಲರು ಕೂಡಿ॥ಪ॥ ನಮ್ಮೀ ಗಾಂಧೀಜಿ ಪ್ರೇಮಾವತಾರ। ಜಗದ ಕಲ್ಯಾಣಕ್ಕೆ ಜನಿಸಿ ಬಂದವನೋ॥ ಸತ್ಯಾಗ್ರಹದುಪವಾಸವ ಮಾಡುತಲಿ। ನಿತ್ಯಾನಂದ ಸ್ವತಂತ್ರವೆಮಗಿತ್ತ॥1॥ ಶಬರಿ ಕಂಡ ಆ ರಾಮನಿವನೋ। ವಿದುರಕಂಡ ಆ ಕೃಷ್ಣನಿವನೋ॥ ಧನ್ಯಭಾರತದ ಪುಣ್ಯ ಪುರುಷನೊ। ಕಣ್ಣಾರೆ ಕಂಡ ಸಹನೆ ಶಂಕರನೋ॥2॥

ಇದು ಬಾಪೂಜಿ ಬೆಳಗಿದ ಭಾರತ **ರಾಗ: ಮಿಶ್ರಪೀಲು**

ಇದು ಬಾಪೂಜಿ ಬೆಳಗಿದ ಭಾರತ। ನದಿ ಕಾವೇರಿ ಹರಿಯುವ ಭಾರತ। ನಮ್ಮ ಮೈಸೂರು ಮೆರೆದಿದೆ ನೋಡುಬಾ। ಜಯ ಜಯವಾಗಲೆಂದು ನಾವು ಹಾಡುವ॥ಪ॥ ಬೇಲೂರಿನ ಗುಡಿ ಗೋಪುರದಿಂದ। ಹಳೆ ಬೀಡಿನ ಶಿಲ್ಪ ಕಲೆಯಿಂದ। ಅಂದ ಚೆಂದದ ಸುಂದರ ಭಾರತ। ಪಂಪ ರನ್ನರು ಜನಿಸಿದ ಭಾರತ। ನಮ್ಮ ಮೈಸೂರು ಮೆರೆದಿದೆ ನೋಡುಬಾ। ಜಯ ಜಯವಾಗಲೆಂದು ನಾವು ಹಾಡುವ॥1॥ ಮೈಸೂರಿನ ಬೃಂದಾವನದಿಂದ। ವಿಂಧ್ಯ ಹಿಮಾಚಲ ಗಿರಿಯಿಂದ। ಚೆಲ್ವ ಕಾಶ್ಮೀರ ನೆಲಸಿದ ಭಾರತ। ತಾಜಮಹಲಿಗೆ ಹೆಸರಾದ ಭಾರತ ನಮ್ಮ ಮೈಸೂರು ಮೆರೆದಿದೆ ನೋಡುಬಾ ಜಯ ಜಯವಾಗಲೆಂದು ನಾವು ಹಾಡುವ॥2॥ ಕರುನಾಡಿನ ಸುಖ ಜೀವನದಿಂದ। ಪಡುವಣ ಕಡಲೇ ಆನಂದ। ತೆಂಗು ಕಂಗೆಲ್ಲ ಬೆಳೆದಿಹ ಭಾರತ। ಪಚ್ಚೆ ಪೈರಿಂದ ಹಸುರಾದ ಭಾರತ। ನಮ್ಮ ಮೈಸೂರು ಮೆರೆದಿದೆ ನೋಡುಬಾ। ಜಯ ಜಯವಾಗಲೆಂದು ನಾವು ಹಾಡುವ॥3॥ ಮಂಗಳೂರು ಬೆಂಗಳೂರು ಚೆಲುವ ಕಾರವಾರ। ಪಾವನ ಕಾಶೀ ರಾಮೇಶ್ವರ। ವೀರ ಧೀರರು ಜನಿಸಿದ ಭಾರತ। ಜಯ ಜಯವಾಗಲೆಂದು ನಾವು ಹಾಡುವ। ನಮ್ಮ ಮೈಸೂರು ಮೆರೆದಿದೆ ನೋಡುಬಾ। ಜಯ ಜಯವಾಗಲೆಂದು ನಾವು ಹಾಡುವ॥4॥ ಗಂಗಾ ಸಿಂಧು ಬ್ರಹ್ಮಪುತ್ರ ಯಮುನ। ಕೃಷ್ಣ ಗೋದಾವರಿ ತುಂಗಭದ್ರ। ನದನದಿಗಳು ಹರಿಯುವ ಭಾರತ। ಪುಣ್ಯಭೂಮಿಯು ನಮ್ಮ ಭಾರತ। ನಮ್ಮ ಮೈಸೂರು ಮೆರೆದಿದೆ ನೋಡುಬಾ। ಜಯ ಜಯವಾಗಲೆಂದು ನಾವು ಹಾಡುವ॥5॥

ಇಳೆಗಹಿಂಸೆಯ ಪರಮ **ರಾಗ: ಶುದ್ಧಧನ್ಯಾಸಿ**

ಇಳೆಗಹಿಂಸೆಯ ಪರಮ ತತ್ವವನು ತೋಳೆತ್ತಿ ಉಸಿರ ಬಲವುಳ್ಳನಕ ಸಾರಿದ ಗುರು॥ಪ॥ ದರ್ಪವನು ಧೈರ್ಯದಲಿ ಶಸ್ತ್ರವನು ಸಹನೆಯಲಿ। ಶಠತೆಯನು ಸತ್ಯದಲಿ ಜಯಿಸಿದ ಕಲಿ। ಹುಡಿಯ ಹುಳುಗಳನೆತ್ತಿ ವಜ್ರಹೃದಯವ ಬಿತ್ತಿ। ವೀರಜನ್ಮವನಿತ್ತ ಹಿರಿಯ ತಂದೆ॥1॥ ನೆಲದ ನಡವಳಿಕೆಯಲ್ಲಿ ನಾಕದೌನ್ನತ್ಯವನು। ಮೇಳವಿಸಿ ತೋರಿದ ಪವಾಡ ಪುರುಷ। ಪ್ರೇಮ ಸಂಸ್ಥಾಪನೆಯ ವಿಶ್ವಜಿದ್ಯಜ್ಞದಲಿ। ಪ್ರಾಣ ಪೂರ್ಣಾಹುತಿಯನಿತ್ತ ದಾನಿ॥2॥ ಭಾರತದ ಭಾಗ್ಯರವಿ। ದೀನ ದಲಿತರ ರಕ್ಷೆ। ವಿಮಲ ಧರ್ಮದವಾಣಿ, ಜನತೆಯಂತಃಸಾಕ್ಷಿ। ಸರ್ವೋದಯದ ಸೂತ್ರಧಾರಿ ಗಾಂಧಿ॥3॥

ಇಂದ್ರಿಯಂಗಳ ಜಯಿಸಿ **ರಾಗ: ಮೋಹನ**

ಇಂದ್ರಿಯಂಗಳ ಜಯಿಸಿ ಚಿತ್ತಶುದ್ಧಿಯ ಬಯಸಿ। ಲೋಭಮಂ ತ್ಯಜಿಸಿ ರೋಷವ ವರ್ಜಿಸಿ। ಸರ್ವಸಖ್ಯವ ಭಜಿಸಿ ತೃಪ್ತತೆಯನಭ್ಯಸಿಸಿ। ಸತ್ಯಪಾಲನೆಯೊಂದ ಮನದೊಳಿರಿಸಿ॥1॥ ಕಾಯ ಕಷ್ಟವ ಸಹಿಸಿ ವೈರಿಗಣಮಂ ಕ್ಷಮಿಸಿ। ಸರ್ವಸಮತೆಯ ಗಳಿಸಿ ಶಮವನರಸಿ। ಸ್ವಾತ್ಮ ಶಿಕ್ಷಣಮೇ ಸ್ವರಾಜ್ಯಮೆನ್ನುತ ವಚಿಸಿ। ದೇಶ ಸೇವೆಯನೀಶ

ಸೇವೆಯೆನಿಸಿ॥2॥ ಸಾಧುವರ ವೃತ್ತಿಯಂ ತನ್ನೊಳೇ ಜಗಕೆ ತೋರಿ। ಐಹಿಕಾರ್ಥಂಗಳಾನರ್ಥ್ಯಮಂ ವಿಶದ ಬಡಿಸಿ। ಪಾಶ್ಚಾತ್ಯ ಜನಕಮತಿ ವಿಮಲ ನೀತಿಯನು ಪೇಳ್ವಾ। ದೈವ ಸಂಪನ್ಮಾರ್ಗದರ್ಶಕಂ ಗಾಂಧಿಯತ್ತಿ॥3॥

ಎಡಗೈಯಲ್ಲಿ ರಾಟೆ **ರಾಗ: ಕಲ್ಯಾಣಿ**

ಎಡಗೈಯಲ್ಲಿ ರಾಟೆ ಬಲಗೈಯಲ್ಲಿ ಗೀತೆ। ಹಿಡಿದವರ್ ಯಾರು ಗೊತ್ತೇ? ಅವರೆ ನಮ್ಮ ಗಾಂಧಿ। ।1॥ (ಪರಮ ಪೂಜ್ಯಗಾಂಧಿ। ಶ್ರೀಮಹಾತ್ಮ ಗಾಂಧಿ) ಕೈಯ್ಯಲ್ಲೊಂದು ಕೋಲು। ಅವರಿಗಿಲ್ಲ ಸೋಲು। ಅವರು ಯಾರು ಗೊತ್ತೆ? ಅವರೆ ನಮ್ಮ ಗಾಂಧಿ॥2॥ ವಿಶ್ವಕ್ಕೆಲ್ಲಾ ದಾತ। ಮಕ್ಕಳಿಗೆಲ್ಲಾ ತಾತ। ಅಂಥಹವರ್ಯಾರು ಗೊತ್ತೆ? ಅವರೆ ನಮ್ಮ ಗಾಂಧಿ॥3॥

ಒಂದು ದಿವಸ ಗಾಂಧಿತಾತ ಹೋದರೊಂದು **ರಾಗ: ಸೌಖ್ಯದಾಯಿನಿ**

ಒಂದು ದಿವಸ ಗಾಂಧಿತಾತ ಹೋದರೊಂದು ಹಳ್ಳಿಗೆ। ಸಣ್ಣ ಸಣ್ಣ ಗುಡಿಸಿಲಲ್ಲಿ ಕಂಡರೊಂದು ಅಜ್ಜಿಗೆ। ಏನು ಅಮ್ಮ ನಿಮ್ಮ ಸೀರೆ ಎಷ್ಟು ಮಲಿನವಾಗಿದೆ। ಅದರ ಮೇಲೆ ಕಲೆಗಳೇಕೆ ನೀನು ಒಗೆಯಬಾರದೆ। ಹೌದು ಬಾಪು ನಿಮ್ಮ ಮಾತು ಸತ್ಯವಾದದ್ದು। ಉಟ್ಟ ಸೀರೆ ಬಿಟ್ಟು ನನಗೆ ಬೇರೆ ಸೀರೆ ಎಲ್ಲಿದೆ। ಅಜ್ಜಿ ನುಡಿದ ಮಾತುಕೇಳಿ ಜಜ್ಜಿ ಹೋಯಿತು ಗಾಂಧಿಹೃದಯ। ಅಂದಿನಿಂದ ಗಾಂಧಿಯವರು ಕೋಟುಪ್ಯಾಂಟು ಬಿಟ್ಟರು। ದೇಹಬಿಟ್ಟು ಹೋಗೋವರೆಗೂ ತುಂಡುಬಟ್ಟೆ ಉಟ್ಟರು॥

ಓ ಗಾಂಧಿ ದೇವದೂತ **ರಾಗ: ಆನಂದಭೈರವಿ**

ಓ ಗಾಂಧಿ ದೇವದೂತ। ಭಾರತದ ಭಾಗ್ಯದಾತಾ। ಭಾರತದ ಏಳ್ಗೆಗಾಗಿ ರಾಟೆಯ ಪಿಡಿದ ಯೋಗಿ। ಹರಿಜನರ ಏಳ್ಗೆಗಾಗಿ। ಪ್ರಾಣವನೆ ತೆತ್ತ ತ್ಯಾಗಿ॥ ಶಾಂತಿಯ ದೂತನಾಗಿ ಸ್ವಾತಂತ್ರ್ಯಗಳಿಸಿ ಪೋದೆ। ಮೊರೆ ಇಡುತಲಿಹುದು ಇಂದು ನಿನಗಾಗಿ ಹಿಂದು ದೇಶ॥

ಕರುಣಾಮೂರ್ತಿ ಗಾಂಧಿ ಮಹಾತ್ಮ **ರಾಗ: ಕಾಂಬೋಧಿ**

ಕರುಣಾಮೂರ್ತಿ ಗಾಂಧಿ ಮಹಾತ್ಮ। ಅರುಳ್ ಕೂರುಂ ಅಹಿಂಸಾ ಧರ್ಮಾತ್ಮ। ಅವರ್ ದಾನ್ ನಮ್ಮ ಗಾಂಧಿ ಮಹಾತ್ಮ॥1॥ ಉಲಗೆಲ್ಲ ಪುಗಳುಂ ಅಮರ ಮಹಾತ್ಮ ಉಮದಾದ ರುಳ್‌ವಾಲ್। ವಾಳುಂ ಇಂಡಿಯಜನಂ॥2॥ ಜಾತಿ ಮತ ಬೇಧಂ ಇಲ್ಲಾದ ಸಾತ್ವೀಕ ವಾಳ್ಕೈ ಮೇಲ್ಮೈಯಾನದು॥ ನಾಲು ಪತ್ತು ಕೋಟಿ ಮಕ್ಕಳ್ ಅಭಿಮಾನಿಯೇ ಆತ್ಮಜ್ಞಾನಿಯೇ॥3॥

ಗಾಂಧಿಯು ತೋರಿದ ದಾರಿಲಿ ನಡೆದರೆ **ರಾಗ: ಅಭೇರಿ**

ಗಾಂಧಿಯು ತೋರಿದ ದಾರಿಲಿ ನಡೆದರೆ ದೊರಕದೆ ಹೋಗದು ರಾಮರಾಜ್ಯ ದೂರಕೆ ಹೋಗದು ರಾಮರಾಜ್ಯ॥ಪ॥ ಹರಿಜನರೇಳಿಗೆ ಹಿಂದು ಮುಸ್ಲಿಮರ ಐಕ್ಯತೆಗಾಗಿ ಹೋರಾಡಿದ। ಹಾಡುತ ಪಾಡುತ ಕೂಡುತ ನಲಿಯುತ। ಗಾಂಧಿಯ ಗೀತೆಯ ಹಾಡುವ ನಾವು। ಗಾಂಧಿಯ ಗೀತೆಯ ಹಾಡುವ॥1॥ ದೊರಕಿಸಿ ಕೊಡಲಿಲ್ಲವೆ ಸ್ವಾತಂತ್ರ್ಯ ದೊರಕದು ಅನ್ನ ಬಟ್ಟೆತೋರಿದ ದಾರಿಯ। ದೂರಕೆ ಸರಿದರೆ ಯಾರನು ದೂರಿದರೇನು ಫಲ। ಗಾಂಧಿಯ ದೂರಿದರೇನು ಫಲ॥2॥

ಗಾಂಧಿ ತಾತನ ಜನುಮದಿನ **ರಾಗ: ಶಂಕರಾಭರಣ**

ಗಾಂಧಿ ತಾತನ ಜನುಮದಿನ। ಇದು ಭಾರತ ಜನತೆಗೆ ಮಹಾದಿನ॥ಪ॥ ಭಾರತ ಮಾತೆಯ ಬಂಧನ ಕಳಚಿ। ಭಾರತ ಜನತೆಗೆ ಸ್ವತಂತ್ರ್ಯನೀಡಿ। ಭಾರತ ದೇಶದ ಏಳ್ಗೆಗೆ ಶ್ರಮಿಸಿ। ಅಮರರಾದರು ಗಾಂಧೀಜಿ। ಅಮರರಾದರು ಬಾಪೂಜಿ॥1॥

ಸತ್ಯಧರ್ಮದ ಪಾಲನೆ ಮಾಡಿ। ಶಾಂತಿ ಸ್ನೇಹದ ಲಾಲನೆ ಮಾಡಿ। ಪ್ರೀತಿ ನೀತಿಯ ಕರೆಯನು ನೀಡಿ। ಅಮರರಾದರೂ ಬಾಪೂಜಿ। ಅಮರರಾದರೂ ಗಾಂಧೀಜಿ॥2॥ ಜಾತಿ ಪಂಥದ ಹಗೆಯನು ಅಳಿಸಿ। ಮೇಲುಕೀಳಿನ ಭಾವನೆ ಮರೆಸಿ। ಒಂದೇ ಭಾವದ ಪ್ರೇಮವ ಸುರಿಸಿ। ಅಮರರಾದರು ಗಾಂಧೀಜಿ। ಅಮರರಾದರು ಬಾಪೂಜಿ॥3॥

ಗಾಂಧಿತಾತ2 ನಿನ್ನಮಾತು **ರಾಗ: ಖರಹರಪ್ರಿಯ**

ಗಾಂಧಿತಾತ ಗಾಂಧಿತಾತ ನಿನ್ನ ಮಾತು ಕೇಳಲಿಲ್ಲ.. ನಾವು ಕೂತು॥ಪ॥ ನಿನ್ನ ಮಾತು ಕೇಳಲಿಲ್ಲಾ.. ಆದರೂ ನೀನೇ ನಮಗೆ ಸ್ಫೂರ್ತಿಯು। ಹಿಂಸೆಯಿಂದ ರಕ್ಷಿಸುವ ಮಹಾಶಕ್ತಿಯು। ಸತ್ಯವೇ ನಿನ್ನ ಕೈಯಲಿರುವ ಕೋಲು। ಭಾರತವ ಸುತ್ತಿಸುತ್ತಿ ಗಟ್ಟಿಯಾದ ಕಾಲು। ಪ್ರೀತಿ ಕರುಣೆ ಚೆಲ್ಲುತಿರುವ ನಿನ್ನ ಮೊಗವು। ಧೀರ, ಗಂಭೀರ, ನಿನ್ನ ಭಂಗಿ ನಿಲುವು॥1॥ ಮಾಡಿದ ತಪ್ಪನೊಪ್ಪಿ ಹಿರಿತನದಿ ನೀ ಮೆರೆದೆ। ಸತ್ಯ ಶೋಧಿಸಿ ನೀನು ಪ್ರೀತಿಯನು ಹಂಚಿದೆ। ಈಶ್ವರ, ಅಲ್ಲರ ಸ್ಮರಣೆಯನು ಮಾಡಿದೆ। ಸರ್ವರಿಗೂ ಸನ್ಮತಿಯ ನೀಡೆಂದು ಬೇಡಿದೆ॥2॥ ಭೇದಭಾವ ತೋರದೆ ಏಕತೆಯ ಬೋಧಿಸಿದೆ। ರಾಮರಾಮ ಎನ್ನುತ ಆತ್ಮಾರ್ಪಣೆಗೈದೆ। ನಿನ್ನ ನಡೆನುಡಿ ನಮಗೆ ಬಾಳದೀಪವಾಗಿದೆ। ವಿಶ್ವವನೆ ಬೆಳಗುವ ಧ್ರುವತಾರೆ ನೀನಾದೆ॥3॥

ಗಾಂಧಿತಾತ ಬಂದಿದ್ದ ಕೈಯಲ್ಲಿ

ಗಾಂಧಿತಾತ ಬಂದಿದ್ದ। ಕೈಯಲ್ಲಿ ಕೋಲು ಹಿಡಿದಿದ್ದ। ಬಗ್ಗಿ ಬಗ್ಗಿ ನಡೆದಿದ್ದ। ಹತ್ತಿ ಪಂಚೆ ಸುತ್ತಿದ್ದ। ಇಂಗ್ಲೀಷರನ್ನು ಓಡಿಸಿದ್ದ। ಸ್ವಾತಂತ್ರ್ಯ ಹಬ್ಬ ಮಾಡಿದ್ದ। ಗುಂಡಿನ ಏಟಿಗೆ ಬಲಿಯಾದ। ರಾಮ ರಾಮ ಎಂದುಸಿರೆಳೆದ॥

ಗಾಂಧಿಯ ಶಾಂತಿಯ ಕರೆ **ರಾಗ: ಸಿಂಧುಭೈರವಿ**

ಗಾಂಧಿಯ ಶಾಂತಿಯ ಕರೆ ಆಲಿಸು। ಗಾಂಧೀಯ ಸತ್ಯದ ಕರೆ। ಗುಂಡಿನ ಏಟನು ಮರೆಮರೆ। ಬಾಕುವಿನ ಇರಿತವ ತೊರೆತೊರೆ। ಅಹಿಂಸಾ ವನಕೆ ಕರೆ ಕರೆ॥ಪ॥ ಹೊತ್ತಾದ್ರೆ ಹರಿವುದು ರಕ್ತದ ಕೋಡಿ। ರಕ್ತದ ಕೋಡಿಯ ನಿಲುವಂತೆ ಮಾಡಿ। ಅಹಿಂಸಾ ವನಕೆ ಬಿಡದೆ ತೆರಳಿ ಚರಕವು ಮನೆಮನೆಗ್ಹೋಗುವಂತೆ॥ ಹರಿಜನ ಸೇವೆಯ ಮಾಡುವಂತೆ। ಮಾಡಿದನಲ್ಲವೆ ಬಾಪೂಜಿ॥1॥ ಶಾಂತಿಮೂರುತಿ ಗಾಂಧೀಜಿ ಭಲೆ ಗಾಂಧೀಜಿ। ಭಾರತಮಾತೆಯ ಕೀರ್ತಿಯ ಕಿರಣವ್ಯಾಪಿಸಲಿ ಜಗವ। ಗಾಂಧಿತತ್ವ ತರಲಿದೆ ಭಾರತಕೆ ಖ್ಯಾತಿ॥2॥

ಗಾಂಧಿಯಾತ್ಮಕೆ ಶಾಂತಿಯಾಗಲಿ **ರಾಗ:ಹಿಂದೋಳ**

ಗಾಂಧಿಯಾತ್ಮಕೆ ಶಾಂತಿಯಾಗಲಿ। ಗಂಗಾಧರನನ ಭಜಿಸಿರಿ। ಭಾರತಾಂಬೆಯ ಪ್ರೇಮ ಪುತ್ರರೆ। ಇಂದು ದುಃಖವ ಸಹಿಸಿರೀ॥ ಮುಂದೆ ನೀವೊಂದಾಗಿ॥ಪ॥ ದೇಶಸೇವೆಗೆ ಅಸುವ ನೀಗಿದ। ನಮ್ಮ ಗಾಂಧಿ ಮಹಾತ್ಮರೂ। ಶುಕ್ರವಾರದ ಶುಭದ ದಿನದಲಿ। ತಮ್ಮ ದೇಹವ ಬಿಟ್ಟರೂ॥ ನಮ್ಮ ತಬ್ಬಲಿಗೈದರು॥1॥ ಹಿಂದು ಮುಸ್ಲಿಂ ಒಂದುಗೂಡುತ। ಹಿಂದು ದೇಶವನುಳಿಸಿರಿ। ಇಂದೇಯೇ ನಮ್ಮ ಗಾಂಧಿ ಆತ್ಮಕೆ। ಸ್ವರ್ಗ ಸುಖವನು ಬಯಸಿರಿ॥ ಸರ್ವ ಪ್ರಜೆಗಳು। ಹರಸಿರಿ॥2॥ ಭಾರತಾಂಬೆಯ ಜ್ಯೇಷ್ಠಪುತ್ರರು। ಜೈಲುವಾಸವ ಕಳೆದರು। ಸ್ವಾತಂತ್ರ್ಯಕೋಸುಗ। ತ್ಯಾಗಮಾಡಿ ತಮ್ಮ ದೇಹವ ಬಿಟ್ಟರೂ। ನಮ್ಮ ತಬ್ಬಲಿಗೈದರು॥3॥ ಸತ್ಯಶಾಂತಿ ಅಹಿಂಸೆಯೇ ನಮ್ಮ ಗಾಂಧಿ ಮಂತ್ರದ ಬೀಜಗಳ್। ಲೆಕ್ಕವಿಲ್ಲದೆ ಚೆಲ್ಲಿ ಹೋದರು। ಶ್ರದ್ಧೆಯಿಂದಲಿಗಳಿಸಿರಿ। ಭಕ್ತಿಯಿಂದಲಿ ಬಾಳಿರಿ॥4॥ ಕೀರಿಟವಿಲ್ಲದ ಚಕ್ರವರ್ತಿಯು ಕಲಿಯುಗದ ಮಹಾಪುರುಷರು। ಪುಷ್ಯ ಬಹುಳ ಪಂಚಮೀದಿನ। ಪರತತ್ವವ ಪಡೆದರೂ॥ ಪರಮ ದೇಶಭಕ್ತರು॥5॥ ಸಕಲ ಪ್ರಜೆಗಳು ಸಾನುರಾಗದಿ ರಾಮಮಂತ್ರವ ಜಪಿಸಿರಿ। ಹುಲ್ಲಹಳ್ಳಿಯ ಚಂದ್ರಶೇಖರ ಬರೆದು ಪ್ರಾರ್ಥನೆ ಗೈದರೂ॥ ಶಾಂತಿಯಾಗಲಿ ಎಂದರೂ॥6॥

ಜಯ2 ಮಹಾತ್ಮ ಗಾಂಧಿ ಜಯ **ರಾಗ: ತಿಲಂಗ್**

ಜಯ ಜಯ ಮಹಾತ್ಮ ಗಾಂಧಿ। ಜಯ ಜಯ ವಿಜ್ಞಾನ ಸುಗಾಂಧಿ।।ಪ।। ಭಾರತೀಯರಿಗೆ ಅಹಿಂಸಾತತ್ವದ ಪರಮಾರ್ಥವನು ಬೋಧಿಸಿದೆ।।1।। ಭರತಖಂಡ ಸೌಭಾಗ್ಯೋದಯಕೆ। ಪರಮ ಸಾಧನವು ರಾಟೆ ಎನುತಲಿ।।2।। ಪರಮಾನಂದದೊಳುಪದೇಶಿಸಿದೆ। ಕರುಣಾಮಯನೆ ಮಹಾತ್ಮ ನಿನಗೇ ಜಯವು।।3।।

ಜಯ2 ಶ್ರೀಗಾಂಧಿ ಮಹಾತ್ಮ **ರಾಗ:ಹಿಂದೋಳ**

ಜಯ ಜಯ ಶ್ರೀ ಗಾಂಧಿ ಮಹಾತ್ಮ। ಜಯ ಜಯ ಭಾರತ ಜನಮನಸ್ತೋಮ।।ಪ।। ಸುಜನ ಸುಖಾಲಯ ಸದ್ಗುಣ ಧಾಮ। ಸತ್ಯಾನ್ವೇಷ ವಿಶ್ವಾಪ್ರೇಮ।।1।। ಧೀರವೀರ ಸುಖಶಾಂತಿ ಸ್ವರೂಪ। ಸಾರಿದೇ ಧರೆಯೊಳು ಸತ್ಯ ಪ್ರತಾಪ।।2।। ಭೋಗಿಯಾಗದೆ ತ್ಯಾಗಿಯು ನೀನಾಗಿ। ತ್ಯಾಗವ ಕಲಿಸಿದೆ ನಮಿಪೆವು ಬಾಗಿ।।3।।

ತಟ್ಟು ಚಪ್ಪಾಳೆ ಪುಟ್ಟಮಗು **ರಾಗ: ಖರಹರಪ್ರಿಯ**

ತಟ್ಟು ಚಪ್ಪಾಳೆ ಪುಟ್ಟಮಗು। ತಕ್ಕೋ ಕೈ ಇಕ್ಕೋ ಕೈ। ಗಾಂಧಿಗಿಂದು ಜನುಮ ದಿನ। ತಟ್ಟು ಚಪ್ಪಾಳೆ ಪುಟ್ಟ ಮಗು।।ಪ।। ನಾಲ್ಕು ಹತ್ತು ಕೋಟಿ ಜನರ ನಾಡಿಯಲ್ಲಿ ನುಡಿಯುತಿದೆ. ಗಾಂಧೀಜಿ ಬಾಪೂಜಿ। ತಟ್ಟು ಚಪ್ಪಾಳೆ ಪುಟ್ಟಮಗು।। ಮಿಂದು ಖದ್ದರಿಂದು ಉಡು। ಗಾಂಧಿಗೊಂದು ಹೂವು ಇಡು। ತಕ್ಕೋ ಕೈ ಇಕ್ಕೋ ಕೈ। ತಟ್ಟು ಚಪ್ಪಾಳೆ ಪುಟ್ಟ ಮಗು।।1।। ಆಡು ಹಾಲು ಹೆಸರು ಖೀರು। ಬೇವು ಚಟ್ನಿ ಗೋಧಿ ರೊಟ್ಟಿ। ಅಷ್ಟು ನೀರು ಅವನಿಗಿಡು। ತಟ್ಟು ಚಪ್ಪಾಳೆ ಪುಟ್ಟಮಗು।। ಇಂಡಿಯದ ಮಗುವು ಗಾಂಧಿ ಇಂಡಿಯದ ದೀಪ ಗಾಂಧಿ। ಕಂಡು ಅವನ ಕುಣಿವ ಬಾರೋ। ತಟ್ಟುಚಪ್ಪಾಳೆ ಪುಟ್ಟಮಗು।।2।।

ನಮೋ ಗಾಂಧಿ2 ನಮೋ ಭಾರತ **ರಾಗ: ರೇವತಿ-ಏಕತಾಳ**

ನಮೋ ಗಾಂಧಿ ನಮೋ ಗಾಂಧಿ। ನಮೋ ಭಾರತ ರತ್ನವೇ। ನಮೋ ಗಾಂಧಿ ನಮೋ ಗಾಂಧಿ। ನಮೋ ಮಹಾಸತ್ವವೇ(2)।।ಪ।। ಮೇರು ಗಿರಿಯ ಮೇಲೆ ಮೂಡಿ। ಬರುವ ಸೂರ್ಯನಂತೆ। ಮಣ್ಣ ಚಿನ್ನ ಮಾಡಲೆಂದು। ನೀನು ಬಂದು ನಿಂತೆ(2) ।।1।। ಬುದ್ಧನಾಗಿ ಸಿದ್ಧನಾಗಿ। ಜಗಕೆ ಮಹಿಮನಾದೆ। ಸತ್ಯ ಧರ್ಮ ಶಾಂತಿರೂಪ। ವಿಶ್ವ ವಂದ್ಯನಾದೆ।।2।। ಹರೇ ರಾಮ ರಾಮ ನೆಂದು। ಧ್ಯಾನ ಲೀನನಾದೆ। ಮುಗಿದ ಕೈಯ ನೆತ್ತಿ ನಭಕೆ ವಿಶ್ವಲೀನನಾದೆ।।3।।

ನಮನವಿದೋ2 ನಮನ ಸಹಜಯೋಗಿ **ರಾಗ: ವಸಂತ**

ನಮನವಿದೋ ನಮನವಿದೋ ನಮನ ಸಹಜಯೋಗಿ।। ಸಮತೆಗಾಗಿ ಬಾಳ್ವೆಯನೆ ಬೇಳ್ದ ನವವಿರಾಗಿ। ಕತ್ತಲಲಿಯು ಗುರಿಯ ದಾರಿ ಕಾಂಬ ಕಣ್ಣು ನಿನ್ನದೊ। ತತ್ವಮಾತೆಯಶ್ರುತರವ ಕೇಳ್ವ ಕಿವಿಯು ನಿನ್ನದೊ। ವಿಗಡ ರಜದೊಳಿದ್ದು ಸೊವಡು, ತಗಲದ ಮನ ನಿನ್ನದೊ। ಜಗದ ಸೌಖ್ಯಕೆಂದೆ ಬೆರಳ ನೆಣೆಪ ಬುದ್ಧಿ ನಿನ್ನದೊ।।1।। ನಿನ್ನ ಉಸಿರದೊಂದೊಂದೂ ಜಡಕೆ ಜೀವವಿತ್ತಿತೊ। ನಿನ್ನ ಧಮನಿ ಮಿಡಿತವಹಹ ಚೈತನ್ಯವ ಬಿತ್ತಿತೊ। ನಿನ್ನ ವಾಣಿ ದಿಗ್ ದೇಶಕೆ ನನ್ನಿಯ ನೆಲೆ ತಿಳಿಹಿತೊ। ನಿನ್ನಗೆಯ್ಮೆ ಸಾವ ಜೀವಜುಂಗುಳಿಯನ್ನುಳಿಸಿತೊ।।2।। ಮೈತ್ರಿಯಿಂದೆ ಶತ್ರುಗಳನು ಸೋಲಿಸಿರುವ ವೀರ ಮೃತ್ಯುವನೂ ಮಿತ್ರನಂತೆ ಸ್ವಾಗತಿಸಿದ ಧೀರ ನಿನ್ನ ನೌಕೆ ನಂಬಿದರನು ತಲ್ಪಿಸಿತೈ ತೀರ। ನೀನು ನಡೆದ ದಾರಿಯದೇ ಸತ್ಯ ಧರ್ಮ ಸಾರ.....।।3।। ಬಲುಮೆ-ಮೋಸಗಳನು ಹಣಿಯೆ ಕಲಹಗೈದೆ ರಾಜ! ಕಲಿಸಿದೆ ಜೀವನವ ಚೆಲ್ವಗೊಳಿಪ ಕಲೆಯನೋಜ! ನಿಲಿಸಿದೆ ನಾಡಿಗರ ಹೃದಯದೊಳಗೆ ದಿವ್ಯತೇಜ। ಸಲಿಪುದೆಂತು ಶ್ರದ್ಧಾಂಜಲಿ ಎಲ್ಲರಂತೆ ಸಾಜ।।4।।

ನಿನ್ನ ಪ್ರತಿಮೆಯ ನಿಲ್ಲಿಸಿ **ರಾಗ: ಹಂಸಧ್ವನಿ**

ನಿನ್ನ ಪ್ರತಿಮೆಯ ನಿಲ್ಲಿಸಿ ನಾವು ಮೆರೆವುದು ವ್ಯರ್ಥ। ನಮ್ಮ ಹೃದಯದೊಳಿರಲಿ ನಿನ್ನ ಮರಣದ ಅರ್ಥ। ನಿನ್ನ ಭಸ್ಮಕೆ ಕಾಶಿ ಗೋಕರ್ಣ ಬೇಕಿಲ್ಲ॥ ನಿನ್ನ ಬೂದಿಯ ತ್ರಾಣ ಪುಣ್ಯಕ್ಷೇತ್ರಕ್ಕಿಲ್ಲ। ನಿನ್ನ ಕರ್ಮದ ಕಲ್ಪವೃಕ್ಷ ಅಜರಾಮರವು॥ ನಿನಗೇಕೆ ಪುಣ್ಯತಿಥಿಗಳ ಬಾಹ್ಯ ಜಂಜಡವು? ಹುಟ್ಟಿದವರಿಗೆಹಬ್ಬ ಸತ್ತವರಿಗೇ ತಿಥಿಯು॥ ನಿನಗೆ ಎರಡು ಇಲ್ಲ ಯಾವುದೂ ಇತಿಮಿತಿಯು॥ ನಿನಗೇಕೆ ಸ್ಮಾರಕವು? ಶಿಲ್ಪಕೃತಿ, ಹೂಮಾಲೆ? ಲೋಕವನೆ ಬೆಳಗುತಿದೆ ನಿನ್ನ ಎಲುಬಿನ ಜ್ವಾಲೆ॥

ನಿನ್ನನರಿತು ನೋಡಲೂ **ರಾಗ: ಪುನ್ನಾಗವರಾಳಿ**

ನಿನ್ನನರಿತು ನೋಡಲೂ ನಿನ್ನ ಕುರಿತು ಹಾಡಲೂ। ಕೋಟಿ ಕೋಟಿ ಜನದ ಮನದ ವ್ಯಥೆಯನೆಲ್ಲ ತೋಡಲೂ॥ ಅಯ್ಯೋ ನಾ ಅಪಾತ್ರ ತಂದೆ ಬರಡು ನೆಲದ ಬೀಜ ನಾನು। ಮರದ ಫಲದ ವರದ ಕನಸು ಕಾಣುವಂಥ ದೀನನು। ಶಕ್ತಿಹೀನ, ಭಕ್ತಿಹೀನ, ಮಹಾ ಮ್ಲಾನನು॥1॥ ಮೇಲು ಕೀಳು ಇಲ್ಲವಲ್ಲಿ ಇಲ್ಲ ಲಿಂಗ ಭೇದವು। ಜಾತಿಮತ ವಿರೋಧವೂ ವಾದವು ವಿವಾದವು। ಸೋದರತೆಯ ಸಾಮಗಾನ ಲಹರಿ ನಿನ್ನ ಸುತ್ತಲೂ। ಸಮಭಾವದ ಸುಮಧುರಗತಿ ಬಾಳು ಬಾಳನೆತ್ತಲೂ। ಸತ್ಯದ ವ್ರತ ತ್ಯಾಗದ ಪಥ, ಜನ ಸೇವಾ ಶಪಥವು। ಶಾಂತಿ ದಾಂತಿ ನಿಗ್ರಹಧೃತಿ ಜೀವದಯಾ ಯೋಗವು॥2॥ ನಿನ್ನ ಕಂಡು ಬೆರಗಾದರು ನಿನಗೆ ನಮೋ ನಮ ಎಂದರು ನಿನ್ನ ಹೊಗಳಿ ಹಾಡಿದರು ಹಣ್ಣು ಕಾಯಿ ತಂದರು। ನಿನ್ನ ಪಥವ ಮರೆತು ನಿನ್ನ ಪದಕೆ ಬಿದ್ದ ಅಂಧರು। ನಿನಗೆ ಗುಡಿಯ ಕಟ್ಟಿ ತಾವು ಬಚ್ಚಲಲ್ಲೆ ನಿಂದರು॥3॥ ಬರಸಿಡಿಲಂತೆರಗಿತು ಹಾ, ಕೊಲೆಗಡುಕನ ಕೈ। ಜರಾಜೀರ್ಣ ತ್ಯಾಗಶೀರ್ಣ ಎಲುಬುಗೂಡು ಮೈ॥4॥ ನಂಬಲೆಂತು (2ಸಾರಿ) ಇಂಥ ಘೋರವಾರ್ತೆಯ? ನಂಬಲೆಂತು ಹೇಳು ತಂದೆ ಇಂಥ ಘೋರ ವಾರ್ತೆಯ?॥5॥ ಇಂದು ದೇಶ ದೇಶ ಶೂನ್ಯ ಶೂನ್ಯವೆಲ್ಲ ಹೃದಯವು ಇಂದು ವೀರಧೀರ ಮುಖವುಕೂಡ ನೋಡು ಸಭಯವು। ಹೋದನವನು ದೂರ ದೂರ ಮೂಲಕಾಂತಿಯೊಡಲಲಿ। ಕರಗಿಹೋದ ಅರಗಿಹೋದ ಹಿರಿಬೆಳಕಿನ ಕಡಲಲಿ॥7॥ ಆದರಿನ್ನು ಇಲ್ಲೆ ಇಹುದು ಅವನ ಜೀವಸಾರವು। ಮೊರೆಯುತಿಹುದು ಇನ್ನು ಅಲ್ಲೆ ಅವನ ದನಿ ಉದಾರವು॥8॥ ಏಳುವವರೆ ಏಳಿ ಎದ್ದು ಹಿಡಿಯಿರವನ ಪಥವನು। ಬಾಳುವವರೆ ಇದ್ದು ಬಾಳಿ ಅವರ ವೀರ ವ್ರತವನು। ಮುಟ್ಟುವವರೆ ಮುಟ್ಟಿ ಅವನು ತೋರಿದಂಥ ಗುರಿಯನು। ಪಡೆಯುವವರೆ ಪಡೆಯಿರವನ ಆತ್ಮದಮರ ಸಿರಿಯನು॥9॥

ನುಡಿಗೆ ನುಡಿಗೆ ಅಡಿಗಡಿಗೆ ಗಾಂಧಿ **ರಾಗ: ಹಿಂದೋಳ**

ನುಡಿಗೆ ನುಡಿಗೆ ಅಡಿಗಡಿಗೆ ಗಾಂಧಿ ಹೆಸರೆದ್ದು ನಿಲ್ಲುತಿಹುದು। ವಿಶ್ವ ಬಂಧು ವಿಶ್ವಾತ್ಮನೆಂದು ಜನಕೋಟಿ ನಮಿಸುತಿಹುದು॥ಪ॥ ಲೋಕದೀಚೆ ಮುಗಿಲಂಚಿನಾಚೆ ಅವನಾತ್ಮ ತುಳುಕುತಿಹುದು। ನೇಸರುದಿಸಿ ಹೂ ಗಾಳಿ ಸೂಸಿ ಸಂದೇಶ ಬೀರುತಿಹವು॥ ಯೇಸು ಕ್ರಿಸ್ತನುತ್ಪ್ರೇಮ ಹಸ್ತ ಸುಸ್ತೇಜವಾಂತು ಬಂತು। ಬುದ್ಧನೆದೆಯ ಉದ್ಬುದ್ಧನೀತಿ। ಹಿಂಸೆಯನು ತಳ್ಳಿನಿಂತು। ಬಸವ ನಡೆದ ನುಡಿ ದಯವೆ ಧರ್ಮ ಗುಡಿಗಳಸವಾಗಲಿಂತು। ಗಾಂಧಿರೂಪ ಅಪರೂಪ ದೀಪ ಭಾರತವ ಬೆಳಗಿತಿಂತು॥ ಜಾತಿಕುಲಕೆ ದುರ್ನೀತಿ ಬಲಕೆ ನೆಲೆಯಿಲ್ಲವೆಂದು ಸಾರಿ। ದೇವಸುತನು -ನಮ್ಮಾತ್ಮಕವನು ತನ್ನಂತರಂಗ ತೋರಿ। ದೀನದಲಿತರುದ್ಧರಣ -ಹರಣ ಮುಡಿಪಿಟ್ಟ ದೇಹ ಕರಗಿ। ಯೋಗಿ ತ್ಯಾಗಿ। ಮನ ಬುದ್ಧಿಮಾಗಿ ಪದ್ಮಯುಗ್ಮಕೆರಗಿ ಬಾಗಿ॥ ಅವನೆ ಇಲ್ಲ ಇನ್ನುಳಿದುದಿಲ್ಲ ವೀ ಮಾತು ನಮಗೆ ಹೊಲ್ಲ। ಅಳಿದುದಿಲ್ಲ ಅವನಿತ್ತ ಸೊಲ್ಲ ಜಗಜೀವಿ ಜೀವಿಬಲ್ಲ। ಕರುಣೆಯೊಡಲು ಹೆಗ್ಗಡಲು ತುಂಬಿದೆದೆಯಲ್ಲು ತೇಲುತಿಹನು। ಚೆನ್ನವಾಗಿ ಮನ ಘನ್ನವಾಗಿ ಬಾಳೆಂದು ಹರಸುತಿಹನು॥ ಯಾವ ಕೈಯು ಗುಂಡಿಕ್ಕಿ ಕೊಂದೆನೆನ್ನುವುದು ತೆರೆದು ತೋರು। ಅದಕೆ ಕೈಯ ಮುಗಿದಿತ್ತು ಮೈಯನೆಡೆಗೊಟ್ಟ ಪಾಪಭೀರು। ಇದ್ದರೇನೊ ಇನ್ನಿರುವರೇನೊ ಇಂತಿಂತು ಬಾಳಿದವರು? ಆ ಕಣ್ಣ ಕಾಂತಿ ನಗೆ ಮೊಗದ ಶಾಂತಿ। ನಿಸ್ಸೀಮ ಪುರುಷರಿವರು॥ ಕಣ್ಣೀರ ಕಣವನೊಡೆದೊಡೆದು ನೋಡು ಅಲ್ಲಲ್ಲಿ ಅವನ ನಿಲವು। ನಿಟ್ಟುಸಿರ ತೆರೆಯ ಮೆರೆಯಲ್ಲಿ ನಿಂತ ಆ ಮೊಗದ ಒಲವೆ ಬಲವು। ಜಡದ ತಿರೆಯ ಹರ್ಷಾಂತ ಝರಿಯ ನಾದದಲಿ ಅವನ ಗೆಲವು। ನಮ್ಮ ಪಾಡು ಬಿಡುಗಡೆಯ ಹಾಡು ಅವನಾತ್ಮ ತಳೆದ ಛಲವು॥ ದಾಸ್ಯನೊಗವ ಕಿತ್ತೊಗೆದ

ಯುಗವ ನಿರ್ಮಿಸಿದ ಸಹನೆ ಬಲ್ಪು। ಹಗೆಯ ತಿದ್ದಿ ಜನಮನವ ಮಿದ್ದಿ ನವಸೃಷ್ಟಿಗೈದ ಬಾಪು। ಹೊಸತು ಯುಗವು ಜಯಗಾಂಧಿ ಯುಗವು ಇನ್ನಾವುದಿದಕೆ ಸೊಗವು? ಭರತಮಾತೆ ಹೆಸರಿಡುವಳಿದಕೆ ಯುಗವಿದುವೆ ಗಾಂಧಿಯುಗವು॥

ಬಚ್ಚೋಂ ಕೀ ಆಂಖೋಂ ಕೇ (ಹಿಂದಿ) **ರಾಗ: ಮೋಹನ**

ಬಚ್ಚೋಂ ಕೀ ಆಂಖೋಂ ಕೇ ತಾರೆ। ದುಃಖಿಯೋಂ ಕೆ ಏ ಸದಾ ಸಹಾರೆ। ಸಬ್ ಧರ್ಮೋಂ ಕೆ ಪ್ಯಾರೆ ಮೋಹನ್। ಸಬ್ ಕರ್ಮೋಂ ಮೇ ನ್ಯಾರೆ ಮೋಹನ್॥1॥ ಕುಟೀ ಕುಟೀ ಕೀ ಆಶಾ ಬಾಪೂ ಮಹಲೋಂ ಕೀ ಭೀ ಆಶಾ ಬಾಪೂ। ಆಜಾದೀ ಕೇ ನಾಯಕ್ ಬಾಪೂ। ಸತ್ಯಾಗ್ರಹ್‌ಕೆ ಪ್ರೇರಕ್ ಬಾಪೂ॥2॥ ಭಾರತ್ ಕೀ ಕಿಸ್ಮತ್ ಕೀ ನೈಯ್ಯಾ ಕೆ ಥೆ ಬಾಪೂ ಅಮರ್ ಖಿವೈಯ್ಯಾ ಮನುಜ್ ನಹೀಂ ಮಾಧವ್ ಥೆ ಬಾಪೂ। ಮರ್ಯಾದಾ ಪುರುಷೋತ್ತಮ್ ಬಾಪೂ॥3 ಸಬಕೆ ಸಂಕಟ್ ಖುದ್ ಹರ್‌ತೆ ಥೆ ಮುಸ್ಕಾಕರ್ ವೆ ಸಬ್ ಸಹ್‌ತೆ ಥೆ ಜಬ್ ತಕ್ ಧರ್‌ತೀ ಅಟಲ್ ರಹೇಗಿ ಗಾಂಧೀ ಕೀ ಸ್ಮೃತಿ ಅಮರ್ ರಹೇಗೀ॥4

ಬಾಪೂಜೀ ಏ ಪ್ರಕಟಕಿಯೆ **ರಾಗ: ಕುರಂಜಿ**

ಬಾಪೂಜೀ ಏ ಪ್ರಕಟಕಿಯೆ। ಭಾರತ ಭಾಗ್ಯವಿಧಾಯಕ ಹೋ॥ಪ॥ ತ್ರೇತಾಯುಗಮೇ ರಾಮ ಥಾ। ದ್ವಾಪರಯುಗಮೇ ಕೃಷ್ಣ ಥಾ। ಏ ಕಲಿಯುಗಮೇ। ಬಾಪೂ ಥಾ। ಭಾರತ ಭಾಗ್ಯ ವಿಧಾಯಕ ಹೋ॥1॥ ರಾಮ ಕೋ ಹಾತೋಂ ಧನಸ್ಸು ಥಾ। ಕೃಷ್ಣಕೆ ಹಾಥೋಂ। ಮುರಳೀ ಥಾ। ಬಾಪುಕಿ ಹಾಥೋಂ। ಚರಕ ಥಾ। ಭಾರತ ಭಾಗ್ಯ ವಿಧಾಯಕ ಹೋ॥2॥ ರಾಮಕಿ ನಾರಿ ಸೀತಾಥೀ। ಕೃಷ್ಣಕಿ ನಾರಿ ರಾಧಾ ಥೀ। ಬಾಪೂಕಿ ನಾರಿ ಕಸ್ತೂರಿ ಥೀ। ಭಾರತ ಭಾಗ್ಯವಿಧಾಯಕ ಹೋ॥3॥ ರಾಮಕೆ ಸಾಥ್ ಲಕ್ಷ್ಮಣ ಥಾ। ಕೃಷ್ಣಕೆ ಸಾಥೋ ಯಾದವ ಥಾ। ಬಾಪೂಕೆ ಸಾಥ್ ಪಂಡಿತ ಥಾ ಭಾರತ ಭಾಗ್ಯ ವಿಧಾಯಕ ಹೋ॥4॥

ಬುದ್ಧಿಶಾಲಿ ನಮ್ಮ ಗಾಂಧೀಜಿ **ರಾಗ: ಮೋಹನ**

ಬುದ್ಧಿಶಾಲಿ ನಮ್ಮ ಗಾಂಧೀಜಿ ತತ್ವಜ್ಞಾನಿ ನಮ್ಮ ಗಾಂಧೀಜಿ। ಶಕ್ತಿವಂತ ಜನರ ಮನವ ಯುಕ್ತಿಯಿಂದ ಸೆಳೆದು ತಂದ। ಶಾಂತಿದೂತ ನಮ್ಮ ಗಾಂಧೀಜಿ॥1॥ ಬ್ರಿಟಿಷರನ್ನು ಹೊಡೆದು ಅಟ್ಟಿದಾ। ಬಂಧನವನು ಸಡಿಲಗೊಳಿಸಿದಾ। ಒಂದು ಊರ ಬಿಡದೆ ತಿರುಗಿ। ಜ್ಞಾನದಾ ನುಡಿಯನರುಹಿ। ಸ್ವತಂತ್ರವನ್ನೆ ಗಳಿಸಿ ಬೆಳೆಸಿದಾ॥2॥ ಒಂದು ದಿನ ನಮ್ಮ ಗಾಂಧೀಜಿ। ಎಂದಿನಂತೆ ಮಂದಿರಕೆ ಹೋಗೀ। ಗೋಡ್ಸೆಯಿಂದ ಏಟುತಿಂದು ರಾಮರಾಮ ಎಂದುಕೂಗಿ ಅಮರರಾದ ನಮ್ಮ ಗಾಂಧೀಜಿ॥3॥

ಭಾರತದ ಕಣ್ಮಣಿ ನೀ ಪೂಜ್ಯ **ರಾಗ:ಸಿಂಧೂಭೈರವಿ**

ಭಾರತದ ಕಣ್ಮಣಿ ನೀ ಪೂಜ್ಯ ಮಹಾತ್ಮ। ಎಲ್ಲಿ ಪೋದೆ ಎಮ್ಮ ನಗಲಿ ಗಾಂಧಿ ಮಹಾತ್ಮ॥ಪ॥ ಸ್ವಾತಂತ್ರ ಸಮರದಲ್ಲಿ ಭಾಗವಹಿಸಿ। ಸ್ವಾತಂತ್ರ್ಯಕ್ಕಾಗಿ ನೀನು ತನುವನು ನೀಡಿ। ಸ್ವಾತಂತ್ರ್ಯ ತಂದು ಕೊಟ್ಟು ಅಗಲಿ ಪೋದೆಯಾ। ಪೂಜ್ಯಪಿತ ಗಾಂಧಿ ನೀನು ಹೊರಟು ಹೋದೆಯಾ॥1॥ ಅಹಿಂಸೆ ಎಂಬ ಅಸ್ತ್ರದಿಂದಾ ಜಗವನು ಜಯಿಸಿ। ಶಾಂತಿ ಸಹನೆ ಗುಣಗಳಿಂದ ಅಚ್ಚರಿಗೊಳಿಸಿ। ಸಮತೆ ಎಂಬ ಬೀಜವನ್ನು ಜಗದೊಳು ಬಿತ್ತಿ। ಲೋಕವೆಲ್ಲ ಹೊಗಳುತಿರಲು ಕಣ್ಮರೆಯಾದೆ॥2॥ ದೇಶದೇಳ್ಗೆಗಾಗಿ ಉಪವಾಸಮಾಡಿ। ದೇಶಸೇವೆಗಾಗಿ ನೀನು ಎಲ್ಲವ ತೊರೆದೆ। ದೇಶಕ್ಕಾಗಿ ಗುಂಡಿನೇಟು ಧೈರ್ಯದಿ ತಿಂದೆ। ಧೀರವೀರ ಪೂಜ್ಯಪಿತ ನಮಿಸುವೆ ನಿನಗೆ॥3॥

ಮಕ್ಕಳ ತಾತ ಹರಿಜನ ಪ್ರೀತ **ರಾಗ: ತಿಲಂಗ್**

ಮಕ್ಕಳ ತಾತ ಹರಿಜನ ಪ್ರೀತ ಧರೆಯೊಳು ಸಾರಿದ ಭಗವದ್ಗೀತ। ಉತ್ತಮ ಭಾರತ ಕುಲಸಂಭೂತ ಸುಜನಪೂಜಿತ ಗಾಂಧಿತಾತ॥1॥ ಗುಂಡಿನ ಮನೆಯೊಳು ನುಗ್ಗಿದ ತಾತ। ನೀಡಿದ ಸ್ವತಂತ್ರದ ಸ್ಫೂರ್ತಿಯದಾತ। ಜಗ್ಗದ ಬ್ರಿಟೀಷರ

ಬಗ್ಗಿಸಿದಾತ। ಸ್ವರ್ಗದ ಪ್ರೀತಿಯ ತೋರಿದ ತಾತ।।2।। ಚಪಲ ಜನಾಂಗವ ಜಯಿಸಲು ತಾತ। ಉಪವಾಸವನಾಚರಿಸಿದನಾತ। ಸೆರೆವಾಸಗಳನು ಸಂತೋಷದಿ। ಕಳೆದ ನಮ್ಮೀ ಗಾಂಧಿತಾತ।।3।। ಸಂದ ಸ್ವತಂತ್ರವ ತಾನರಿಯದ ತಾತ। ಪ್ರಾರ್ಥನ ಸಭೆಗೆ ನಡೆದನು ತಾತ। ತಾರಕ ರಾಮನ ಮಂತ್ರವ ಜಪಿಸುತ। ಸ್ವರ್ಗವ ಸೇರಿದ ಗಾಂಧಿ ತಾತ।।4।।

ಮಹಾತ್ಮಗಾಂಧಿ ಗುಂಡು ವೆಡಿಯಾಲೆ (ತಮಿಳು) ರಾಗ:ಸಾರಂಗ

ಮಹಾತ್ಮಗಾಂಧಿ ಗುಂಡು ವೆಡಿಯಾಲೆ। ಉಯಿರ್ ತೊರಂದಾರೆ। ಹಾಹಾ। ಉಯಿರ್ ತೊರಂದಾರೆ।।ಪ।। ದೇಶತಿನ್ ಮಕ್ಕಳೆಲ್ಲ ತಯಂಗಿ। ತಯಂಗಿ। ಅಳುಗಿರಾರೆ।ಉನ್‌ಪಾಶತ್ತೈ ಮರಕ್ಕ ಮುಡಿಯಾಮೇ। ತುಡಿಕ್ಕುರಾರೆ।।1।। ಆಯಿರತ್ತಿ। ತೊಣ್ಣೂರ್। ನಾರ್‌ಪತ್ತೆಟ್ಟಾಂ। ಜನವರಿಯಿಲೆ ಮುಪ್ಪದಾಂ। ತೇದಿ ಮಾಲೆ। ಐಂದು ಮಣಿ ನೇರತ್ತಿಲೇ।।2।। ಹಿಂದೂ ಮಹಾಸಭೆಯಿಲ್ ಇರಂದ ನಾಥೂರಾಮನ್। ವಂದು ಮಂದಿಯ ಪೋಲ್। ತಂತ್ರಮಾಯ್। ರಿವಾಲ್ವರಿಲೇ ಸುಟ್ಟಾನೆ।।3।। ಮಂತ್ರಿ ಮಾರನೈವರುಂ। ಮಿಯಂಗಿಮನಂ। ಕೊದಿಕ್ಕೈ ಪಾರಿನಿಲ್ ನೀ ದೈವಿಯತ್ತು ಪಾಳು ಯಮನ್ ಮಂದಿರತ್ತುಕ್ಕು ಪೋನಾಯೇ।।4।।

ಮಹಾತ್ಮಾಭಿರಾಮ ಅಹಿಂಸಾವಾದಿ ರಾಗ: ಶುಭಪಂತುವರಾಳಿ-ರೂಪಕತಾಳ

ಮಹಾತ್ಮಾಭಿರಾಮ ಅಹಿಂಸಾವಾದಿ ಶಾಂತಿದಾಯಕ ಮಹಾತ್ಮಾಭಿರಾಮ ಗಾಂಧೀ।।ಪ।। ಅಖಿಲ ಭಾರತ ಸ್ವಾತಂತ್ರ್ಯದಾಯಕ ಹರಿಜನೋದ್ಧಾರಕ ರಾಮಭಕ್ತ।।ಅ.ಪ।। ಸತ್ಯಾಗ್ರಹ ಚಾಲಕ ಬಹುಜನ ಪ್ರೀತಿ। ಭಕ್ತಿ ಸ್ವರೂಪ ಶ್ವೇತ ವರ್ಣೀಯ ಉಚ್ಚಾಟಕ ನಮೋ ನಮೋ ಬಾಪು ಪಿತ।।

ಮಹಾತ್ಮನಹುದೋ3 ಮಹಾತ್ಮಗಾಂಧಿ ರಾಗ: ಸಾರಂಗ

ಮಹಾತ್ಮನಹುದೋ ಮಹಾತ್ಮನಹುದೋ। ಮಹಾತ್ಮನಹುದೊ ಮಹಾತ್ಮಗಾಂಧಿ।।ಪ।। ಸಟೆಯನೊರಿಸಿ ಮೆಲುದಿಟನುಡಿ ನುಡಿದಾ। ಹಟವನೆ ನಡೆಸಿದ ಏಸುಕ್ರಿಸ್ತ।।1।। ಎಡಕೆನ್ನೆಯ ತಟ್ಟಿದರೆ ರೇಗದೆ। ಬಲಕೆನ್ನೆಯ ನೀಡಿದ ಪೈಗಂಬರ।।2।। ಹುಟ್ಟ ಮೈಲಿಗೆಯ। ಹುಟ್ಟನು ಹುರಿಯಲು ಹುಟ್ಟಿಬಂದಿರುವ ಬಸವೇಶ್ವರ।।3।। ಕೊನೆಯ ನಿರ್ವಾಣ ಮೆಟ್ಟನು ಮುಟ್ಟಿದ। ಮನಮೋಹನ ಜಿನ ಮಹಾವೀರ।।4।।

ಮಹಾನ್ ಗಾಂಧಿ ಮಹಾನ್ (ತಮಿಳು) ರಾಗ:ಮಾಂಡ್

ಮಹಾನ್ ಗಾಂಧಿ। ಮಹಾನ್ ವಾಳ್ಗ ತ್ಯಾಗಿಯೋಮೇ। ಭೂಲೋಕಂಮೇದಿಲೆ।।ಪ।। ದೇಶೀಯ ಸೇವಾಗುರು। ದೈವಿಯಾ। ಪೂಜಾಗುರು। ಜಗಸೇನೇಯೇ ಪುರೈಂದಾ। ಜಗಜೋದಿಯಾಯ್। ನಿರೈಂದಾ ಸುಗವಾಳ್ವಯೇ ಮೆರೈಂದಾ। ಸುಸ್ವರಾಜ್ಯವಾಳ್ದೈ ತಂವ।।1।। ಕೈ ರಾಟಿಯೇ ಆಯುಧಂ। ಕದರಾಟೆಯೇ ಶೋಭಿತಂ। ಜಯವಂದೇ ಮಾತರಂ। ಜಯ ಭಾರತ ಮಣಿ ಕುಡಿ ಶಿರಂ ಓಂಗಿ ವಾಳ್ಗವೇ ಜಯ। ವಂದೇ ಮಾತರಂ।।2।।

ರಕ್ತನಾಳಗಳಲ್ಲಿ ಗಂಗೆ ಹರಿದಾಡಿತ್ತು ರಾಗ: ಮೋಹನ

ರಕ್ತನಾಳಗಳಲ್ಲಿ ಗಂಗೆ ಹರಿದಾಡಿತ್ತು। ಹೃದಯ ಸಾಗರವನ್ನೇ ಮುಟ್ಟಲಿಕ್ಕೆ ಇಡಿ ಹಿಮಾಚಲ ಶಿಖರ ಮಿದುಳನ್ನೆ ಸೇರಿತ್ತು। ಭೂಮಂಡಲವ ತಿರೆಗೆ ಕಟ್ಟಲಿಕ್ಕೆ।।1।। ಕೋಟಿಜನತೆಯ ಕಣ್ಣನೀರು ಮೈಬೆವರಾಗಿ ರೋಮ ರೋಮಗಳಿಂದ ಸುರಿಯುತಿತ್ತು। ಕೋಲನೂರಿದ ಕೈಯ ಹಿಡಿಯೊಳಗೆ ತ್ರಿಭುವನ। ಕೋಲ್ಮಿಂಚುಗಳ ಶಕ್ತಿ ಅಡಗಿಇತ್ತು।।2।। ಶುಭ್ರಗಗನಾಂಬರವು ಹೊದ್ದುಕೊಳ್ಳುವ ಶಾಲು ಮುಗುಳುನಗೆ ಚಂದಿರನ ಮೀರಿ ಬೆಳಗೆ। ಅಮರ ಲೋಕದ ದಿವ್ಯ ಜ್ಯೋತಿಯೇ ಹೊಳೆ ಹೊಳೆದು ಭಾರತದ ಬೆಳಕಾಗಿ ಬಂತು ಇಳೆಗೆ।।3।।

ಶಾಂತಿನಿಲಯ ಸದಯ ಹೃದಯ **ರಾಗ: ಶ್ರೀ**

ಶಾಂತಿನಿಲಯ ಸದಯ ಹೃದಯ ಗಾಂಧಿತಾತನೆ॥ಪ॥ ಮಾತೃ ಭೂಮಿ ದಾಸ್ಯ ಹರಿಸಿ। ಭ್ರಾತೃ ಸೌಖ್ಯವನ್ನು ಸೃಜಿಸಿ। ಖ್ಯಾತಿಗೊಂಡ ಮೌನಯೋಗೀ॥1॥ ಸತ್ಯ ಧರ್ಮ ಜ್ಞಾನ ಸಿಂಧು ಅಮರನಾದೆ ದೇಶ ಬಂಧು। ನಿತ್ಯ ರಾಮನಾಮಪ್ರಿಯ॥2॥

ಶ್ರೀ ಗಾಂಧೀಜಿ ಜಗಮೇ ಪ್ರಕಟ (ಹಿಂದಿ) **ರಾಗ:ಮೋಹನ**

ಶ್ರೀ ಗಾಂಧೀಜಿ ಜಗಮೇ ಪ್ರಕಟ ಹುಯೇ॥ಪ॥ ಶ್ರೀರಾಮ ಕೀ ಪತ್ನಿ ಸೀತಾಜೀ। ಶ್ರೀಕೃಷ್ಣಕೀ ಪತ್ನಿ ರಾಧಾಜೀ। ಶ್ರೀ ಗಾಂಧೀಜಿ ಕೀ ಪತ್ನಿ ಕಸ್ತೂರಿ ಜೀ॥1॥ ಶ್ರೀರಾಮ ಕೇ ಹಾಥ್ ಮೇ ಧನಸ್ ಹೈ। ಶ್ರೀ ಕೃಷ್ಣ ಕೇ ಹಾಥ್ ಮೇ ಮುರಲೀ ಹೈ। ಶ್ರೀ ಗಾಂಧೀಜಿ ಕೇ ಹಾಥ್ ಮೇ ಚರಕ ಹೈ॥2॥ ಶ್ರೀರಾಮ ಕೇ ಸೈನ್ಯ ವಾನರ ಹೈ। ಶ್ರೀ ಕೃಷ್ಣ ಕೇ ಸೈನ್ಯ ಬಲರಾಮ ಹೈ। ಶ್ರೀ ಗಾಂಧೀಜಿ ಕೇ ಸೈನ್ಯ ಕಾಂಗ್ರೆಸ್ ಹೈ॥3॥

ಹಮ್ ಸಬ್ ಕೆ ಗಾಂಧೀಜಿ (ಹಿಂದಿ) **ರಾಗ: ಮೋಹನ**

ಹಮ್ ಸಬ್ ಕೆ ಗಾಂಧೀಜಿ। ಹಮ್ ಸಬ್ ಕೆ ಏ ಬಾಪೂಜಿ॥ ಹಮ್ ಸಬ್ ಕೇ ಏ ಪ್ಯಾರೇ ಬಾಪೂಜಿ॥1॥ ಸಾರೆ ಜಗಸೆ ನ್ಯಾರೇ ಬಾಪೂ। ಕಭೀ ನ ಹಾರೇ ಹಿಮ್ಮತ್ ಬಾಪೂ। ಭಾರತ್ ಕೆ ಏ ದೀಪಕ್ ಬಾಪೂಜಿ॥2॥ ಅಂಗ್ರೇಜೋಂ ಕೊ ಭಗಾಯೆ ಬಾಪೂ। ಸಬ್ ಕೋ ಗಲೇ ಲಗಾಯೆ ಬಾಪೂ। ನೇಕ್ ರಾಹ್ ಬತಲಾಯೇ ಬಾಪೂಜಿ॥3॥ ಕಿತನೆ ಸುಂದರ್ ಪ್ಯಾರೇ ಬಾಪೂ। ಭಾರತ್ ಮಾಂ ಕೆ ಪ್ಯಾರೇ ಬಾಪೂ। ಶಾಂತಿದೂತ್ ಏ ಪ್ಯಾರೇ ಬಾಪೂಜಿ॥4॥

ಹರಹರಾ ಹರಣ ಹೋಯ್ತೋ **ರಾಗ: ಶುಭಪಂತುವರಾಳಿ**

ಹರಹರಾ ಹರಣ ಹೋಯ್ತೋ। ಮಹಾತ್ಮ ಹರಹರಾ ದೇಹ ಬಿತ್ತೆ॥ಪ॥ ನಮಗಾಗಿಯೆ ಜೀವಿಸಿ। ಪುಣ್ಯಾತ್ಮ ನಮಗಾಗಿಯೆ ಜೀವಿಸಿ। ನಮಗಾಗಿ ಶ್ರಮವಹಿಸಿ। ಎದೆಯ ನೆತ್ತರ ಸುರಿಸಿ। ನಮಗಾಗಿ ಪ್ರಾಣ ಹೋಯ್ತೆ॥1॥ ಆ ಮಹಾಗುಂಡು ಬಡಿಯೆ ಎದೆಯಲ್ಲಿ ಸ್ವಾಮಿ। ಸಹಿಸಿದೆಯಾ ವ್ಯಥೆಯಾ। ರಾಮ ರಾಮಾ ಎನುತ। ಭೂಮಿಯಲ್ಲಿ ಬೀಳುತ್ತ ತಾಮಸಗೆ ದೇಹವಿತ್ತೆ॥2॥ ರನ್ನಗನ್ನಡಿ ಒಡೆದರೊ ನಮ್ಮವರು। ಸ್ವರ್ಣಕಲಶವ ಕಡೆದರೊ। ಪೂರ್ಣ ನೊರೆಹಾಲಿನಲಿ। ಮಣ್ಣುಪ್ಪು ಹಾಕುತಲಿ ಅನ್ಯಾಯವಾ ಮಾಡುತೆ॥3॥ಹಂಸವೇ ಹಾರಿಹೋದೆ। ನೀ ಪರಮ ಹಂಸರೂಪದಲ್ಲಡಗಿದೆ। ಹಿಂಸಾಸ್ತ್ರಕ್ಕೆದೆಗೊಟ್ಟೆ। ಅಹಿಂಸಾಸ್ತ್ರ ಹೂಡಿದ ಪ್ರಶಾಂತಾರ್ಹ ವರವಿಭೂತ॥4॥ ಎತ್ತ ಪೋದೆಯೊ ಜೀವವೆ। ಭೌತಿಕದ ಸತ್ಯ ಜೀವದ ದೇಹವೆ। ಪುತ್ಥಳಿಯ ಬಾಲಕಾ। ಕಸ್ತೂರಿ ತಿಲಕ। ನಿತ್ಯ ನೀನರಿಯದಂತೆ॥5॥ ಅರಗಿಣಿಯ ಗೋಣ್ ಮುರಿದರೊ। ನಮ್ಮವರು ಭರದೆ ಪುಕ್ಕವ ತರೆದರೊ। ಈ ತೆರದ ಮಾನ್ಯತೆ। ನ ಭೂತೋ ನ ಭವಿಷ್ಯತಿ। ಜಾತಸ್ಯ ಮರಣಂ ಧ್ರುವಂ॥6॥ ಧೂಮಕೇತುವು ಮೂಡಿತು। ದಕ್ಷಿಣದಿ ವ್ಯೋಮ ಮಾರ್ಗದಲೋಡಿತು। ಭೂಮಿ ಗಡಗಡ ನಡುಗಿ ಸೋಮ ರವಿ ಕಲಿ ನಡುಗಿ। ಕ್ಷೇಮಕರವಾಗಲಿಲ್ಲ॥7॥ ಎಲ್ಲಿ ಹೋದರೆ ಸಿಕ್ಕುವಿ। ಧರ್ಮಾತ್ಮ ಎಲ್ಲಿ ಹೋದರೆ ದಕ್ಕುವಿ। ಎಲ್ಲ ಮಾನವ ಹೃದಯದಲ್ಲಿರುವಿ। ನಿಲ್ಲು ನೋಡುವೆನು ಮೂರ್ತಿ ಹರಹರಾ॥8॥ ಉತ್ತರಾ ನಕ್ಷತ್ರದಿ ಬಹುದಿನ। ದಲೋತ್ತರದ ನಿಶಿ ಸಮಯದೆ । ಉತ್ತರ ಧ್ರುವಪದವನಿತ್ತನೇ। ಹರಿಸರ್ವಜಿತ್ ಪುಷ್ಯ ವದ್ಯ ಪಂಚಮೀ। ಹರಹರಾ ॥9॥

ನೆಹರು

ಇವನೇ ನಮ್ಮ2 ಭಾರತ ಬಡಜನ **ರಾಗ: ತಿಲಂಗ್**

ಇವನೇ ನಮ್ಮ ಇವನೇ ನಮ್ಮ ಭಾರತ ಬಡಜನ ಸೇವಕನಿವನೇ। ವೀರ ಜವಹಾರ ಲಾಲನಿವನೇ॥ಪ॥ ಮನೆಮಠ ಮಡದಿಯ ತ್ಯಾಗಮಾಡಿ ದೇಶಕೆ ದುಡಿದವನಿವನೇ। ಮಹಾತ್ಮಗಾಂಧಿಯ ಪರಮಾನಂದದ ನಿಜ ಶಿಷ್ಯ

ಧನಂಜಯನಿವನೇ॥1॥ ಜಗದ ಚರಿತೆಯನು ಸೆರೆಮನೆಯಲ್ಲೇ ಕಾಲವ ಕಳೆಯದೆ ಬರೆದವನಿವನೇ। ವಿಶ್ವ ರಾಷ್ಟ್ರ ಸ್ಥಿತಿ ಕಂಡವನಿವನೇ। ವಿಶ್ವ ಜನಾಂಗದ ಸಖನಿವನೇ॥2।. ಸ್ವತಂತ್ರ ಭಾರತ ಪ್ರಜಾನವೋದಯ ಶಿಸ್ತು ಸಂಯಮದ ಸುಮಂತ್ರಿ ಇವನೇ। ಏಷ್ಯಾಖಂಡವೆ ಮತ್ತೆ ತಲೆಯೆತ್ತೆ ಆಶಾ ಜ್ಯೋತಿಯು ಇವನೇ॥3॥

ಚಾಚಾ ನೆಹರು ಹಮೆ ಸಿಖಾ ದೊ (ಹಿಂದಿ) **ರಾಗ: ವಲಚಿ**

ಚಾಚಾ ನೆಹರು ಹಮೆ ಸಿಖಾ ದೊ ಕಾಮ್ ದೇಶ್ ಕೆ ಆನಾ। ಚಾಚಾ ನೆಹರು ಹಮೆ ಸಿಖಾ ದೊ ಜೀವನ್ ಸಫಲ್ ಬನಾನಾ॥1॥ ಚಾಚಾ ನೆಹರು ಹಮೆ ಸಿಖಾ ದೊ ಶಾಂತಿ ಪೂರ್ವಕ್ ಜೀನಾ। ದುಃಖ ಸಂಕಟ್ ಬಾಧಾ ಎ ಝೇಲೇಂ ಮುಖ್ ಸೆ ನಿಕಲ್ ಸೀನಾ॥2॥ ಚಾಚಾ ನೆಹರು ಹಮೆ ಸಿಖಾದೊ ಕರ್ಮಶೀಲ್ ನಿತ್ ರಹನಾ। ಜೀವನ್ ಕೆ ದುಃಖ್ ಔರ್ ದರ್ದ್ ಹಸತೆ ಹಸ್‌ತೆ ಸಹನಾ॥3॥ ಅಮರ್‌ಲೋಕ್‌ಕೆ ವಾಸಿ ಚಾಚಾ ಹಮ್‌ಕೊ ಇತ್‌ನಾ ಬಲ್‌ದೊ। ಪದ್ ಚಿನ್ಹೋಂಪರ್ ಚಲೆ ತುಮ್ಹಾರೆ ಇತ್‌ನಾ ಸಾಹಸ್ ಭರ್‌ದೊ॥4॥

ಜಯ ಜವಹರಲಾಲ ಭಾರತೀಪ್ರಿಯ **ರಾಗ:ಅಭೇರಿ**

ಜಯ ಜವಹರಲಾಲ। ಭಾರತೀ ಪ್ರಿಯ ಬಾಲಾ। ಜಯತು ಗಾಂಧಿ ಪ್ರೇಮ। ಹೃದಯ ಮಂದಿರ ಲೋಲಾ॥ಪ॥ ಮಾನ್ಯ ಪಂಡಿತ ಮೋತಿಲಾಲ ನೆಹರು ಕುಮಾರ। ಪುಣ್ಯ ಸತಿ ಕಮಲಾದೇವಿ ಹಾರ ಮಂಗಳಕಾರ। ಅನ್ಯ ದರ್ಪಕುಠಾರ ಭಾರತ ಮಹಾವೀರ। ಸ್ವರ್ಣ ಭೂಸ್ವತಂತ್ರ್ಯ ದೀರ ವಿಜಯ ಗಂಭೀರ॥1॥ ದೇವೇಂದ್ರ ಸುತನಂತೆ ದಶರತಾತ್ಮಜನಂತೆ। ಶ್ರೀವಿಲಾಸದೊಳೆಸೆವ ಸಂಪದವ ತೊರೆದಿರುತೆ। ಸರ್ವವನು ಮಾತೃಭೂಮಿಯ ಸೇವೆಗರ್ಪಿಸುತೆ। ಸಾವಿಗಂಜದೆ ದುಡಿವ ನರನಾರು ನಿನ್ನಂತೆ॥2॥ ಆ ಮಹಾತ್ಮ ಹುತಾತ್ಮನಾತ್ಮ ಪಥದಲಿ ನಲಿದು। ಪ್ರೇಮದಿಂ ಭಾರತವನಾಳ್ವ ಭಾರತವತಳೆದು। ರಾಮರಾಜ್ಯದ ಯಶವ ಸಾಧಿಸು ಚಿರಕಾಲದಲಿ। ಕ್ಷೇಮದಿಂದಿರು ವಿಜಯಲಕ್ಷ್ಮಿಯ ಒಲವಿನಲಿ॥3॥

ನೆಹರೂ ತುಮ್‌ನೆ ಸಮ್ಮಾನ್ (ಹಿಂದಿ) **ರಾಗ: ಕಲಾವತಿ**

ನೆಹರೂ ತುಮ್‌ನೆ ಸಮ್ಮಾನ್ ದಿಯಾ। ಧರತೀ ಕೋ ಪ್ರಾಣ್ ಪ್ರದಾನ್ ಕಿಯಾ॥ಪ॥ ಹೇ ವೀರ್ ಜವಾಹರ್। ತುಮ್‌ನೆ ದೀ ಜನ್-ಜನ್ ಕೋ ಸಾಂಸ್ ನಯೀ ನ್ಯಾರೀ। ತವ್ ಕರ್ಮೋಂ ಸೇ ಭಾರತ್ ಲಕ್ಷ್ಮೀ ಹೋ ಸಕೀ ಧನ್ಯ್। ಸಬ್ ಕೀ ಪ್ಯಾರೀ ಬಚ್ಚೆ-ಬಚ್ಚೆ ಕಾ ಪ್ಯಾರ್ ಜುಟಾ-ತುಮ್‌ನೆ। ಸಬ್‌ಕೋ ಮಧುದಾನ್ ದಿಯಾ॥1॥ ಬೇಡಿಯಾಂ ಕಾಟ್‌ಕರ್ ಮುಕ್ತ್ ಕಿಯಾ ಮಾತಾ ಕೋ ಚಿಂತಾ ಬಂಧನ್ ಸೇ, ತುಮ್‌ನೆ ಜನ್-ಜನ್ ಕೇ ಮಾನಸ್ ಕೋ ಭರ್ ದಿಯಾ ಸತ್ಯ್ ಕೇ ಚಂದನ್ ಸೇ, ಇಸ್ ಲಿಎ ವಿಶ್ವ್ ನೇ ಭಾರತ್ ಕೋ ನಕ್ಷೆ ಮೇ ಸಿರ್ ಕಾ ಸ್ಥಾನ್ ದಿಯಾ॥2॥ ನೆಹರೂ! ತಮ್ ನಹರ್ ಸುಧಾ ಕೀ ಹೊ ದೀನೋಂ ದಲಿತೋಂ ಕೇ ಬಾಂಧವ್ ಹೊ ಗಾಂಧೀ ತತ್ವೋಂ ಕೇ ದೀಪಕ್ ಹೋ ತುಮ್ ಶಾಂತಿದೂತ್ ಸುಂದರ್ ಶಿವ್ ಹೋ ಭಾರತ್ ಕೋ ಸ್ವರ್ಗ್ ಸಮಾನ್ ಬನಾ-ತುಮ್‌ನೇ ಉಸ್‌ಕೋ ಉತ್ಥಾನ್ ದಿಯಾ॥3॥ ಜಬ್ ತಕ್ ರವೀಂದ್ರ ನಭ್ ಪರ್ ಹೋಗಾ ತಾರೆ ಹೋಂಗೇ, ಗ್ರಹ್ ಮಂಡಲ್ ಮೇ। ತಬ್ ತಕ್ ನೆಹರೂ! ತವ್ ನಾಮ್ ಅಮರ್ ಸಮ್ಮಾನ್ ರಹೇಗಾ ಭೂತಲ್ ಮೇ ಅವತಾರ್ ಪುರುಷ್! ತುಮ್‌ನೇ ಸಬ್ ಕಾ ಪರಿಪೂರ್ಣ ಸಫಲ್ ಅರ್‌ಮಾನ್ ಕಿಯಾ ॥4॥

ಭಾರತಾಂಬೆ ಉದರದಲ್ಲಿ

ಭಾರತಾಂಬೆ ಉದರದಲ್ಲಿ ಪುಟ್ಟಿ ಬೆಳೆದ ವೀರನೇ। ಲೋಕಮಾನ್ಯ ನೆಹರು ನಿನಗೆ ವಂದಿಸುವೆನು ಹಿರಿಯನೆ॥ ಇದ್ದ ಭೋಗ ಭಾಗ್ಯವನ್ನು ದೇಶಕಾಗಿ ತ್ಯಜಿಸಿದೆ। ಜನರ ಹಿತವ ಸಾಧಿಸಲ್ಕೆ ಬಹಳವಾಗಿ ಶ್ರಮಿಸಿದೆ॥

ಹಮ್ ಸಬ್ ಕೆ ಹೈಂ (ಹಿಂದಿ) ರಾಗ: ಹಂಸಧ್ವನಿ

ಹಮ್ ಸಬ್ ಕೆ ಹೈಂ ಚಾಚಾ ನೆಹರು।।ಪ।। ಸಾರೇ ಜಗ್‌ಸೆ ನ್ಯಾರೇ ನೆಹರು। ಕಭೀ ನ ಹಾರೆ ಹಿಮ್ಮತ್ ನೆಹರು। ಭಾರತ್ ಕೆ ಹೈ ದೀಪಕ್ ನೆಹರು। ಕಿತನೇ ಸುಂದರ್ ಚಾಚಾ ನೆಹರು।।1।। ಪ್ರೇಮ್ ಪಾಠ್ ಸಿಖಲಾತೇ ನೆಹರು। ಸಬ್ ಕೋ ಗಲೇ ಲಗಾತೆ ನೆಹರು। ಶಾಂತಿ ದೂತ್ ಥೇ ಚಾಚಾ ನೆಹರು। ನೇಕ್ ರಾಹ್ ಬತಲಾತೇ ನೆಹರು।।2।।

ಅಂಬೇಡ್ಕರ್

ಅಮರ ವೀರ ಅಂಬೇಡ್ಕರ್ (ಲಾವಣಿ)

ಅಮರ ವೀರ ಅಂಬೇಡ್ಕರ ಸಮರಗೈದ ಅಂದು। ಸ್ವಾತಂತ್ರ್ಯ ಸ್ವಾಭಿಮಾನ ಸಮಾನತೆ ಗೆಂದು।।ಪ।। ದಲಿತರ ಪ್ರಗತಿಗೆ ಹಗಲಿರುಳು ದುಡಿದು। ಹಸನಾಗಿಸಿದೆ ಬಾಳು ಕೊನೆಗೂ ನೀ ಮಡಿದು। ಛಲದಿ ಎದುರೀಜಿದೆ ಸಮಸ್ಯೆಗಳ ಸಾಗರ। ಬೆಚ್ಚಿದರು ಗಾಂಧೀ ನೆಹರು ಸರದಾರ।।1।। ಜಾತಿವಾದಿ ಕುತಂತ್ರರು ವಿಷಬೀಜ ಬಿತ್ತಿ। ಆಧುನಿಕ ಮನುಪಟ್ಟ ನಿನಗೆ ಕಟ್ಟಿ। ದೇವರ ಅಸ್ತಿತ್ವವನೇ ಪ್ರಶ್ನಿಸಿದ ನಿನ್ನ। ದೇವರನ್ನಾಗಿಸಿ ಪೂಜಿಪರೋ ಈ ಜನ।।2।।ಸಂವಿಧಾನ ಶಿಲ್ಪಿಯೇ ಮಹಾಕ್ರಾಂತಿಕಾರ। ಕತ್ತಲೆ ಲೋಕದ ಜನಕೋಟಿ ನೇತಾರ। ನೊಂದವರ ಮನಮಿಡಿದ ಹೋರಾಟಗಾರ। ಚರಿತ್ರೆಯ ಪುಟಪುಟದಿ ನಿನ್ನನಾಮ ಅಮರ।।3।। ಶಿಕ್ಷಣ ಸಂಘಟನೆ ಹೋರಾಟ ಬೇಕೆಂದೆ। ನಿನ್ನ ನಂತರ ಉಳಿದದ್ದು ಘೋಷಣೆಯೊಂದೆ। ನಿನ್ನಲ್ಲಿರುವ ಗಟ್ಟಿತನ ಒಬ್ಬರಲಿಯೂ ಬರಲಿಲ್ಲ। ನಿನ್ನ ಕನಸು ನನಸಾಗಿಸೋ ಆಶೆಯೇ ನಮಗೆಲ್ಲ।।4।।

ಸ್ವತಂತ್ರ ದೇಶ ಭಾರತ ಕಂಡ ರಾಗ: ಕಾಪಿ

ಸ್ವತಂತ್ರ ದೇಶ ಭಾರತ ಕಂಡ ಪುಣ್ಯಪುರುಷ। ಈ ಶತಮಾನದ ಕೀರ್ತಿ ಕಳಸ ಬಾಬಾ ಸಾಹೇಬ ಅಂಬೇಡ್ಕರ್।।1।। ದೀನದಲಿತರಿಗೆ ಮನಮಿಡಿದ ದೇಶದ ಹಿತವ ಚಿಂತಿಸಿದ। ಸಂವಿಧಾನವನೆ ಇವ ಬರೆದ ಬಾಬಾ ಸಾಹೇಬ ಅಂಬೇಡ್ಕರ್।।2।। ಎಲ್ಲ ಧರ್ಮಗಳ ಪ್ರೀತಿಸಿದ ಸ್ವಂತ ಸುಖಗಳನೆ ಇವ ಮರೆತ। ಗ್ರಂಥಸರಸ್ವತಿ ಇವರಾಸ್ತಿ ಬಾಬಾಸಾಹೇಬ ಅಂಬೇಡ್ಕರ್।।3।।

ಸ್ವಾಗತ ಗೀತೆ

ಆನಂದದಿ ತಲೆ ಬಾಗುತ

ಆನಂದದಿ ತಲೆ ಬಾಗುತ ಬುಧಜನವೆಲ್ಲಕೆ। ಸ್ವಾಗತ ವೀಯುವೆವು।।ಪ।। ಮುಸುಕಿದೆ ಕತ್ತಲು। ಜ್ಯೋತಿಯ ನೇಸರ। ಎಸೆವನು। ಪೂರ್ವದ ಶಿಖರದಲಿ। ಹೊಸ ತೇಜದೊಳಗೆ ಬೆಳಗುವ ತಾಯಿಯ ಜಸದಲೆ ಆತ್ಮವ ಕರಗಿಸುತ। ಶಿಸ್ತನು ಕಲಿಸುತ ಐಕ್ಯತೆ ಬೆಳೆಸುವೆ ನಮ್ಮ ಸೇವಾದಳ।।1।।

ಕರುನಾಡಿಗೆ ಸ್ವಾಗತ ಕೋರುವೆವು ರಾಗ: ಮಾಂಡ್

ಕರುನಾಡಿಗೆ ಸ್ವಾಗತ ಕೋರುವೆವು ಸಂತಸ। ಕನ್ನಡದ ಮಕ್ಕಳು ಎಲ್ಲರೊಂದುಗೂಡುತ। ನಮ್ಮ ನಾಡು ಕನ್ನಡ ನಮ್ಮ ನುಡಿಯು ಕನ್ನಡ।।ಪ।। ಸಾಧು ಸಂತಜ್ಞಾನಿ ಶಿಲ್ಪಿ ಭಕ್ತ ಕವಿಗಳೆಲ್ಲರ। ಹಡೆದ ತಾಯಿ ಕನ್ನಡ ಪಡೆದ ಭೂಮಿ ಕನ್ನಡ।।1।। ನಾವು ಹುಟ್ಟಿ ಬೆಳೆದು ಬಾಳಿದಂಥ ನಾಡು ಕನ್ನಡ। ವೀರ ಧೀರ ಶೂರರ ದಾನಧರ್ಮ ಶೀಲರ।।2।। ಕನ್ನಡಾಂಬೆ ಪಾದದಲ್ಲಿ ನಮ್ಮ ಶಿರವನಿಡುವೆವು। ಕನ್ನಡಾಂಬೆ ಸೇವೆಗಾಗಿ ಟೊಂಕಕಟ್ಟಿ ದುಡಿವೆವು। ನಾವು ಹುಟ್ಟಿ ಬೆಳೆದ ನಾಡಿಗಾಗಿ ಪ್ರಾಣ ಕೊಡುವೆವು।।3।।